ಮಾನಸಿ

ತಿಂಗಳ ಪತ್ರಿಕೆ ನವಂಬರ್ - ಡಿಸೆಂಬರ್ : 199

☆ ರಾಜಕೀಯ ಮತ್ತು ಮಹಿಳೆಯರ ಪ್ರಶ್ನೆ

☆ ಮೀನುಗಾರಿಕೆಯಲ್ಲಿ ಮಹಿಳೆ

☆ ಲಿಂಗ ನಿರ್ಣಯಿಸುವ ತಂತ್ರಜ್ಞಾನ ಮತ್ತು ಸರ್ಕಾರದ ನೀತಿ

☆ ಸೌಂದರ್ಯ ಸ್ಪರ್ಧೆಯ ನಂತರ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 11 ಸಂಚಿಕೆ : 10-11

ನವಂಬರ್ - ಡಿಸಂಬರ್ : 1996

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ 3-00 ರೂ.

ವಾರ್ಷಿಕ ಚಂದಾ 25-00 ರೂ.

ಆಜೀವ ಚಂದಾ 300-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಮತ್ತೊಂದು 'ಮಿಸ್ ಇಂಡಿಯಾ' ಸ್ಪರ್ಧೆ ಬಂದು ಹೋಗಿದೆ. ಏನೂ ಸದ್ದು ಗದ್ದಲವಿಲ್ಲದೆ, ಪ್ರತಿಭಟನೆಗಳ ಸುದ್ದಿಯೇ ಇಲ್ಲದೆ ಕಿರೀಟ ತೊಟ್ಟುಕೊಂಡ ಬೆಂಗಳೂರಿನ ಕಾಲೇಜು ವಿದ್ಯಾರ್ಥಿನಿ 'ಮಿಸ್ ಯೂನಿವರ್ಸ್'ಗೆ ಹೋಗುವ ಸಿದ್ಧತೆಯಲ್ಲಿದ್ದಾಳೆ. ಕಳೆದ ವಿಶ್ವಸುಂದರಿ ಸ್ಪರ್ಧೆಯ (ಬೆಂಗಳೂರಿನ) ಸಮಯದಲ್ಲಿ ಬೆಳೆದು ಬಂದ ಅತ್ಯಂತ ತೀವ್ರ, ವ್ಯಾಪಕ ಪ್ರತಿಭಟನೆಯ ಕಾವೇ ಇನ್ನು ಆರದಂತಿರುವಾಗ, ಅದು ತನ್ನನ್ನೇನೂ ತಟ್ಟಿಲ್ಲ ಎಂದು ತೋರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಆದರೆ ಕಳೆದ ಬಾರಿ ಬೆಂಗಳೂರಲ್ಲಿ ರೂಪುಗೊಂಡ ಪ್ರತಿಭಟನೆ ಮಹತ್ವದ್ದು. ಯಾವುದೇ ಕಾರ್ಯಕ್ರಮ, ಪ್ರತಿಭಟನೆ ವೈಯಕ್ತಿಕ ಗುಂಪುಗಳ ಹಂತದಲ್ಲಿ ನಡೆದು ಹೋಗುವುದೇ ಬೆಂಗಳೂರಂತ ಊರಿನ ಯಾವತ್ತೂ ಜಾಯಮಾನ. ಹೀಗಿದ್ದಾಗ ವೈಯಕ್ತಿಕ ನೆಲೆಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುತ್ತಿದ್ದ ಭಿನ್ನ ಭಿನ್ನ ಗುಂಪುಗಳನ್ನು ಒಟ್ಟು ತಂದು ಪ್ರತಿಭಟನೆಗೆ ವಿಸ್ತಾರ ನೆಲೆ ರೂಪಿಸುವಲ್ಲಿ ಕೆಲ ಮಹಿಳಾ ಗುಂಪುಗಳೂ ಸೇರಿದಂತೆ ಅನೇಕರು ಶ್ರಮಿಸಿದ್ದೆವು. ಬೆಂಗಳೂರಂತ ಸನ್ನಿವೇಶದಲ್ಲಿ ಅದೊಂದು ಮಹತ್ವದ ಮೈಲಿಗಲ್ಲು. ಆದರೆ ಮಾಧ್ಯಮಗಳು ಇದಾವುದನ್ನೂ ದಾಖಲಿಸಲಿಲ್ಲ. "ಮಹಿಳಾ ಸಂಘರ್ಷ ಒಕ್ಕೂಟ"ದಲ್ಲಿ 14 ಮಹಿಳಾ ಗುಂಪುಗಳು ಒಟ್ಟಿಗೆ ಬಂದು ಯಶಸ್ವಿಯಾಗಿ ರ‍್ಯಾಲಿ ನಡೆಸಿದಾಗ ಪ್ರಬಲ ಮಾಧ್ಯಮಗಳು 'ಒಕ್ಕೂಟ'ವನ್ನು "ತುಂಬಾ ಕೃತಕವಾಗಿ ಒಟ್ಟಿಗೆ ಸೇರಿದ, ಜಾಳು ಜಾಳಾದ, ಭದ್ರ ಸೈದ್ಧಾಂತಿಕ ನೆಲೆಯಿರದ ಒಟ್ಟು ಬರುವಿಕೆ" ಎಂದೆಲ್ಲ ಹೀಗಳೆದು ಒಕ್ಕೂಟದಲ್ಲೇ ಗುಂಪು-ಗುಂಪುಗಳ ನಡುವೆ ವಿಚಾರ ಒಮ್ಮತ ಇಲ್ಲ ಎಂದು ನಗೆಯಾಡಿದವು. ಎಡಪಂಥೀಯ ಮತ್ತು ಮಹಿಳಾ ಗುಂಪುಗಳು ಬಂದು ಸೇರಿ ಪ್ರತಿಭಟನೆ ತೀವ್ರಗೊಳಿಸಿದಾಗ, ಇಡೀ ಪ್ರಯತ್ನವನ್ನು ಕೆಲ ರಾಜಕೀಯ ಪಕ್ಷಗಳ ಪ್ರಯತ್ನವೆಂಬಂತೆ ತೋರಿಸಿದವು. ಒಟ್ಟಾರೆಯಲ್ಲಿ ಕೋಮುವಾದೀ ಶಕ್ತಿಗಳ ಪ್ರತಿಭಟನೆಯನ್ನೇ ಕೇಂದ್ರಕ್ಕೆ ತಂದು ಅರ್ಥಪೂರ್ಣವಾಗಿ ರೂಪುಗೊಳ್ಳುತ್ತಿದ್ದ ಪ್ರತಿಭಟನೆಯ ಸ್ವರೂಪವನ್ನೇ ತಿರುಚಿಬಿಟ್ಟವು.

ಸರ್ಕಾರವಂತೂ ಹನ್ನೆರಡು ಸಾವಿರ ಸಶಸ್ತ್ರ ಪಡೆಯೊಂದಿಗೆ ಇಡೀ ಬೆಂಗಳೂರನ್ನು ರಣರಂಗದೋಪಾದಿಯಲ್ಲಿ ಸಜ್ಜುಗೊಳಿಸಿ, ಪೋಲೀಸು, ರಾಜ್ಯದ ಇರುವಿಕೆಯನ್ನು ಸಾಬೀತು ಮಾಡಿತು. ಲಾಟಿಯ ರುಚಿ ತೋರಿಸಿ, ಜೈಲು ಕಂಬಿಗಳ ಹಿಂದೆ ತಳ್ಳಿ ಪ್ರತಿಭಟನಕಾರರ ಹುಟ್ಟಡಗಿಸಲು ಹವಣಿಸಿತು. ಇದಕ್ಕೆ ಒತ್ತಾಸೆಯಾದದ್ದು ಪ್ರಬಲ ಮಾಧ್ಯಮ. ಇವತ್ತಿನ ದಿನದಲ್ಲಿ ಯಾವುದೇ ಅರ್ಥಪೂರ್ಣ ಪ್ರತಿಭಟನೆಯನ್ನು ನುಚ್ಚುನೂರು ಮಾಡುವಲ್ಲಿ ಪೋಲೀಸರಷ್ಟೇ ಮುಖ್ಯ ಪಾತ್ರ ವಹಿಸುತ್ತಿರುವುದು ಪ್ರಬಲ ಮಾಧ್ಯಮಗಳು. ರಾಜಕಾರಣಿಗಳ, ಬಂಡವಾಳಶಾಹಿಗಳ ಸೂತ್ರದಲ್ಲಿ ಬೊಂಬೆಗಳಾಗಿರುವ ಇವು ಯಾವುದೇ ಜನಪರ ಚಳುವಳಿಗೆ ಒತ್ತಾಸೆಯಾಗುವುದಿರಲಿ, ಅವುಗಳನ್ನು ವಿರೂಪಗೊಳಿಸಿ, ಕೆಟ್ಟ ಬಣ್ಣ ಮೆತ್ತಿ ಚಿತ್ರಿಸುವ ಮೂಲಕ ತೇಜೋವಧೆ ಮಾಡುವುದನ್ನೇ ತಮ್ಮ ಮಿಷನ್ ಆಗಿಸಿಕೊಂಡಿವೆ.

ಆದರೆ ನಾವಿದರಿಂದ ನಿರಾಶರಾಗಿ ಕೂರುವಂತಿಲ್ಲ. ಕಳೆದ ವಿಶ್ವಸುಂದರಿ ಸ್ಪರ್ಧೆ ಸಮಯದಲ್ಲಿ, ಭಿನ್ನತೆಗಳ ನಡುವೆಯೂ ಸಂಘಟನೆಗಳು ಒಟ್ಟಿಗೆ ಬರುವಲ್ಲಿ ನಡೆಸಿದ ಪ್ರಯತ್ನ ಅತ್ಯಂತ ಮಹತ್ವದ್ದು. ಇಂದಿನ ಪೋಲೀಸ್ ರಾಜ್ ಅನ್ನು ಎದುರಿಸಿ ನಿಲ್ಲಲು ಅದಿನ್ನೂ ಬಲಗೊಳ್ಳಬೇಕಿದೆ. ಹಾಗೆಯೇ ಪ್ರಬಲ ಮಾಧ್ಯಮಗಳಿಗೆ ಪರ್ಯಾಯವಾದ ಜನಪರ ಮಾಧ್ಯಮಗಳು ಅಷ್ಟೇ ಮುಖ್ಯ. ಇಲ್ಲಿ 'ಮಾನಸ'ದಂತ ಪತ್ರಿಕೆಯ ಜವಾಬ್ದಾರಿ ತುಂಬಾ ಇದೆ ಎಂದು ನಾವು ಬಲ್ಲೆವು. ಹಾಗಾಗಿಯೇ ಸೌಂದರ್ಯ ಸ್ಪರ್ಧೆಯ ವಿವಿಧ ಆಯಾಮಗಳನ್ನು ಸಮಗ್ರವಾಗಿ ಕೊಡುವಂತಹ ವಿಸ್ತೃತ ಸಂಚಿಕೆಯನ್ನು ಹೊರ ತಂದೆವು. ಈ ಹೊತ್ತಿನ ಸಂಕೀರ್ಣ ರಾಜಕೀಯ ಸನ್ನಿವೇಶದಲ್ಲಿ ಮಾನಸದ ಇಂತಹ ಮುಂದುವರೆದ ಪ್ರಯತ್ನಗಳಿಗೆ ತಮ್ಮೆಲ್ಲರ ಹೆಚ್ಚಿನ ಸಹಕಾರ ಅಗತ್ಯ ಇದೆ.

ರಾಜಕೀಯ ಮತ್ತು ಮಹಿಳೆಯರ ಪ್ರಶ್ನೆ

ರಂಜನಿ
(AIPWA ರಾಜ್ಯ ಕಾರ್ಯದರ್ಶಿ)

ಈಗಿನ ದಿನಗಳಲ್ಲಿ ಸ್ತ್ರೀವಾದಿಗಳು, ಸರ್ಕಾರ ಯೋಜನೆಗಳನ್ನು ರೂಪಿಸುವಾಗ gender-sensitive ಧೋರಣೆ ಹೊಂದಿರಬೇಕಾದುದನ್ನು ಒತ್ತಿ ಹೇಳುತ್ತಿದ್ದಾರೆ. ಬೀಜಿಂಗ್ ಸಮಾವೇಶದ ಮುಂಚಿನ ಮತ್ತು ನಂತರದ ವಿದ್ಯಮಾನಗಳು ಇದನ್ನು ಎತ್ತಿ ತೋರಿಸುತ್ತವೆ. ಸ್ವಾಯತ್ತ ಮಹಿಳಾ ಗುಂಪುಗಳು ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇರಬೇಕೆಂದು ಒತ್ತಾಯಿಸುತ್ತಿವೆ. ಆದರೆ ತಾವೇ ಅದರ ಭಾಗವಾಗಿರಲು ಇಚ್ಛಿಸುವುದಿಲ್ಲ. ಪಂಚಾಯತಿ ಮತ್ತು ನಗರಪಾಲಿಕೆಗಳಲ್ಲಿ ಮಹಿಳೆಯರಿಗೆ 1/3 ಭಾಗ ಮೀಸಲಾತಿಯ ಅನುಷ್ಠಾನದಿಂದಾಗಿ ಕೆಳಮಟ್ಟದ ಜನತಾಂತ್ರೀಯ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಕೆ ಉತ್ತಮಗೊಂಡಿದ್ದರೂ, ಹನ್ನೊಂದನೇ ಸಾರ್ವತ್ರಿಕ ಚುನಾವಣೆಯಲ್ಲಿ ಮಾತ್ರ ಇದರ ಪರಿಣಾಮ ಕಂಡುಬಂದಿಲ್ಲ. ಇಲ್ಲಿ ರಾಜಕೀಯದೆಡೆಗಿನ ಸ್ವಾಯತ್ತ ಮಹಿಳಾ ಗುಂಪುಗಳ ಧೋರಣೆ ಮತ್ತು ಮಹಿಳೆಯರೆಡೆಗಿನ ರಾಜಕೀಯ ಪಕ್ಷಗಳ ಧೋರಣೆ ಇವೆರಡೂ ಸಾಕಷ್ಟು ವಾದಕ್ಕೆ ಗ್ರಾಸ ಒದಗಿಸಿವೆ. ಮತ್ತೊಂದು ಕಡೆಗೆ ಆಂಧ್ರದ ಸಾರಾಯಿ ವಿರೋಧದ ಹೋರಾಟ ಇದೆ. ಭಾರತೀಯ ಚರಿತ್ರೆಯಲ್ಲೇ ಮೊಟ್ಟ ಮೊದಲ ಬಾರಿಗೆ ಮಹಿಳೆಯರು ತಮ್ಮ ಮತಗಳ ಮುಖಾಂತರ ತಮ್ಮ ಬೇಡಿಕೆಗಳನ್ನು ಅಭಿವ್ಯಕ್ತಿಸಿದರು..

ರಾಜಕೀಯ ಅಧಿಕಾರ ಸಂರಚನೆಯಲ್ಲಿ ಪ್ರತಿನಿಧಿತ್ವ

ಸದ್ಯದ ಸ್ಥಿತಿಯಲ್ಲಿ ಯಾವುದೇ ರಾಜಕೀಯ ಪಕ್ಷದಲ್ಲೂ ಮಹಿಳೆಯರ ಪ್ರಮಾಣ ಶೇ. 12ಕ್ಕಿಂತ ಹೆಚ್ಚಿಲ್ಲ. ನಾಯಕತ್ವ ಸ್ಥಾನಗಳಲ್ಲಿ ಪುರುಷ ಪ್ರಾಬಲ್ಯವೇ ಮೆರೆಯುವುದು ಸರ್ವವಿಧಿತ. ಇದಕ್ಕೆ ರಾಜಕೀಯದೆಡೆಗಿನ ಮಹಿಳೆಯರ ಅವಜ್ಞೆಯೇ ಕಾರಣ ಎಂದು ರಾಜಕೀಯ ಪಕ್ಷಗಳು ಹೇಳಿಕೊಂಡರೂ, ಮಹಿಳೆಯರಿಗೆ ಬೇಕಾಗಿರುವ ಅವಕಾಶವನ್ನಾಗಲೀ ಉತ್ತೇಜನ ವನ್ನಾಗಲೀ ಅವು ಕೊಡದೇ ಹೋಗಿರುವುದು ಬಹುಮುಖ್ಯ ಕಾರಣ.

ಹನ್ನೊಂದನೇ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಒಟ್ಟು 14, 729 ಅಭ್ಯರ್ಥಿಗಳ ಪೈಕಿ ಕೇವಲ 491 ಜನ ಮಾತ್ರ ಮಹಿಳೆಯರಿದ್ದರು. ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳೆಯರಿಗೆ 30% ಮೀಸಲಾತಿಯ ಆಶ್ವಾಸನೆ ನೀಡಿದ ಪಕ್ಷಗಳೇ ಅನೇಕ ಮಹಿಳಾ ಅಭ್ಯರ್ಥಿಗಳ ಸ್ಪರ್ಧಿಸುವ ಇಚ್ಛೆಯನ್ನು ತಳ್ಳಿಹಾಕಿದವು. ಯಾವುದೇ ದೃಢಸಂಕಲ್ಪ, ಬದ್ಧತೆಗಳಿರದ ಇಂತಹ ಆಶ್ವಾಸನೆಗಳೇ ಈ ದಿನಗಳ ಫ್ಯಾಶನ್ ಆಗಿಬಿಟ್ಟಿದೆ. ಈ ಪಕ್ಷಗಳು ಹೆಂಗಸರಿಗೆ ನೀಡಿರುವ ಅತಿ ಕಡಿಮೆ ಅವಕಾಶ ಪುರುಷ ಪರವಾಗಿನ ಧೋರಣೆಗೆ ದ್ಯೋತಕವಾಗಿರುವುದರಿಂದ ಮಹಿಳೆಯರ ಹೆಚ್ಚಿನ ಭಾಗವಹಿಕೆಯನ್ನು ಪ್ರತಿಪಾದಿಸುವುದು ಅವಶ್ಯಕವಾಗುತ್ತದೆ. ಅದೇನೇಯಾದರೂ, 80ರ ದಶಕದ ಮಧ್ಯಭಾಗದಿಂದೀಚೆಗೆ ಸ್ವತಂತ್ರವಾಗಿ ಸ್ಪರ್ಧಿಸುವ ಹೆಂಗಸರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿದೆ. ಆದರೆ ಖೇದದ ಸಂಗತಿಯೆಂದರೆ, ಚುನಾವಣೆಗಳಲ್ಲಿ ಅವರು ಗೆದ್ದು ಬಂದಿರುವುದು ಅತೀ ಕಡಿಮೆ.

ಇಂದು, ರಾಜಕೀಯದ ಅಪರಾಧೀಕರಣ, ಚುನಾವಣಾ ಪ್ರಚಾರಗಳಿಗೆ ಅಪಾರ ಹಣ ಬೇಕಾಗಿರುವುದು ಮತ್ತು ಮಹಿಳಾ ಅಭ್ಯರ್ಥಿಗಳ ತೇಜೋವಧೆ ಮುಂತಾದ ಕಾರಣಗಳಿಂದಾಗಿ ಚುನಾವಣೆಯಲ್ಲಿ ಹೆಂಗಸರ ಭಾಗವಹಿಕೆ ಕುಂಠಿತಗೊಂಡಿದೆ. ಅದೂ ಅಲ್ಲದೆ ಸಮಾಜ, ಚುನಾವಣಾ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳಲ್ಲಿನ ಪಿತೃಪ್ರಧಾನ ಸಂರಚನೆಯಿಂದಾಗಿ ಮಹಿಳೆಯರು ಇದರೊಳಕ್ಕೆ ನುಸುಳುವುದು ಕಷ್ಟಸಾಧ್ಯ. ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಪಡೆಯಬೇಕಾದರೆ ಮಹಿಳೆಯೊಬ್ಬರು ಹೆಸರಾಂತ ನಾಯಕ ಅಥವಾ ಹವಾಲಾ ಪೀಡಿತ ಪುಡಾರಿಯ ಹೆಂಡತಿಯೋ, ಖ್ಯಾತ ನಾಯಕನ ವಿಧವಾ ಪತ್ನಿಯೋ (ಈಗಷ್ಟೇ ವಿಧವೆಯಾದ) ಅಥವಾ ಹಿರಿಯ ಪುಡಾರಿಯ ರಕ್ತಸಂಬಂಧಿಯೋ ಆಗಿರಬೇಕಾಗಿರುವುದು ದುರಂತದ ಸಂಗತಿ.

ರಾಜಕೀಯ ಪಕ್ಷಗಳಲ್ಲಿ ಮಹಿಳೆಯರ ಸ್ಥಿತಿಗತಿ

ಇಂದು, ವಯಕ್ತಿಕ ಬದುಕುಗಳ ರಾಜಕೀಯಕರಣ ಮತ್ತು ಶಕ್ತಿಶಾಲೀ ಮಹಿಳಾ ರಾಜಕಾರಣಿಗಳ ತೇಜೋವಧೆಗಳು ರಾಜಕೀಯದ ಭಾಗವಾಗಿಬಿಟ್ಟಿವೆ. ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳೆಡೆಗೆ ರಾಜಕೀಯ ಪಕ್ಷಗಳು ಅಥವಾ ರಾಜಕಾರಣಿಗಳು ತೋರುವ ಪ್ರತಿಕ್ರಿಯೆ ಪುರುಷ ಮನಸ್ಸಿನ ಪ್ರತಿಬಿಂಬವಾಗಿರುವುದಲ್ಲದೆ ಪಕ್ಷಗಳಲ್ಲಿ ಮಹಿಳೆಯರಿಗೆ ಸಿಗುತ್ತಿರುವ ಅವಕಾಶವನ್ನೂ ಎತ್ತಿ ತೋರಿಸುತ್ತವೆ.

ಖ್ಯಾತ ತಂದೂರ್ ಕೊಲೆ ಪ್ರಕರಣದಲ್ಲಿ, ಕಾಂಗ್ರೆಸ್ ಪುಢಾರಿ ಸುಶೀಲ್‌ಶರ್ಮ ತನ್ನ ಪತ್ನಿ ನೈನಾ ಸಹಾನಿಯನ್ನು ದಾರುಣವಾಗಿ ಕೊಲೆ ಮಾಡಿದನು. ಸುಶೀಲ್ ಶರ್ಮ ನೈನಾಳನ್ನು ಯಾವಾಗಲೂ ತನ್ನ ಬಿಗಿಮುಷ್ಠಿಯಲ್ಲೇ ಬಂಧಿಸಿಡುತ್ತಾ ತನ್ನ ರಾಜಕೀಯ ಲಾಭಕ್ಕಾಗಿ ಆಕೆಯನ್ನು ಬಳಸಿಕೊಳ್ಳುತ್ತಿದ್ದನು. ಒಮ್ಮೆ ನೈನಾ ತನ್ನನ್ನು ರಾಜಕೀಯವಾಗಿ ಪ್ರತಿಪಾದಿಸಿಕೊಳ್ಳತೊಡಗಿದಾಗ ಮತ್ತು ಬೇರೊಬ್ಬನ ಜತೆ ಪ್ರೇಮದಲ್ಲಿ ಬಿದ್ದಾಗ ಆಕೆಯ ಮೇಲೆ ಈತನ ಹಿಡಿತ ತಪ್ಪಿಹೋಗಲು ಪ್ರಾರಂಭವಾಗಿ ಆಕೆಯನ್ನು ಕೊಲ್ಲಲು ನಿರ್ಧರಿಸಿದನು. ಪ್ರಕರಣ ಬಯಲಾದಾಗ ಮದ್ರಾಸ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಮೊರೆಹೋದನು. ನ್ಯಾಯಾಂಗವೂ ವಿನಯದಿಂದ ಆತನ ರಕ್ಷಣೆಗೆ ಮುಂದಾಯಿತು. ಸುಶೀಲ್ ಶರ್ಮನನ್ನು ಕಾಂಗ್ರೆಸ್ಸಿನಿಂದ ಉಚ್ಛಾಟಿಸಬೇಕೆಂದು ಕೆಲ ಕಾಂಗ್ರೆಸ್ಸಿಗರು ಒತ್ತಾಯಿಸತೊಡಗಿದಾಗ, ಕಾಂಗ್ರೆಸ್ಸಿನ ಅಧ್ಯಕ್ಷ ಪಿ.ವಿ. ನರಸಿಂಹರಾಯರು ಒಂದು ಹೆಂಗಸಿನ ವಿಚಾರದಲ್ಲಿ ಜಗಳ ಮಾಡದಿರುವಂತೆ ಅವರಿಗೆಲ್ಲಾ ಬುದ್ಧಿ ಹೇಳಿದರು.

ಪ್ರತಿನಿಧಿತ್ವದ ವಿಚಾರಕ್ಕೆ ಬಂದಾಗ, ಕಾಂಗ್ರೆಸ್ಸು ಯಾವಾಗಲೂ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರನ್ನು ಚುನಾವಣೆಗೆ ತಂದಿರುವುದು ಕಂಡು ಬರುತ್ತದೆ. ಅನೇಕ ಪ್ರಮುಖ ಮಹಿಳೆಯರು ಈ ಪಕ್ಷದಿಂದ ಚುನಾಯಿತಗೊಂಡಿದ್ದಾರೆ. ಆದರೆ ಅವರು ಮಹಿಳೆಯರ ಒಳಿತಿಗಾಗಿ ಮಾಡಿರುವುದು ಮಾತ್ರ ಏನೇನು ಇಲ್ಲ. ಇಂತಹವರ ಮಧ್ಯೆ ಕೂಡ ಮಮತಾ ಬ್ಯಾನರ್ಜಿಯಂತಹ ಒಂದೊಂದು ಅಪವಾದಗಳಿರುವುದುಂಟು. ಆದರೂ ಮಮತಾ ಬ್ಯಾನರ್ಜಿಯಂತಹ ನಿಜ ನಾಯಕಿಯರ ಸ್ವಾತಂತ್ರ ಕೂಡ ಅಂತಹ ಪಕ್ಷದಲ್ಲಿ ಸಾಕಷ್ಟು ನಿಯಂತ್ರಿತಗೊಂಡಿದೆ.

ಅಧಿಕಾರಕ್ಕೆ ತುಂಬಾ ಹತ್ತಿರದಲ್ಲಿರುವ ಬಿಜೆಪಿಯಂತಹ ಪಕ್ಷ ರಾಜಕೀಯ ಪ್ರವೃತ್ತಿಗಳಿಗನುಸಾರ ಬದಲಾಗುವ ಮುಖವಾಡವನ್ನು ಸುಲಭದಲ್ಲಿ ತೊಡಬಲ್ಲುವು. ಬೀಜಿಂಗ್ ಸಮಾವೇಶದ ನಂತರ, ಮಾತೃಶಕ್ತಿಯ ಸಂತೆಯರು ಈಗ ನಾರೀ ಶಕ್ತಿಯಾಗಿ ಪರಿವರ್ತಿತಗೊಂಡಿದ್ದಾರೆ. ಬಿಜೆಪಿ ಹಿಂದೊಮ್ಮೆ ಎತ್ತಿ ಹಿಡಿಬಿದ್ದ ಉಮಾ ಭಾರತಿ, ಸಾಧ್ವಿ ರಿತಾಂಬರೆಯರನ್ನು ಹಿಂದಕ್ಕೆ ಸರಿಸಿದೆ. ಅರೆ-ಆಧುನಿಕ ಮತ್ತು ಅರೆ-ಹಿಂದುತ್ವ ಸ್ವರೂಪೀ ಸುಶ್ಮಾ ಸ್ವರಾಜರನ್ನು ಹೊಸ ನಾಯಕಿಯಾಗಿ ಮುಂದೆ ಹಿಡಿಯುತ್ತಿದೆ. ಅದೇನೇಯಾದರೂ, ಸುಶ್ಮಾ ಸ್ವರಾಜಳಿಗೆ ದೆಹಲಿಯ ಮುಖ್ಯಮಂತ್ರಿಯಾಗುವ ಅವಕಾಶವಿದ್ದಾಗ್ಯೂ ಜಾತಿ-ಲಿಂಗಗಳ ಕಾರಣಕ್ಕಾಗಿ ಬಿಜೆಪಿ ಆಕೆಯನ್ನು ಅದರಿಂದ ವಂಚಿಸಿತು. ಪ್ರತಿ ದಿನ ವರದಕ್ಷಿಣೆಯ ಬೆಂಕಿಯಲ್ಲಿ ಸುಟ್ಟುಹೋಗುತ್ತಿರುವ ಹಿಂದೂ ಹೆಂಗಸರ ಬಗ್ಗೆ ಬಿಜೆಪಿಗೇನೂ ಅಂತಹ ಕಾಳಜಿಯಿಲ್ಲ. ಆದರೆ ಸಮಾನ ನಾಗರೀಕ ಸಂಹಿತೆಯ ವಿಚಾರದಲ್ಲಿ ಮುಸ್ಲಿಂ ಹೆಂಗಸರ ಬಗ್ಗೆ ಅಪಾರ ಕಳಕಳಿಯಿರುವಂತೆ ನಾಟಕವಾಡುತ್ತದೆ. ತಾವೇ ಪ್ರತಿಪಾದಿಸುವ 'ಹಿಂದೂ' ಹೆಂಗಸರ ಸ್ಥಿತಿಗತಿ ಸುಧಾರಣೆಗೆ ಏನೂ ಮಾಡುತ್ತಿಲ್ಲ.

ಸಾಮಾಜಿಕ ಅಸಮಾನತೆಯ ವಿರುದ್ಧ ಸಮರ ಸಾರಿದ ಜನತಾದಳದ ಮಂಡಲ ಚಳವಳಿ ಲಿಂಗ ಅಸಮಾನತೆಯ ವಿರುದ್ಧ ಏನನ್ನೂ ಮಾಡಲಿಲ್ಲ. ಇಡೀ ಮಂಡಲ ಚಳವಳಿಯಲ್ಲಿ ಹೇಳಿಕೊಳ್ಳುವಂತ ಒಬ್ಬ ಮಹಿಳಾ ನಾಯಕಿಯನ್ನು ಕೂಡ ಹುಟ್ಟುಹಾಕಲು ಸಾಧ್ಯವಾಗಲಿಲ್ಲ. ಜನತಾದಳದಲ್ಲಿ ಮೇನಕಾಗಾಂಧಿಯೊಬ್ಬರು ಹೆಸರಿಸಬಲ್ಲಂತ ನಾಯಕಿಯಾಗಿದ್ದರು. ಆಕೆ ಕೂಡ ಈಗ ಉಚ್ಛಾಟಿತರಾಗಿದ್ದಾರೆ. ಈ ಪ್ರಕರಣ ಜನತಾದಳದ ಲಿಂಗಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆಯಲ್ಲದೆ ಮನೇಕಾಗಾಂಧಿಯಂತವರು ಎತ್ತಿ ಹಿಡಿಯುತ್ತಿದ್ದ ಉದಾರ-ಪ್ರಗತಿಪರ ಮೌಲ್ಯಗಳ ಅವನತಿಯನ್ನೂ ಸೂಚಿಸುತ್ತದೆ. ಮನೇಕಾಗಾಂಧಿ ಹೇಳುವಂತೆ ಕೊಂಚೆಂಟ್ರಿಕ್ಸ್‌ನಂತಹ ಸಮಸ್ಯೆಗಳನ್ನೂ ಚರ್ಚಿಸಲಾಗದಷ್ಟರ ಮಟ್ಟಿಗೆ ಪಕ್ಷದ ಆಂತರಿಕ ಡೆಮಾಕ್ರಸಿ ದಿವಾಳಿಯೆದ್ದಿದೆ. ಪಕ್ಷದಲ್ಲಿ ಆಂತರಿಕ ಪ್ರಜಾತಾಂತ್ರಿಕತೆ ಇಷ್ಟರ ಮಟ್ಟಿಗೆ ದಿವಾಳಿಯೆದ್ದಿರುವುದು ಜನತಾದಳದಲ್ಲಿ ಮಹಿಳೆಯರಿಗೆ ಅವಕಾಶವನ್ನು ಅಷ್ಟರ ಮಟ್ಟಿಗೆ ಕಡಿಮೆ ಮಾಡಿದೆ.

ಪ್ರಮುಖ ಎಡಪಂಥೀಯ ಪಕ್ಷವಾದ ಸಿಪಿಐ (ಎಂ) ಬೇರೆ ಕತೆಯನ್ನೇ ನಮಗೆ ಕೇಳಿಸುತ್ತದೆ. 1987ರಲ್ಲಿ, ಸಿಪಿಐ (ಎಂ) ಕೇರಳ ಅಸೆಂಬ್ಲಿಯಲ್ಲಿ ಗೆದ್ದು ಬಂತು. ಎಲ್ಲ ಕಾರಣಕ್ಕೂ ಮುಖ್ಯಮಂತ್ರಿಯಾಗುವ ಅರ್ಹತೆ ಹೊಂದಿದ್ದ ಶಕ್ತಿಶಾಲೀ ನಾಯಕಿ ಕೆ. ಆರ್. ಗೌರಿ ಅವರಿಗೆ ಆ ಸ್ಥಾನ ದಕ್ಕಲಿಲ್ಲ. ಇ. ಕೆ. ನಾಯನಾರಿಗೆ ದಕ್ಕಿತು. ಚರಿತ್ರೆ ಈಗ ಮತ್ತೆ ಪುನರಾವರ್ತನೆಗೊಂಡಿದೆ. 1996ರ ವಿಧಾನಸಭಾ ಚುನಾವಣೆಯ ನಂತರ ಮತ್ತೊಬ್ಬ ಸಮರ್ಥ ಅಭ್ಯರ್ಥಿ ಸುಶೀಲಾ ಗೋಪಾಲನ್ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ವಂಚಿಸಲಾಗಿದೆ. ಭಾರತೀಯ ರಾಜಕೀಯದಲ್ಲಿ ಇಂತಹ ಸಮರ್ಥ ಮಹಿಳಾ ಅಭ್ಯರ್ಥಿಗಳು ಬೆಳಕಿಗೇ ಬಂದದ್ದೇ ಕಡಿಮೆ. ಬಂದಾಗಲೂ ಕೂಡ ಅವರನ್ನು ಸೂಕ್ತ ಸ್ಥಾನಗಳಿಂದ ದೂರವೇ ಇರಿಸಲಾಗಿದೆ. ಮತ್ತೆ ಇ. ಕೆ. ನಾಯನಾರಿಗೇ ಪಟ್ಟ ಹೋಗಿದೆ. ಸಿಪಿಐ(ಎಂ)ನಲ್ಲಿ ಪುರುಷಪರ

ಧೋರಣೆ ಮುಖಕ್ಕೆ ರಾಚುವಂತಿದ್ದರೂ, ಬೇರೆ ಯಾವುದೇ ಬಲಪಂಥೀಯ ಅಥವಾ ಸೆಂಟ್ರಿಸ್ಟ್ ಪಕ್ಷಗಳು ಈ ವಿಚಾರದಲ್ಲಿ ಸಂಪನ್ನರೇನೂ ಅಲ್ಲ ಎಂದು ಹೇಳಿಕೊಳ್ಳುವ ಮೂಲಕ ತನ್ನಷ್ಟಕ್ಕೇ ಸಮಾಧಾನಗೊಳ್ಳುತ್ತಿದೆ. ಅಲ್ಲದೆ ಈ ಪಕ್ಷದ ಮಹಿಳಾ ಸಂಘಟನೆ (AIDWA) ಕೂಡ ಈ ವಿಚಾರದಲ್ಲಿ ದನಿಯೆತ್ತದೆ ಮೌನ ತಾಳಿದೆ.

ರಾಜಕೀಯದಲ್ಲಿ ತಮಗೊಂದು ಸ್ಥಾನವನ್ನು ಕಂಡುಕೊಂಡಿರುವ ಕೆಲವೇ ಕೆಲವು ಮಹಿಳೆಯರು ಕೂಡ ಚುನಾವಣಾ ಪರಿಧಿಗಳನ್ನು ದಾಟಿ ಹೋಗಲು ಸಾಧ್ಯವಾಗಿಲ್ಲ. ಇದು ಸಿಪಿಐ(ಎಂ)ನಲ್ಲೂ ಎದ್ದು ಕಾಣುತ್ತದೆ. ಇಲ್ಲಿ ಬಹುತೇಕ ಮಹಿಳಾ ನಾಯಕಿಯರಿಗೆ ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯ ಇರುವುದು ಕಡಿಮೆ. ಗೀತಾ ಮುಖರ್ಜಿಯಂತಹ ಸಾಂಪ್ರದಾಯಕ ನಾಯಕಿಯರು ಚುನಾವಣಾ ವರ್ಚಸ್ಸು ಹೊಂದಿದ್ದು ಸುಲಭದಲ್ಲಿ ಗೆಲ್ಲಬಲ್ಲವರಾದರೆ, ಯುವ ಪೀಳಿಗೆಯ ನಾಯಕಿಯರಾದ ಬೃಂದಾ ಕಾರಟ್ ಮತ್ತು ಮೈಥಿಲಿ ಶಿವರಾಮನ್‌ನಂತವರು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಲಾರರು, ಅದಿರಲಿ, ರಾಜ್ಯಸಭೆಯ ಸ್ಪರ್ಧೆಯ ಕಣಕ್ಕೂ ಇಳಿಯಲಾರರು. ವಿಪರ್ಯಾಸವೆಂದರೆ ಇವರುಗಳು ಹೊಸ ಮಹಿಳಾ ಚಳವಳಿಯ ಜತೆ ನಿಕಟ ಸಂಪರ್ಕ ಹೊಂದಿದವರಾಗಿದ್ದಾರೆ. ಲಿಂಗ ಪ್ರಜ್ಞೆಯಾಧರಿಸಿದ ಮಹಿಳಾ ಮತಕ್ಷೇತ್ರವನ್ನು ಸೃಷ್ಟಿಸುವ ಸಮಸ್ಯೆಗೆ ಅವರು ಎದುರಾಗಿದ್ದಾರೆ. ಮಹಿಳಾ ನಾಯಕಿಯರಿಗೇಕೆ ಮಹಿಳಾ 'ವೋಟ್ ಬ್ಯಾಂಕ್' ಇಲ್ಲ ಎಂಬಂಶವನ್ನು ಮಹಿಳಾ ಚಳವಳಿ ಪರೀಕ್ಷಿಸ ಬೇಕಾಗಿದೆ.

ಆಂಧ್ರದಲ್ಲಿ ಎನ್‌ಟಿಆರ್‌ನ ಎರಡನೇ ಮದುವೆಯಿಂದ ಎದ್ದ ಕೋಲಾಹಲಕ್ಕೆ ಲಕ್ಷ್ಮೀ ಪಾರ್ವತಿಯನ್ನೇ ಮೂಲ ಕಾರಣಕರ್ತಳನ್ನಾಗಿಸಲಾಯಿತು. ಆಕೆಯ ವಿಚಾರದಲ್ಲಿ ಹೊಲಸು ಮಾತುಗಳನ್ನಾಡಿದವರಲ್ಲಿ ಆಂಧ್ರದ ಇಂದಿನ ಮುಖ್ಯಮಂತ್ರಿ ಎನ್‌ಟಿಆರ್‌ನ ಅಳಿಯ ಚಂದ್ರಬಾಬುನಾಯ್ಡು ಕೂಡ ಒಬ್ಬರು. ತೆಲುಗುದೇಶಂ ಪಕ್ಷದ ಅಧಿಕಾರ ಎನ್‌ಟಿಆರ್‌ನ ಕುಟುಂಬ ದೊಳಗಡೆಯೇ, ಅದೂ ಅಲ್ಲಿನ ಗಂಡಸರ ಕೈಗಳಲ್ಲಿ ನೆಲಸು ವಂತಾಗಲು ಎನ್‌ಟಿಆರ್‌ನ ಮಗಂದಿರು-ಅಳಿಯಂದಿರೆಲ್ಲಾ ಒಟ್ಟಾಗಿ ಹೋರಾಟಕ್ಕೆ ನಿಂತರು. ಬಿಜೆಪಿಯೊಂದಿಗೂ ಹೊಂದಾಣಿಕೆಗೆ ಹಿಂಜರಿಯದ ಲಕ್ಷ್ಮೀ ಪಾರ್ವತಿಯ ರಾಜಕೀಯ ಭೋಳೇತನವನ್ನು ಖಂಡಿಸಬೇಕಾಗಿದೆಯಾದರೂ, ಒಬ್ಬ ಹೆಂಗಸೆಂಬ ಕಾರಣಕ್ಕೆ ಆಕೆಯ ಮೇಲೆ ಹರಿಹಾಯುವುದು ಸರಿಯಲ್ಲ. ಹೆಂಗಸರ ರಾಜಕೀಯ ಮತ್ತು ವಯಕ್ತಿಕ ಬದುಕುಗಳ ನಡುವೆ ಸೂಕ್ತ ಪ್ರತ್ಯೇಕೀಕರಣ ಇಲ್ಲದಿರುವುದು ನಿಜಕ್ಕೂ ದುರಂತದ ಸಂಗತಿ.

ಸ್ವಾಯತ್ತ ಮಹಿಳಾ ಸಂಘಟನೆಗಳ ಧೋರಣೆ

ಲಿಂಗ ಸಮಾನತೆಯ ಕ್ಷೇತ್ರದಲ್ಲಿ ಸ್ವಾಯತ್ತ ಮಹಿಳಾ ಸಂಘಟನೆಗಳು ವಹಿಸಿರುವ ಪಾತ್ರ ಎಷ್ಟು ಗುರುತರವಾದದ್ದೋ ಹಾಗೆಯೇ ರಾಜಕೀಯದೆಡೆಗಿನ (ಈಗ ಚುನಾವಣಾ ರಾಜಕೀಯಕ್ಕೂ ವಿಸ್ತರಿಸಿದೆ) ಅವುಗಳ ಅವಜ್ಞೆ ಕೂಡ ಅಷ್ಟೇ ಎದ್ದುಕಾಣುವಂತದ್ದು. ಅನೇಕ ಸ್ವಾಯತ್ತ ಮಹಿಳಾ ಸಂಘಟನೆಗಳು ತಮ್ಮ ಸ್ವಾಯತ್ತತೆಯನ್ನು ಪುರುಷರು ಮತ್ತು ರಾಜಕೀಯ ಪಕ್ಷಗಳ ಸಂಬಂಧದಲ್ಲಿ ವ್ಯಾಖ್ಯಿಸುತ್ತವೆ. ಆದರೆ ಫಂಡಿಂಗ್ ಏಜನ್ಸಿಗಳಿಂದ ಮತ್ತು ಸರ್ಕಾರದಿಂದ ಸ್ವಾಯತ್ತ ಹೊಂದುವ ಬಗ್ಗೆ ಅಲ್ಲಿ ಹೆಚ್ಚಿನ ಒತ್ತಿಲ್ಲ. ಕೆಲ ಸ್ವಾಯತ್ತ ಮಹಿಳಾ ಸಂಘಟನೆಗಳು ಸರ್ಕಾರದೊಂದಿಗೆ ಸೇರಿಹೋಗಿಬಿಟ್ಟಿವೆ ಕೂಡ. ಅದೂ ಅಲ್ಲದೆ ಅವು ಬೇರೆ ಬೇರೆ ರಾಜಕೀಯ ಪಕ್ಷಗಳ ನಡುವಿನ ವ್ಯತ್ಯಾಸವನ್ನು ಗುರುತಿಸದಿರುವುದರಿಂದ ಎಲ್ಲ ರಾಜಕೀಯ ಪಕ್ಷಗಳೂ ಒಂದೇ ಗುಂಪಿಗೆ ಸೇರಿಬಿಡುತ್ತವೆ ಇಲ್ಲಿ. ಅದೇನೇಯಾದರೂ ದೆಹಲಿಯಲ್ಲಿರುವ 'ಸಹೇಲಿ' ಮಹಿಳಾ ಸಂಘಟನೆ, ಮೈಸೂರಿನಲ್ಲಿರುವ 'ಸಮತಾ ವೇದಿಕೆ' ಮತ್ತು ಬೆಂಗಳೂರಿನಲ್ಲಿರುವ 'ಮಾನಸ' ಮುಂತಾದ ಮಹಿಳಾ ಗುಂಪುಗಳು ಉತ್ತಮ ರಾಜಕೀಯ ಪ್ರಜ್ಞೆ ಹೊಂದಿದ್ದು ಸಾಮಾನ್ಯ ಕಾಳಜಿಯ ಕ್ಷೇತ್ರಗಳಲ್ಲಿ ಎಡಪಂಥೀಯ ಪಕ್ಷಗಳೊಂದಿಗೆ ಸಹಕರಿಸುತ್ತವೆ. ಎಡಪಕ್ಷಗಳು ಕೂಡ, ಸ್ವಾಯತ್ತ ಮಹಿಳಾ ಗುಂಪುಗಳು ಲಿಂಗ ಸಂಬಂಧೀ ಅಂಶಗಳಲ್ಲಿ ನೀಡಿರುವ ಕೊಡುಗೆಯನ್ನು ಪರಿಗಣಿಸಿ ತಮ್ಮ ಸಹಕಾರವನ್ನು ನೀಡಬೇಕು.

ಮಹಿಳಾ ರಾಜಕಾರಣಿಗಳನ್ನು ಕುರಿತು

ಇಂದಿರಾಗಾಂಧಿಯನ್ನು ನಾಯಕಿಯನ್ನಾಗಿ ಪಡೆದ ಹೆಮ್ಮೆಯನ್ನು ಭಾರತ ಹೆಗಲಿಗೇರಿಸಿಕೊಂಡಿದೆ; ಹಾಗೆಯೇ ಜಯಲಲಿತಾ ಮತ್ತು ಮಾಯಾವತಿಯರಂತ ರಾಜಕಾರಣಿಯರನ್ನು ಕೂಡ. ಆದರೆ ಮಹಿಳೆ ತೀರ್ಮಾನ ಕೈಗೊಳ್ಳುವ ಸ್ಥಾನದಲ್ಲಿ ಇದ್ದ ಮಾತ್ರಕ್ಕೆ ಮಹಿಳೆಯರ ಉದ್ಧಾರವಾಯಿತೆಂದು ಅರ್ಥವೇನಲ್ಲ. ಇದಕ್ಕೆ ವಿರೋಧವಾಗಿ, ಮಹಿಳಾ ನಾಯಕಿಯರು ಪುರುಷ ನಾಯಕರಷ್ಟೇ ಮಹಿಳೆಯರ ವಿಚಾರದಲ್ಲಿ ಬಿಗುವಾಗಬಲ್ಲರು. ಮಹಿಳೆಯರ ವಿಮೋಚನೆಯೆಡೆಗೆ ಇವರು ಕೊಟ್ಟ ಕೊಡುಗೆ ಎಳ್ಳಷ್ಟೂ ಇಲ್ಲ.

ಮಹಿಳೆಯರ ಸಮಸ್ಯೆಯೆಡೆಗಾಗಲೀ, ಮಹಿಳೆಯರ ವಿಮೋಚನೆಗಾಗಲೀ ಇಂದಿರಾ ಗಾಂಧಿ ತೋರಿದ ಕಾಳಜಿ ದೊಡ್ಡ ಸೊನ್ನೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ, ಕುಟುಂಬ ಯೋಜನೆಯ ಹೆಸರಲ್ಲಿ ಮಹಿಳೆಯರಿಗೆ, ಅದರಲ್ಲೂ ಮುಸ್ಲಿಂ ಮಹಿಳೆಯರಿಗೆ ಇಂದಿರಾಗಾಂಧಿ ಸರ್ಕಾರ ಉಂಟುಮಾಡಿದ ಕ್ರೌರ್ಯ ಜನರ ಮನಗಳಲ್ಲಿ ಇನ್ನೂ ಹಸಿಯಾಗೇ ಇದೆ.

ಇತ್ತೀಚಿನ ಚುನಾವಣೆಯಲ್ಲಿ, ತನ್ನ ಪಕ್ಷದಿಂದ ಸ್ಪರ್ಧಿಸುವ ಅವಕಾಶವನ್ನು ಮಹಿಳೆಯರಿಗೆ ನೀಡದೆ ಮಹಿಳಾ ವಿಮೋಚನೆಯೆಡೆಗೆ ಪ್ರತಿಕೂಲಳಾಗಿ ವರ್ತಿಸಿದ ಮತ್ತೊಬ್ಬ ಮಹಿಳೆಯಿದ್ದಾಳೆ. ಬಿಎಸ್‌ಪಿಯ ಮಾಯಾವತಿಯು, ತನ್ನ ಪಕ್ಷದಿಂದ ಸ್ಪರ್ಧಿಸಬಯಸುವವರಿಂದ ಎಷ್ಟೊಂದು ದೊಡ್ಡ ಮೊತ್ತದ ಹಣವನ್ನು ಒತ್ತಾಯಿಸುತ್ತಿದ್ದಳೆಂದರೆ, ಒಬ್ಬ ಮಹಿಳಾ ಅಭ್ಯರ್ಥಿ ಕೂಡ ಆ ಪಕ್ಷದಿಂದ ಸ್ಪರ್ಧಿಸಲು ಸಾಧ್ಯವಾಗಲಿಲ್ಲ.

ಜಯಲಲಿತಾಳ ಆಡಳಿತದಲ್ಲಿ 'ತಮಿಳುನಾಡಿನಲ್ಲಿ' ರಾಜಕೀಯದ ಅಪರಾಧೀಕರಣ ಮುಗಿಲು ಮುಟ್ಟಿತು. ಇಂತಹ ಅಪರಾಧೀಕರಣ ಹೆಚ್ಚು ಮಹಿಳೆಯರು ರಾಜಕೀಯ ಪ್ರವೇಶ ಮಾಡುವುದಕ್ಕೆ ಕೇವಲ ತಡೆಯನ್ನಷ್ಟೇ ಒಡ್ಡಿದೆ. ಈಕೆಯ ಆಡಳಿತ ಕಾಲದಲ್ಲಿ ಪೋಲೀಸ್ ಕಸ್ಟಡಿಯಲ್ಲಿ ಸಾವುಗಳು ಮತ್ತು ಅತ್ಯಾಚಾರಗಳು ಹೆಚ್ಚಿದ್ದು ಮಾತ್ರವಲ್ಲ, ಚಿದಂಬರಂನಲ್ಲಿ ನಡೆದ ಪೋಲೀಸ್ ಕಸ್ಟಡಿಯಲ್ಲಿ ಪದ್ಮಿನಿಯ ಅತ್ಯಾಚಾರದ ಪ್ರಕರಣ ಕೂಡ ಜಯಲಲಿತ ಮುಖ್ಯಮಂತ್ರಿಯಾಗಿದ್ದಾಗಲೇ ನಡೆದದ್ದು.

ಸಂಯುಕ್ತರಂಗ ಸರಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮ

ಲೋಕಸಭೆ, ವಿಧಾನಸಭೆ ಮತ್ತು ಸರ್ಕಾರದ ಎಲ್ಲ ಹುದ್ದೆಗಳಲ್ಲಿ ಮಹಿಳೆಯರಿಗೆ 1/3ರಷ್ಟು ಮೀಸಲಾತಿ ಘೋಷಿಸಿರುವುದು ತುಂಬಾ ಸ್ವಾಗತಾರ್ಹ ಹೆಜ್ಜೆ. ಬಹುತೇಕ ಸಂದರ್ಭಗಳಲ್ಲಿ ಆಳುವ ಪಕ್ಷಗಳು ಮಹಿಳೆಯರ ಸಶಕ್ತತೆಯನ್ನು ಕಾನೂನು ಸಂಬಂಧೀ ಹಕ್ಕುಗಳಿಗೆ ಇಳಿಸಿಬಿಟ್ಟು ಮಹಿಳೆಯರ ಪ್ರಶ್ನೆಯನ್ನು ಸಾಮಾಜಿಕ ಹಕ್ಕುಗಳಿಗಿಂತ ಹೆಚ್ಚಾಗಿ ಕಾನೂನು ಸಂಬಂಧೀ ಹಕ್ಕೆಂದೇ ನೋಡುವುದು ವಾಡಿಕೆ. ಈ ನಿಟ್ಟಿನಲ್ಲಿ ಮೇಲಿನ ಮೀಸಲಾತಿ ಒಂದು ದಿಟ್ಟ ಹೆಜ್ಜೆ. ಆದರೆ, ಕೇವಲ ಘೋಷಿಸಿಬಿಡುವುದರಿಂದಾಗಲೀ, ಕಾನೂನು ತರುವುದರಿಂದಾಗಲೀ ಪ್ರಯೋಜನವಾಗುವುದಿಲ್ಲ. ಅಧಿಕಾರಹೀನ ಮಹಿಳೆಯರನ್ನು ಅಧಿಕಾರ ಸ್ಥಾನಗಳಲ್ಲಿಟ್ಟು, ಮತ್ತೆ ರಾಜಕೀಯ ಪಕ್ಷಗಳಲ್ಲಿನ ಪುರುಷರ ಕೈಗೊಂಬೆಯಾಗಿಯೇ ಅವರು ಮುಂದುವರೆಯುವ ಸಾಧ್ಯತೆ ಇದೆ. ಸಾಕಷ್ಟು ಸುದ್ದಿ ಮಾಡಿದ ಸಂಯುಕ್ತರಂಗ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಈ ನಿಟ್ಟಿನಲ್ಲಿ ಮಹಿಳೆಯರಿಗೆ ಶಿಕ್ಷಣ ಮತ್ತು ತರಬೇತಿ ನೀಡುವ ಬಗ್ಗೆ ಯಾವ ಮಾತನ್ನೂ ಆಡುವುದಿಲ್ಲ. ಸಮಾನ ನಾಗರೀಕ ಸಂಹಿತೆಯ ವಿಚಾರದಲ್ಲಿ ಸರ್ಕಾರದ ನಿಲುವಂತೂ ಅನುಕೂಲಸಿಂಧುವೇ. ಜನಸಂಖ್ಯಾ ನಿಯಂತ್ರಣದ ಸಂಬಂಧದ ಎಂ. ಎಸ್. ಸ್ವಾಮಿನಾಥನ್ ಕಮಿಟಿಯ ಜನವಿರೋಧೀ-ಮಹಿಳಾ ವಿರೋಧೀ ವರದಿಯ ವಿಚಾರದಲ್ಲಿ ಇದು ಯಾವ ನಿಲುವನ್ನೂ ತೆಗೆದುಕೊಂಡಿಲ್ಲ. ಹಿಂದೂ ಮಹಿಳೆಯರಿಗೆ ಸಮಾನ ಆಸ್ತಿಯ ಹಕ್ಕು, ಮುಸ್ಲಿಂ ಮಹಿಳೆಯರಿಗೆ ಜೀವನಾಂಶದ ಹಕ್ಕು ಮತ್ತು ಎಲ್ಲ ಮಹಿಳೆಯರಿಗೆ ಮಕ್ಕಳ ಪೋಷಕತನದ ಹಕ್ಕುಗಳನ್ನು ನೀಡುವ ಯಾವ ಭರವಸೆಯೂ ಇದರಲ್ಲಿ ಇಲ್ಲ. ದುಡಿಯುವ ಮಹಿಳೆಯರಿಗೆ ಅನುಕೂಲಕರ ಕೆಲಸದ ವಾತಾವರಣ ನೀಡಲು ಸಹಾಯವಾಗುವ ಕನಿಷ್ಟ ಸೌಕರ್ಯಗಳು ಸಾಮಾನ್ಯ ಕನಿಷ್ಟ ಕಾರ್ಯಕ್ರಮದೊಳಕ್ಕೆ, ದಾರಿ ಕಂಡುಕೊಳ್ಳಲಾಗದೆ ಉಳಿದುಬಿಟ್ಟಿದೆ.

ಅನೇಕ ಸ್ವಾಯತ್ತ ಮಹಿಳಾ ಸಂಸ್ಥೆಗಳು ಮೀಸಲಾತಿಯ ಘೋಷಣೆಯಿಂದ ತೃಪ್ತಿಗೊಂಡಂತೆ ಕಾಣುತ್ತಿವೆ. ಇಂತಹ ರಿಯಾಯಿತಿಗಳಿಂದ ತಮ್ಮ ಹೋರಾಟದ ಕಿಚ್ಚನ್ನು ಸ್ವಾಯತ್ತ ಮಹಿಳಾ ಸಂಘಟನೆಗಳು ಕಳೆದುಕೊಳ್ಳಬಾರದು. ಅಲ್ಲದೆ ಸ್ವಾಯತ್ತ ಮಹಿಳಾ ಸಂಘಟನೆಗಳು ಇಂತಹ ಅವಕಾಶಗಳನ್ನು ಬಳಸಿಕೊಂಡು ರಾಜಕೀಯ ಮಧ್ಯ ಪ್ರವೇಶಿಕೆಯಿಂದ ರಾಜಕೀಯಕ್ಕೊಂದು ಲಿಂಗ ಸಮಾನತೆಯ ಆಯಾಮ ಕಲ್ಪಿಸಿಕೊಡಲು ಪ್ರಯತ್ನಿಸಬೇಕು.

ಮುಕ್ತಾಯ : ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯ ಪ್ರಶ್ನೆಯ ಸಂಬಂಧದಲ್ಲಿ ಆಗಬೇಕಾದ್ದು ಬಹಳ ಇದೆ. ಸ್ವಾಯತ್ತ ಮಹಿಳಾ ಗುಂಪುಗಳು ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೊಟ್ಟಿಗಿರುವ ಮಹಿಳಾ ಸಂಘಟನೆಗಳು ಈ ನಿಟ್ಟಿನಲ್ಲಿ ದೃಢವಾದ ಮತ್ತು ರಾಜಿ ಸಾಧ್ಯವಿಲ್ಲದ ನಿಲುವನ್ನು ತೆಗೆದುಕೊಳ್ಳುವುದು ಅತೀ ಮುಖ್ಯ. ಅದು ಇಂದಿನ ಅವಶ್ಯಕತೆ ಕೂಡ. ಸಾಂಪ್ರದಾಯಕ ಸಂಕೋಲೆಗಳನ್ನು ಮುರಿಯುವ ರೀತಿಯಲ್ಲಿ ಮಹಿಳೆಯರ ಪ್ರಶ್ನೆಯೊಂದು ಹೊಸ ಆಯಾಮ ಕಟ್ಟಿಕೊಡುವುದು ಈ ಹೊತ್ತಿನ ತುರ್ತು ಅಗತ್ಯವಾಗಿದೆ.

(ಈ ಲೇಖನದ ಅಭಿಪ್ರಾಯಗಳು AIPWAದ ಅಭಿಪ್ರಾಯಗಳಾಗಿರುತ್ತವಾಗಿ, ಮಾನಸ ಇಲ್ಲಿನ ವಿಚಾರಗಳನ್ನು ಹಂಚಿಕೊಳ್ಳುತ್ತದೆಂದು ಹೇಳುವುದಿಲ್ಲ)

ಮೀನುಗಾರಿಕೆಯಲ್ಲಿ ಮಹಿಳೆ

ನಳಿನಿ ನಾಯಕ್

ನಮ್ಮ ದೇಶದಲ್ಲಿ, ಶೇ.80ರಷ್ಟು ದುಡಿವ ಜನರು ಅಸಂಘಟಿತ ಕ್ಷೇತ್ರದಡಿಯಲ್ಲಿ ಬರುತ್ತಾರೆ. ಇವರಲ್ಲಿ ಹೆಚ್ಚು ಸಂಖ್ಯೆ ಕೃಷಿ ಕಾರ್ಮಿಕರದು. ಇವರ ಸಂಖ್ಯೆಯೂ ಸಹ, ಕಟ್ಟಡ ಕೆಲಸ, ಕ್ವಾರಿ ಹಾಗು ಇತರೆ ಕಾಂಟ್ರಾಕ್ಟ್ ಕೆಲಸಗಳಿಗೆಂದು ನಗರಗಳಿಗೆ ಹೋಗುತ್ತಿರುವುದರಿಂದಾಗಿ ಕಡಿಮೆಯಾಗುತ್ತಿದೆ. ಇವರಲ್ಲದೆ, ಅರಣ್ಯ ಸಂಪತ್ತನ್ನು ಅವಲಂಭಿಸಿರುವ ಆದಿವಾಸಿಗಳು, ನದಿ, ಕಡಲ ಸಂಪನ್ಮೂಲಗಳನ್ನವಲಂಭಿಸಿರುವ ಮೀನುಗಾರಿಕೆ ಕೆಲಸಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲದೆ ಇತರೆ ಸಾಂಪ್ರದಾಯಿಕ ವೃತ್ತಿಯನ್ನವಲಂಬಿಸಿರುವ (ಹೆಂಡ ಇಳಿಸುವ, ಉಪ್ಪು ತಯಾರಿಕೆ ಇತ್ಯಾದಿ ವೃತ್ತಿಗಳು) ಈ ಎಲ್ಲಾ ವಿವಿಧ ಗುಂಪುಗಳಲ್ಲಿ ಮಹಿಳೆಯರ ಸಂಖ್ಯೆ ಶೇ. 50ರಷ್ಟಿದೆ. ಈ ದುಡಿವ ವರ್ಗದವರಿಗೆ ಲಭ್ಯವಿದ್ದ ಸಂಪನ್ಮೂಲಗಳ ಮೇಲೆ ನಿಷೇದ ಹೇರಲಾಗುತ್ತಿದೆ. ಇದಕ್ಕೆ ಕಾರಣ ಅತಿಯಾದ ಉಪಯೋಗದಿಂದ ಸಂಪನ್ಮೂಲಗಳು ಬರಿದಾಗುವುದು ಅಥವಾ ಕೈಗಾರಿಕೆಗಳನ್ನು ಆಧುನೀಕರಣ, ಯಾಂತ್ರೀಕರಣ ಮಾಡಬೇಕೆನ್ನುವ ಸರ್ಕಾರದ ಹೊಸ ಯೋಜನೆಗಳು. ಈ ಯೋಜನೆಗಳು ಮರು ಉಪಯೋಗಿ ಸಂಪನ್ಮೂಲಗಳನ್ನೆ ಹೆಚ್ಚು ಅವಲಂಬಿಸಿವೆ. ಸಂಪನ್ಮೂಲಗಳ ಅತಿಯಾದ ಬಳಕೆಯೂ ಪರಿಸರ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದರೆ ಎಲ್ಲವನ್ನು 'ಉದಾರೀಕರಣ' ಹಾಗು ಹೆಚ್ಚಿನೆ ಉತ್ಪಾದನೆಯ ಹೆಸರಿನಲ್ಲಿ ಸಮರ್ಥಿಸಿ ಕೊಳ್ಳಲಾಗುತ್ತಿದೆ. ನೈಸರ್ಗಿಕ ಸಂಪನ್ಮೂಲಗಳನ್ನ ಅವಲಂಭಿಸುವಂತಹ ಮೀನುಗಾರಿಕೆಯು ಸಹ 'ಆಧುನೀಕರಣ', 'ಯಾಂತ್ರೀಕರಣ' ಹಾಗು ಉದಾರೀಕರಣದಿಂದಾಗಿ ತೀವ್ರ ಪರಿಣಾಮವನ್ನೆದುರಿಸುತ್ತಿದೆ. ಈ ಪರಿಣಾಮಗಳಿಗೆ ಹೆಚ್ಚು ಒಳಗಾಗಿ ದಿನೇ ದಿನೇ ಮೂಲೆ ಗುಂಪಾಗುತ್ತಿರುವವರು ಆ ಉದ್ದಿಮೆಯಲ್ಲಿನ ಮಹಿಳೆಯರು.

ಎಲ್ಲಾ ಕಾಲದಲ್ಲಿಯೂ, ಮಹಿಳೆಯರು ಮೀನುಗಾರಿಕೆಯಲ್ಲಿ ದುಡಿಯುತ್ತಾ ಬಂದಿದ್ದಾರೆ. ಪ್ರಪಂಚದ ಕೆಲವೆಡೆ ಮಹಿಳೆಯರು ಉತ್ತಮ ನಾವಿಕರು ಆಗಿದ್ದ ಸಂಗತಿಗಳಿವೆ. ಮಹಿಳೆಯರು ರಾಶಿಗಟ್ಟಲೆ ಮೀನು ಹಿಡಿಯುತ್ತಿದ್ದುದು ಆಶ್ಚರ್ಯಕರವೇನಲ್ಲ. ಈಗಲೂ ನಮ್ಮ ನೆರೆಯ ಶ್ರೀಲಂಕಾದಲ್ಲಿ ಇದು ಆಚರಣೆಯಲ್ಲಿದೆ. ನಮ್ಮ ದೇಶದಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಸಿದ್ದತೆಯ ಹಂತದಲ್ಲಿ. ಗಂಟೆಗಟ್ಟಲೆ ಕೂತು ಬಲೆ ಹೆಣೆಯುವ ಕೆಲಸ ಮಹಿಳೆಯರದು. ಕೇರಳದ ಟುಟುಕೊರಿಯಲ್ಲಿ ನೀರಿನಲ್ಲಿ ಮುಳುಗಿ ಮುತ್ತು ಹೆಕ್ಕುವುದರಲ್ಲಿ, ಚಿಪ್ಪಿನ ಮೀನುಗಳನ್ನು ಹಿಡಿಯುವುದರಲ್ಲಿ, ನೀರೊಳಗೆ ಮುಳುಗಿ ಸಮುದ್ರ ಕಳೆಯನ್ನು (ಆಹಾರವಾಗಿ ಉಪಯೋಗಿಸುತ್ತಾರೆ) ತರುವುದರಲ್ಲಿ ಮಹಿಳೆಯರು ನಿಪುಣರು. ಥಾಪ್ಪಿಕ ಎಂದು ಕರೆಯುವ ಕಪ್ಪೆ ಚಿಪ್ಪನ್ನು ಬೆರಳಿನಲ್ಲಿ ಹಿಡಿಯುವುದರಲ್ಲಿ ಮಹಿಳೆಯರು ಪ್ರಸಿದ್ದರು. ಈ ರೀತಿಯ ಉದಾಹರಣೆಗಳು ವಿರಳವಾದರೂ ಮೀನು ಹಿಡಿದ ನಂತರದ ಚಟುವಟಿಕೆಗಳಲ್ಲಿ ಮಹಿಳೆಯರು ದುಡಿಯುವುದು ಸಾಮಾನ್ಯ ವಿಷಯ. ಬೇರೆ ವ್ಯವಸಾಯ ಉತ್ಪನ್ನಗಳಂತೆ, ಮೀನು ಹೆಚ್ಚು ಕಾಲ ಉಳಿಯದ ಕಾರಣ, ಕೆಡುವ ಮೊದಲೇ ಅದರ ವಿಲೇವಾರಿಯಾಗಬೇಕು. ಇದಕ್ಕೆ ಸಾಮರ್ಥ್ಯ, ಕೌಶಲ್ಯ ಎರಡೂ ಬೇಕು. ಮೀನಿನ ಸಂರಕ್ಷಣೆ, ವಿತರಣೆ, ಆಹಾರವಾಗಿ ಪರಿವರ್ತಿಸುವುದು - ಇವೆಲ್ಲದರಲ್ಲಿ ಮಹಿಳೆಯರ ಪಾತ್ರ ಹೆಚ್ಚಿನದು. ಈ ಕೆಲಸಗಳ ಹೊಣೆ, ಐಸ್ ಬರುವ ಮೊದಲು ಸಂಪೂರ್ಣವಾಗಿ ಮಹಿಳೆಯರ ಮೇಲಿತ್ತು. ಇತರ ಆಹಾರ ಸಾಮಗ್ರಿಗಳಿಗಾಗಿ ಮೀನಿನ ವಿನಿಮಯ ಹಾಗು ಇತರ ಗ್ರಾಮಸ್ಥರಿಗೆ ಮೀನಿನ ವಿತರಣೆಯಲ್ಲಿ ಮಹಿಳೆಯರು ಗಂಟೆಗಟ್ಟಲೆ ದುಡಿಯುತ್ತಿದ್ದರು. ಅಲ್ಲದೆ ತಕ್ಷಣವೆ ಮಾರಲಾಗದ ಮೀನುಗಳನ್ನು ಉಪ್ಪು ಹಚ್ಚುವುದು, ಒಣಗಿಸುವುದು ಅವರ ಇನ್ನೊಂದು ಮುಖ್ಯ ಕೆಲಸ. ಯಾವ ಮೀನುಗಳನ್ನು ತೊಳೆದಿಡಬೇಕು, ಹೇಗೆ ಸಂರಕ್ಷಿಸಬೇಕು, ಹೇಗೆ ಕಟ್ಟಿಡಬೇಕು ಹಾಗು ಎಣ್ಣೆ ತೆಗೆಯಬೇಕು ಎಂಬಲ್ಲೆಲ್ಲ ಮಹಿಳೆಯರ ಕೌಶಲ್ಯ ಅಡಗಿದೆ. ಅವರ ಈ ಕೌಶಲ್ಯದಿಂದಾಗಿಯೇ, ಹಳ್ಳಿಯ ಮೂಲೆ ಮೂಲೆಗೂ ಮೀನು ತಲುಪುತ್ತಿತ್ತು. ಈ ಕೆಲಸಗಳಲ್ಲದೆ, ಮನೆ ನಡೆಸುವ, ಮಕ್ಕಳನ್ನು ಸಾಕುವ, ಅಡುಗೆ ಮಾಡುವ, ಗಂಡನ ದೈಹಿಕ ಅವಶ್ಯಕತೆಯನ್ನು ಪೂರೈಸುವ ಹೊಣೆಗಳು ಅವರ ಮೇಲಿದೆ. ಈ ರೀತಿಯ ಕೆಲಸಗಳಿಗೆ ಬೆಲೆಯನ್ನೆ ಕಟ್ಟದೆ, ಇವೆಲ್ಲವೂ ಮಹಿಳೆಯರ ಸ್ವಾಭಾವಿಕ ಕೆಲಸವೆಂದು ಪರಿಗಣಿಸಲಾಗಿದೆ. ಮೀನುಗಾರಿಕೆಯಲ್ಲಿ ಅವರ ದುಡಿತ ದಾಖಲಾಗುವುದೆ ಇಲ್ಲ, ದಾಖಲಾಗುತ್ತಿರುವುದು ತೀರಾ ಇತ್ತೀಚೆಗಷ್ಟೇ.

ಮೀನುಗಾರಿಕೆಯಲ್ಲಿ ಯಾಂತ್ರೀಕರಣ ಹೆಚ್ಚಾಗುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು ಹೆಚ್ಚು ಮೂಲೆ ಗುಂಪಾಗುತ್ತಿದ್ದಾರೆ ಅಥವಾ ದಿನಗೂಲಿಗಳಾಗುತ್ತಿದ್ದಾರೆ. ಅಲ್ಲದೆ ಮೀನುಗಾರಿಕೆಯಲ್ಲಿ ಸರ್ಕಾರದ ಪಾತ್ರ ಹೆಚ್ಚುತ್ತಿರುವುದು, ಸಾಲದಂತಹ ಸೌಲಭ್ಯಗಳು ಪುರುಷರಿಗಷ್ಟೇ ದೊರಕುತ್ತಿರುವುದು ಮಹಿಳೆಯರ ಸ್ಥಿತಿಯನ್ನು ಇನ್ನೂ ಹಾಳು ಮಾಡಿದೆ. ಹೆಚ್ಚು ಹಣವಿರುವ, ಹೆಚ್ಚಿನ ಸಂಪರ್ಕ ಸೌಲಭ್ಯ ಹೊಂದಿರುವವರಷ್ಟೆ (ಗಂಡಸರಷ್ಟೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ) ವ್ಯಾಪಾರ ಮಾಡಲು, ಲಾಭ ಗಳಿಸಲು ಸಾಧ್ಯವಾಗಿದೆ. ಅಲ್ಲಿನ ಪ್ರಭಲ ಸ್ಪರ್ಧೆಯಲ್ಲಿ ಶಕ್ತರಾದ ಕೆಲವೆ ಮಹಿಳೆಯರು ಉಳಿಯಲು ಸಾಧ್ಯವಾಗಿ, ಸ್ಪರ್ಧಿಸಲಾಗದ ಬಡ ಮಹಿಳೆಯರು ಹಿಂದೆ ಉಳಿಯುವಂತಾಗಿದೆ.

ಮೀನು ಇಳಿಸುವ ಕೇಂದ್ರಗಳ, ಬಂದರುಗಳ ನಿರ್ಮಾಣವು ಮಹಿಳೆಯರ ಪಾತ್ರವನ್ನು ಮತ್ತಷ್ಟು ಕುಂಠಿತಗೊಳಿಸಿದೆ. ಈ ಹೊಸ ಪರಿಸ್ಥಿತಿಯ ಲಾಭವನ್ನು ಮಹಿಳೆಯರು ಪಡೆಯಲಾಗದೆ, ಪ್ರಭಲ ಪುರುಷ ವ್ಯಾಪಾರಿಗಳಷ್ಟೇ ಲಾಭ ಹೊಂದುತ್ತಿದ್ದಾರೆ. ಕಳೆದ 15 ವರ್ಷಗಳಲ್ಲಿ ಮೀನಿನ ಸಂಪನ್ಮೂಲವು ಕ್ಷೀಣಿಸುತ್ತಿರುವುದರಿಂದ, ಮೀನು ಖರೀದಿಸಲು ಬಹಳ ದೂರ ಪ್ರಯಾಣಿಸಬೇಕಾದ ಸ್ಥಿತಿಯುಂಟಾಗಿದೆ. ಮಹಿಳೆಯರು, ಟ್ರಿವಾನ್‌ಡ್ರಂನಿಂದ ದೂರದ ಮಂಗಳೂರಿಗೆ ಮೀನು ಕೊಳ್ಳಲು ಹೋಗುವುದು, ಕಾಕಿನಾಡದ ಮಹಿಳೆಯರು ವಿಶಾಖಪಟ್ಟಣದಲ್ಲಿ ಮೀನಿಗಾಗಿ ಗಂಟೆಗಟ್ಟಲೆ ಕಾಯುವುದು ಅನಿವಾರ್ಯವಾಗಿದೆ. ಮೀನು ಕೊಳ್ಳಲು ಲಾರಿಗಳನ್ನು ಬಾಡಿಗೆ ಪಡೆದು 20-30 ಗಂಟೆಗಳ ಕಾಲ ಪ್ರಯಾಣ ಮಾಡಿ ತಮ್ಮ ಹಳ್ಳಿಗಳನ್ನು ಸೇರುವ ಮಹಿಳೆಯರು ಅನೇಕರಿದ್ದಾರೆ. ಕೇರಳದ ಮಹಿಳಾ ಮೀನು ವ್ಯಾಪಾರಿಗಳು ಪ್ರಯಾಣಕ್ಕಾಗಿ ವಿಶೇಷ ಬೋಗಿಯನ್ನು ಪಡೆಯುವಲ್ಲಿ ಯಶಸ್ವಿಯಾದರು. ಅವರು ಕ್ವಿಲಾನ್‌ನಿಂದ ಟ್ರಿವಾನ್‌ಡ್ರಂಗೆ ಮೀನು ಒಯ್ಯುತ್ತಾರೆ.

ಯಾವುದೆ ಸಂಪನ್ಮೂಲವಾಗಲಿ, ಮಾರಾಟ ಕೌಶಲ್ಯವಾಗಲಿ ಇಲ್ಲದ ಮಹಿಳೆಯರು ದೋಣಿಗಳಿಂದ ಮೀನು ಇಳಿಸುವ, ಮೀನು ಒಣಗಿಸುವ ದಿನಗೂಲಿಗಳಾಗುತ್ತಿದ್ದಾರೆ. ಚಿಪ್ಪುಗಳನ್ನು ವಿಂಗಡಿಸುವ ಕೆಲಸವನ್ನು ಮಾಡುತ್ತಾರೆ. ಯಂತ್ರಗಳಿಂದ ಮಾಡಲ್ಪಟ್ಟ ನೈಲಾನ್ ಬಲೆಗಳ ಬರುವಿಕೆಯಿಂದಾಗಿ ಮಹಿಳೆಯರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಮಾತ್ರ ಮಹಿಳೆಯರು ಈಗಲೂ ಬಲೆ ಹೆಣೆಯುತ್ತಾರೆ. ಕಾರಣ ಕಂಪೆನಿಗಳಿಗೆ ನೇರವಾಗಿ ಹಣ ಕೊಟ್ಟು ಕೊಳ್ಳಲಾಗದ ಮೀನುಗಾರರು ಸ್ಥಳೀಯ ವ್ಯಾಪಾರಿಗಳಿಂದ ಸಾಲದ ಮೇಲೆ ನೇಯ್ದ ಬಲೆಗಳನ್ನು ಕೊಳ್ಳುತ್ತಾರೆ. ಸೀಗಡಿ ಹಾಗು ಶೇಖರಣಾ ಘಟಕಗಳು ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುತ್ತಿವೆ ಎಂದು ಆಧುನಿಕ ಕೈಗಾರಿಕೆಗಳು ಹೇಳುತ್ತಿವೆ. ಅವು ಉದ್ಯೋಗ ನೀಡುತ್ತಿರುವುದು ನಿಜವಾದರೂ ಅಲ್ಲಿನ ಸ್ಥಿತಿ ಶೋಚನೀಯ. ವಲಸೆ ಬಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಘಟಕಗಳ ಮಾಲೀಕರು, ವಿಚಾರಿಸಲು ಬರುವ ಯಾರನ್ನಾಗಲಿ ಸಂಶಯದಿಂದ ನೋಡುತ್ತಾರೆ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿವೆ.

ಬ್ರಿಡ್‌ಗಿಟ್ - ಸದಾ ಚಟುವಟಿಕೆಯಿಂದಿರುವ ಮಹಿಳೆ, ಒಳ್ಳೆಯ ಮಾತುಗಾರ್ತಿ, ಪ್ರೈಮರಿ ಶಾಲೆಯವರೆಗಷ್ಟೇ ಕಲಿತಿದ್ದಾಳೆ, ದೊಡ್ಡ ಸಭೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲಳು. ತನ್ನಂತೆಯೆ ಮೀನು ವ್ಯಾಪಾರ ಮಾಡುವ ಮಹಿಳೆಯರ ಪರವಾಗಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಬಲ್ಲಳು. ತಮ್ಮ ಹಕ್ಕುಗಳಿಗಾಗಿ ಹೋರಾಡಲು ಆಕೆ ಬದ್ಧಳು.

ನಸುಕಿನಲ್ಲೆ ಅವಳ ದಿನ ಪ್ರಾರಂಭವಾಗುವುದು. ಮನೆಯವರಿಗೆ ಅಡುಗೆ ಮಾಡಿಟ್ಟು, ಮೀನು ವ್ಯಾಪಾರ ಮಾಡುವವರಿಗೆಂದೇ ಇರುವ ಬಸ್‌ನಲ್ಲಿ ಕೂತು 14 ಕಿ.ಮೀ. ದೂರದಲ್ಲಿರುವ ಹೋಲ್‌ಸೇಲ್ ಮೀನು ಮಾರುಕಟ್ಟೆಗೆ ಹೋಗುವಳು. ಅಲ್ಲಿ ಪುರುಷ ವ್ಯಾಪಾರಿಗಳು, ಇತರ ಗುಂಡಾಗಳ ಜೊತೆ ಸ್ಪರ್ಧೆಯಲ್ಲಿ ಹೋರಾಡಿ ಮೀನು ಕೊಳ್ಳುವಳು. ಸ್ವಲ್ಪ ತನ್ನ ಹಣ, ಬಡ್ಡಿ ವ್ಯಾಪಾರಿಯಿಂದ ಪಡೆದ ಸಾಲದ ಹಣ ಒಟ್ಟುಗೂಡಿಸಿ ಮೀನು ಕೊಳ್ಳುವಳು. ನಂತರ 8 ಕಿ.ಮೀ. ದೂರದಲ್ಲಿರುವ ರಿಟೇಲ್ ಮಾರುಕಟ್ಟೆಗೆ ಹೋಗಿ ಮೀನು ಮಾರುವಳು. ವ್ಯಾಪಾರ ಮುಗಿಸಿ ಮನೆಗೆ ಬರುವ ವೇಳೆಗೆ ಸಂಜೆ ಆರು ಗಂಟೆಯಾಗಿರುತ್ತದೆ. ಬರುವ ವೇಳೆಗೆ ಕುಡುಕ ಆಂಬ್ರೋಸ್ (ಗಂಡ) ಹಾಜರಿರುತ್ತಾನೆ. ಎಷ್ಟೋ ವರ್ಷಗಳಿಂದ, ಮನೆಗೆ ಮೂರುಕಾಸು ನೀಡದ ಅವನು, ದುಡಿಯುವುದನ್ನೆಲ್ಲಾ ಹಾಕುವುದು ಕುಡಿತಕ್ಕೆ. ಬ್ರಿಡ್‌ಗಿಟ್ ಸಂಪಾದನೆಯೆ ನಾಲ್ಕು ಮಕ್ಕಳಿಗೆ ಆಧಾರ. ಈ ಕಷ್ಟದ ಸವಾಲುಗಳನ್ನು ಎದುರಿಸುವುದರ ಜೊತೆಗೆ ಆಕೆ ಉತ್ತಮ ನಾಯಕಿಯೂ ಹೌದು. ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ.

ಮೀನುಗಾರಿಕೆಯಲ್ಲಿ ಮಹಿಳೆಯರ ಸ್ಥಿತಿ ಬದಲಾಗಬೇಕಾದರೆ, ಮೀನುಗಾರಿಕೆಯಲ್ಲಿ, ಸಮುದಾಯದಲ್ಲಿ ಹಾಗೂ ಜನಪರ ಸಾಮಾಜಿಕ ಚಳುವಳಿಗಳಲ್ಲಿ ಬದಲಾವಣೆಗಳಾಗಬೇಕು.

ಮೀನುಗಾರಿಕೆಯಲ್ಲಿ - ಮೀನುಗಾರಿಕೆಯ ಯಾವ ಯಾವ ಹಂತದಲ್ಲಿ ಮಹಿಳೆಯ ಪಾತ್ರ ಈಗಲೂ ಇದೆಯೋ ಅಲ್ಲಿ ಅವರನ್ನು ಬೆಂಬಲಿಸುವ ವಿಧಾನ, ದಾರಿಗಳನ್ನು ನಾವು ಹುಡುಕಬೇಕು. ಅಲ್ಲದೆ ಅವರ ಕೌಶಲ್ಯಗಳನ್ನು ಹೆಚ್ಚಿಸುವ, ಅವರನ್ನು ಮೂಲೆಗುಂಪು ಮಾಡುವ ಶಕ್ತಿಗಳ ವಿರುದ್ಧ ಹೋರಾಡುವಂತಹ ಒಂದು ವ್ಯವಸ್ಥೆಯನ್ನು ನಿರ್ಮಿಸಬೇಕು. ಮೀನುಗಾರಿಕೆಯಲ್ಲಿ ದುಡಿಯುವ ಮಹಿಳೆಯರ ಪ್ರತಿಯೊಂದು ಕ್ಷೇತ್ರವನ್ನು ಗಮನಿಸಿ, ಅಭ್ಯಸಿಸುವ ಕೆಲಸವಾಗಬೇಕು. ಆ ಕ್ಷೇತ್ರಗಳಲ್ಲೇ ಅವರು ಮುಂದುವರೆಯುವಂತೆ ಮಾಡುವ ದಾರಿಗಳನ್ನು, ಸಾಧನಗಳನ್ನು ಕಾರ್ಯರೂಪಕ್ಕೆ ತರಬೇಕು. ಸಾಲ ಸೌಲಭ್ಯ (ಇದು ಮಹಿಳೆಯರ ಅಗತ್ಯವಷ್ಟೆ ಅಲ್ಲ), ಮಹಿಳೆಯರು ಬಾಡಿಗೆಗೆ ಪಡೆಯಲು ಸಾಧ್ಯವಾಗುವ ಶೇಖರಣ ಸ್ಥಳ (ಮೀನುಗಳು ಬಂದಿಳಿವ ಜಾಗದಲ್ಲಿ) ನಿಗದಿತ ದರದಲ್ಲಿ ಐಸ್‌ನ ಸೌಲಭ್ಯ, ಮಹಿಳೆಯರಿಗೆ ಉಳಿದುಕೊಳ್ಳಲು ವಸತಿ ಸೌಲಭ್ಯ ಹಾಗೂ ವಾಹನ ಸೌಲಭ್ಯ - ಇವು ಮಹಿಳೆಯರ ಕೆಲವು ಮುಖ್ಯ ಅಗತ್ಯಗಳು. ಉಪ್ಪು ದೊರಕುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಅಯೊಡೈಸ್ಡ್ ಉಪ್ಪಿನ ಉತ್ಪಾದನೆಗೆ ಸರ್ಕಾರ ಒತ್ತಡ ತರುತ್ತಿರುವುದರಿಂದಾಗಿ ಉಪ್ಪು ಉತ್ಪಾದನಾ ತಾಣಗಳು ಮುಚ್ಚಲ್ಪಡುತ್ತಿವೆ. ಇದು ಪರೋಕ್ಷವಾಗಿ ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ. ಟ್ರಾಲರ್‌ಗಳ ಬಳಕೆಯಿಂದಾಗಿ ಟನ್‌ಗಟ್ಟಲೆ ಮೀನು ಹಿಡಿಯಲಾಗುತ್ತದೆ. ಈ ದೊಡ್ಡ ಪ್ರಮಾಣದಲ್ಲಿ ಹಿಡಿಯುವ ಮೀನನ್ನು ಕೊಳ್ಳಲು ಮಹಿಳೆಯರು ಸಂಘಟಿತರಾಗುವುದು ಸೂಕ್ತ.

ಮೂಲೆ ಗುಂಪಾಗುವುದನ್ನು ತಡೆಯಲು ಮಹಿಳೆಯರು ತಾವೇ ಸಂಘಟಿತರಾದರೆ ಉದ್ಯಮದಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳಲು ಸಾಧ್ಯ. ರಾಜ್ಯಾಂಗ ಹಾಗು ಅಧ್ಯಯನ ಸಂಸ್ಥೆಗಳು ಮಹಿಳೆಯರಿಗೆ ಪರ್ಯಾಯ ಉದ್ಯೋಗವನ್ನು ನಿರ್ಮಿಸುವಲ್ಲಿ ಮುಖ್ಯ ಪಾತ್ರ ವಹಿಸಬೇಕು. ಕೆಲವು ಸಂಸ್ಥೆಗಳು ಪರ್ಯಾಯವಾಗಿ ಉಪ್ಪಿನಕಾಯಿ, ಕರಿದ ತಿಂಡಿಗಳ ಉತ್ಪಾದನೆಯನ್ನು ಬೆಳಸಲು ಪ್ರಯತ್ನಿಸಿದವು. ಆದರೆ ಮೀನಿನ ವ್ಯಾಪಾರವೇ ಆಧಾರವಾಗಿದ್ದ ಮಹಿಳೆಯರನ್ನು ಒಳಗೊಳ್ಳಲು ಸಾಧ್ಯವಾಗಲಿಲ್ಲ.

ಸಮುದಾಯದಲ್ಲಿ - ಸಮುದಾಯದ ಮಟ್ಟದಲ್ಲಿ ಮಹಿಳೆಯರು ಸಶಕ್ತರಾಗಬೇಕಾದರೆ ಈ ಎರಡು ಪ್ರಯತ್ನಗಳು ನಡೆಯಬೇಕು. ಒಂದು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸುವುದು. ಇನ್ನೊಂದು ನಿತ್ಯದ ಹೊರೆಯಿಂದ ಬಿಡುಗಡೆ ಪಡೆಯುವಂತಹ ಸೌಲಭ್ಯಗಳನ್ನು ಕಲ್ಪಿಸಬೇಕು ಹಾಗು ಹೊರಗಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಸಾಧ್ಯವಾಗುವಂತೆ ಮಾಡಬೇಕು. ಮಹಿಳೆಯರ ಭಾಗವಹಿಸುವಿಕೆಗೆ ಒಂದು ಸೈದ್ಧಾಂತಿಕ ನೆಲೆಯೂ ಇದೆ. ಮಹಿಳೆಯರು ಮೂಲೆ ಗುಂಪಾಗುವುದಕ್ಕೆ ಸಮಾಜದ ಪಿತೃಪ್ರಧಾನ ಶಕ್ತಿಗಳು ಕಾರಣವಾಗುತ್ತವೆ. ಇದು ಬದಲಾಗದೆ, ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶವಾಗಲಿ, ನೆಲೆಯಾಗಲಿ ಸಿಗುವುದು ಕಷ್ಟ.

ಜನಪರ ಸಾಮಾಜಿಕ ಚಳುವಳಿಗಳಲ್ಲಿ - ಆಧುನಿಕ, ಯಾಂತ್ರೀಕೃತ ಮೀನುಗಾರಿಕೆಯಿಂದ ವಾತಾವರಣದ ಮೇಲೆ ಉಂಟಾಗುವ ದುಷ್ಪರಿಣಾಮ, ಆಧುನಿಕ ಕೈಗಾರಿಕೋದ್ಯಮ, ಪ್ರವಾಸೋದ್ಯಮದಲ್ಲಿನ ಹೊಸ ಅಲೆಗಳು - ಇವೆಲ್ಲವೂ ಬೇರೆ ಪ್ರದೇಶದ ಸಮುದಾಯಗಳ ಮೇಲೆ ಪರಿಣಾಮ ಬೀರಿವೆ. ಯಾಂತ್ರೀಕೃತ ಆಧುನಿಕ ಅಭಿವೃದ್ಧಿಯು ಸಂಪನ್ಮೂಲಗಳನ್ನು ಅತಿಯಾಗಿ ಬಳಸುವುದಲ್ಲದೆ, ಕೆಲವೇ ಜನರಿಗೆ ಅನ್ವಯವಾಗುವಂತಹದು. ಇದರಿಂದಾಗಿ ಬಡ ಜನರು ಹೆಚ್ಚಿನ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಮಹಿಳೆಯರ ಸ್ಥಿತಿ ಇನ್ನೂ ಹದಗೆಡುತ್ತಿದೆ. ಉದ್ಯೋಗವಿಲ್ಲದೆ ಮಹಿಳೆಯರು ಕಳಬಟ್ಟಿ ಮಾಡುವಂತ, ವೇಶ್ಯಾವಾಟಿಕೆಯಂತಹ ಉದ್ಯೋಗಕ್ಕೂ ಹೋಗುವ ಸ್ಥಿತಿ ಬಂದಿದೆ. ನೈಸರ್ಗಿಕ ಸಂಪನ್ಮೂಲಗಳೆ ಆಧಾರವಾಗಿರುವ ಮೀನುಗಾರಿಕೆಯಲ್ಲಿ, ವಾತಾವರಣದ ಸಮತೋಲನವು ಬಹುಮುಖ್ಯ. ಆಧುನೀಕರಣವು ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ, ಕೆಲವೇ ಶ್ರೀಮಂತರಿಗೆ ಸಾಧ್ಯವಾಗುವ ಆಧುನಿಕ ಸೌಲಭ್ಯಗಳಿಂದ ನಿರೋದ್ಯೋಗ ಬಡತನ ಹೆಚ್ಚುತ್ತಿದೆ. ಎಚ್ಚೆತ್ತ ಜನಸಮೂಹ ಸಂಪನ್ಮೂಲದ ಮೇಲಿನ ಹಕ್ಕಿಗಾಗಿ ಚಳುವಳಿ ನಡೆಸಿವೆ. ಚಳುವಳಿಯ ಹೋರಾಟಗಳು ಬಲಗೊಳ್ಳಬೇಕಾದರೆ ಲಿಂಗಸಮಾನತೆಯ ಅರಿವು ಮೂಡಬೇಕು ಎಂದು ನಾನು ಬಲವಾಗಿ ನಂಬುತ್ತೇನೆ. ಉದಾಹರಣೆಗೆ ಮೀನುಗಾರರು ಟ್ರಾಲರ್ (ವಿಶಾಲ ಬಾಯಿಯುಳ್ಳ ದೊಡ್ಡ ಬಲೆ. ಅದನ್ನು ದೋಣಿಯ ಮೂಲಕ ಸಮುದ್ರ ತಳದಲ್ಲಿ ಹರಡುತ್ತಾರೆ. ಇದರಿಂದ ಒಮ್ಮೆಗೆ ಟನ್‌ಗಟ್ಟಲೆ ಮೀನು ಹಿಡಿಯಲು ಸಾಧ್ಯ) ಮೇಲೆ ನಿಷೇಧ ಹೇರಬೇಕೆಂದು ಕೇಳಿ, ತಾವೆ ಸಣ್ಣ ಟ್ರಾಲರ್‌ಗಳನ್ನು, ಯಂತ್ರದಿಂದ

ಮಾಡಿದ ಬಲೆಗಳನ್ನು ಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಸಂಪನ್ಮೂಲದ ಮೇಲಾಗಲಿ, ಮಹಿಳೆಯರ ಮೇಲಾಗಲಿ ಆಗುವ ಪರಿಣಾಮ ಒಂದೆ. ಯಾಂತ್ರೀಕೃತ ಮೀನುಗಾರಿಕೆಯಿಂದಾಗಿ ಗಂಡಸರು ಹೆಚ್ಚಿನ ಸಮಯವನ್ನು ಸಮುದ್ರದಲ್ಲೆ ಕಳೆದರೆ, ಕುಟುಂಬದ ಎಲ್ಲಾ ಹೊರೆಯನ್ನು ಮಹಿಳೆ ಹೊರುತ್ತಾಳೆ. ಇದು ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಿದೆ.

'ಕೆಲಸ' ಹಾಗು 'ಕಾರ್ಮಿಕ ವರ್ಗ'ದ ಸಂಕುಚಿತ ಅರ್ಥೈಸುವಿಕೆಯಿಂದಾಗಿ ಸಂಘಟಿತ ಟ್ರೇಡ್ ಯೂನಿಯನ್ ಚಳುವಳಿಗಳು ಕೂಡ ಪುರುಷ ಪ್ರಧಾನ, ಪುರುಷ ಪಕ್ಷಪಾತಿಯಾಗಿದೆ. ದುಡಿಯುವ ಜನರ ಜೀವನದ ಗುಣಮಟ್ಟ ಹಾಗು ಅವರು ಅವಲಂಭಿಸಿರುವ ಉದ್ಯೋಗವನ್ನು ಹೀನಾಯಿಸುವ ಶಕ್ತಿಗಳನ್ನು ಎದುರಿಸಲು ಅವು ಸೋತಿವೆ. ಅಸಂಘಟಿತ ಕ್ಷೇತ್ರಗಳಲ್ಲೂ ಹೋರಾಟ ಬಲವಾಗುತ್ತಿದೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರ ಚಳುವಳಿಯವರು ತಮ್ಮ ಉಳಿವಿನ ಅಗತ್ಯಗಳಿಗಾಗಿ ಎಲ್ಲವನ್ನು ಪಣವಿಟ್ಟು ದುಡಿಯುತ್ತಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಮೀನುಗಾರಿಕೆ ಕಾರ್ಮಿಕರ ಚಳುವಳಿಯು ಟ್ರಾಲರ್‌ಗಳಲ್ಲಿ ಮೀನು ಹಿಡಿಯುವುದರ, ವಿದೇಶಿ ದೋಣಿಗಳ ವಿರುದ್ಧ ಹೋರಾಡುತ್ತಿದೆ. ಚಳುವಳಿಯ ನಾಯಕರು ಪೂರ್ತಿ ಸಮಯವನ್ನು ಇದಕ್ಕೆ ವಿನಿಯೋಗಿಸುತ್ತಿದ್ದಾರೆ. ಇದರ ಜೊತೆ, ಜೊತೆಗೆ ಸಮುದಾಯವು ಎದುರಿಸುತ್ತಿರುವ ಇತರ ಸಮಸ್ಯೆಗಳಿಗೂ ಗಮನ ನೀಡುವ ಅಗತ್ಯವಿದೆ. ಮಾರಾಟ ಮಾಡಲು ಮೀನಿನ ಕೊರತೆ, ಕುಡಿಯುವ ನೀರಿನ ಕೊರತೆ, ಅನಾರೋಗ್ಯದ ಹೆಚ್ಚಳ, ವೇಶ್ಯಾವಾಟಿಕೆ, ಕಳಬಟ್ಟಿ ಮುಂತಾದ ಸಮಸ್ಯೆಗಳಿಗೆ ತುರ್ತಾಗಿ ಗಮನ ನೀಡಬೇಕು.

ಮೀನುಗಾರಿಕೆಯಲ್ಲಿ ನಡೆಯುತ್ತಿರುವ ಚಳುವಳಿಗಳು, ಮೀನುಗಾರಿಕೆಯಲ್ಲಿರುವ ಮಹಿಳೆಯರ ಪಾತ್ರವನ್ನು ಗಂಭೀರವಾಗಿ ಪರಿಗಣಿಸಬೇಕು ಅಲ್ಲದೆ 'ಸಂಬಳವಿಲ್ಲದ ದುಡಿಮೆ'ಯ ಪ್ರಾಮುಖ್ಯತೆಯನ್ನು ಮನಗಾಣಬೇಕು. ಇದು ಮೀನುಗಾರಿಕೆಯ ಉಳಿವಿಗೆ ಕಾರಣವಾಗಿರುವ, ತಕ್ಷಣಕ್ಕೆ ಲಾಭ ನೀಡದ ಎಷ್ಟೋ ಪಾಲನೆ'ಯೇ ಮುಂತಾದ ವಿಷಯಗಳಿಗೆ ಅನ್ವಯಿಸುತ್ತದೆ. ಈ 'ಸಂಬಳವಿಲ್ಲದ ದುಡಿಮೆ' ಅಥವಾ 'ಪಾಲನೆ' - ಮಹಿಳೆಯರದೆ ಕೊಡುಗೆ ಅಥವಾ ಹೊರೆಯಾಗಬೇಕಿಲ್ಲ. ಇದು ಸಾಧ್ಯವಾಗುವುದು ಲಿಂಗ ಸಮಾನತೆ ಇದ್ದಾಗ ಮಾತ್ರ. ಲಿಂಗಸಮಾನತೆ ಮೂಡಿಸುವಲ್ಲಿ ಚಳುವಳಿಯ ಪಾತ್ರ ದೊಡ್ಡದು.

ಮೀನು ಕಾರ್ಮಿಕರ ಚಳುವಳಿಯೊಳಗೆ, 'ಮೀನು ಕಾರ್ಮಿಕರು' ಎಂಬ ವಿವರಣೆಯು ಮಹಿಳೆಯರನ್ನು ಒಳಗೊಳ್ಳಬೇಕೆಂಬುದಕ್ಕೆ ಹೋರಾಟವೇ ನಡೆಯಿತು. ಕೇರಳದ ಕೆಲವು ಜಿಲ್ಲೆಗಳಲ್ಲಿ, ಮಹಿಳೆಯರು ನೇರವಾಗಿ ಮೀನುಗಾರಿಕೆಯಲ್ಲಿ ತೊಡಗಿದ್ದರೂ ಸಹ ಅವರನ್ನು ಕಮಿಟಿಯಲ್ಲಿ ಚುನಾಯಿಸುವುದಿಲ್ಲ. ಪುರುಷರಿಗಷ್ಟೆ ಸದಸ್ಯತ್ವ! ಮಹಿಳೆಯರನ್ನು ಸದಸ್ಯರನ್ನಾಗಿ ಒಪ್ಪಿಕೊಳ್ಳಲು ಸಮಸ್ಯೆ ಇರುವಾಗ ಇನ್ನು ಅವರ ಸಮಸ್ಯೆಗಳನ್ನು ಯೂನಿಯನ್‌ಗಳು ಯಾವಾಗ ಎತ್ತಿಕೊಳ್ಳುವುದು? ಮಹಿಳೆಯರ ಸಮಸ್ಯೆಗಳನ್ನು ಎತ್ತಿಕೊಂಡಿರುವಂತ ಜಿಲ್ಲೆಗಳಲ್ಲೂ ಸಹ ಒಪ್ಪಿಕೊಳ್ಳುವಂತೆ ಮಾಡಲು ಹೋರಾಟವನ್ನೆ ಮಾಡಬೇಕಾಯಿತು. ಸಾಮಾನ್ಯ ನಂಬಿಕೆ ಏನೆಂದರೆ ಮಹಿಳೆಯರ ಸಮಸ್ಯೆಗಳು ಅಥವಾ ಉಳಿವಿನ ಸಮಸ್ಯೆಗಳಾದ - ನೀರು ಆರೋಗ್ಯ ಸೇವೆ, ಶಿಕ್ಷಣ ಸೌಲಭ್ಯ, ಕುಡಿತ, ಹೆಂಡತಿಯರನ್ನು ಹೊಡೆಯುವುದು - ಇವೆಲ್ಲ ಮಹಿಳೆಯರಿಗೆ ಸಂಬಂಧಪಟ್ಟ ವಿಶಯಗಳೆ, ಅದಕ್ಕಾಗಿ ಅವರು ಹೋರಾಡಲೇಬೇಕು.

ಮಹಿಳೆಯರ ಸಾಮರ್ಥ್ಯವನ್ನು ಗುರುತಿಸಿ, ಅದನ್ನು ಸಮರ್ಪಕವಾಗಿ ಚಳುವಳಿಯಲ್ಲಿ ದುಡಿಸಿಕೊಳ್ಳಬೇಕು. ಒಟ್ಟಿನಲ್ಲಿ ಎಲ್ಲಾ ಸಾಮಾಜಿಕ ಪ್ರಕ್ರಿಯೆಗಳಲ್ಲಿನ ಚಳುವಳಿಗಳಲ್ಲಿ ಲಿಂಗಸಮಾನತೆಯ ಅರಿವು ಮೂಡಬೇಕು. ಆಗಲೆ ಹೋರಾಟಗಳು ಅರ್ಥಪೂರ್ಣವಾಗುವುದೆಂದು ನಾನು ಅಚಲವಾಗಿ ನಂಬುತ್ತೇನೆ.

1989ರಲ್ಲಿ ರಾಷ್ಟ್ರೀಯ ಮೀನು ಕಾರ್ಮಿಕರ ವೇದಿಕೆಯು 'ಕರಾವಳಿ ಪರಿಸರ ಯಾತ್ರೆ'ಯನ್ನು ವ್ಯವಸ್ಥಾಪಿಸಿತ್ತು. ಯಾತ್ರೆ ಪಶ್ಚಿಮದ ಮಹಾರಾಷ್ಟ್ರದಿಂದ, ಪೂರ್ವದ ಬಂಗಾಳದಿಂದ ಪ್ರಾರಂಭವಾಗಿ ದಕ್ಷಿಣದ ಕನ್ಯಾಕುಮಾರಿಯಲ್ಲಿ ಒಟ್ಟು ಸೇರಿ, ಮುಕ್ತಾಯವಾಯಿತು. ನೂರಾರು ಮಹಿಳೆಯರು ಸ್ವಯಂ ಪ್ರೇರಿತರಾಗಿ ಯಾತ್ರೆಯಲ್ಲಿ ಪಾಲ್ಗೊಂಡರು. 'ಜಲವನ್ನು ರಕ್ಷಿಸಿ, ಜೀವನವನ್ನು ರಕ್ಷಿಸಿ' ಎಂಬುದು ಯಾತ್ರೆಯ ಘೋಷಣೆಯಾಗಿತ್ತು. ಈ ಘೋಷಣೆ ಅವರ ಹೃದಯಕ್ಕೆ ಹತ್ತಿರವಾಗಿತ್ತು. ಇದು, ಏನೇ ಅನ್ಯಾಯವಾಗಲಿ ಅದನ್ನು ಎದುರಿಸುವ ಶಕ್ತಿಯನ್ನು ಅವರಿಗೆ ನೀಡಿತ್ತು.

ಅನಿವಾರ್ಯ ತಾಂತ್ರಿಕ ಅನಾನುಕೂಲತೆಯಿಂದಾಗಿ 'ಮಾನಸ'ದ ನವಂಬರ್-ಡಿಸಂಬರ್ ಸಂಚಿಕೆಗಳನ್ನು ಒಟ್ಟಿಗೆ ತರುತ್ತಿದ್ದೇವೆ. ಆದರೆ ಓದುಗರ ಹಿತದೃಷ್ಟಿಯಿಂದ ಕೊರತೆಯನ್ನು ಸರಿದೂಗಿಸಲು ಪುಟಗಳನ್ನು ಹೆಚ್ಚಿಸಿದ್ದೇವೆ.
- ಸಂಪಾದಕ ಮಂಡಳಿ

ಲಿಂಗ ನಿರ್ಣಯಿಸುವ ತಂತ್ರಜ್ಞಾನ ಮತ್ತು ಸರ್ಕಾರದ ನೀತಿ

- ಡಾಲಿ ಅರೋರ

ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ತಂತ್ರಜ್ಞಾನಗಳು ತೀವ್ರಗತಿಯಲ್ಲಿ ಬೆಳೆಯುತ್ತಿದ್ದು ಅವು ಸಂತಾನೋತ್ಪತ್ತಿ ವಲಯಕ್ಕೂ ತಮ್ಮ ದಾಪುಗಾಲನ್ನು ಹಾಕುತ್ತಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ, ಸಂತಾನೋತ್ಪತ್ತಿ ಕಾರ್ಯಗಳನ್ನ ನಿರ್ವಹಿಸುವ ಆರ್ಟಿಫಿಶಿಯಲ್ ಇನ್‌ಸೆಮಿನೇಶನ್, ಇನ್‌ವಿಟ್ರೊ ಫರ್ಟಿಲೈಸೇಶನ್, ಪ್ರಿನೇಟಲ್ ಡಯಾಗ್ನಿಸಿಸ್, ಎಂಬ್ರಿಯೊ ಟ್ರಾನ್ಸ್‌ಫರ್ ಮೊದಲಾದವು. ಈ ಎಲ್ಲಾ ತಂತ್ರಜ್ಞಾನಗಳು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅವರ ಜೀವಕ್ಕೆ ಅಪಾಯ ತರುವಂತ ಕೆಲವು ಭಯಾನಕ ತಂತ್ರಜ್ಞಾನಗಳು ಚಾಲ್ತಿಯಲ್ಲಿವೆ. ಸಾಮಾಜಿಕ ಸಂಬಂಧಗಳನ್ನು ಕೆಡಿಸುವುದರ ಜೊತೆಗೆ ಸಾಮಾಜಿಕ ಆರ್ಥಿಕ ಸಂದರ್ಭದಲ್ಲಿ ಅವುಗಳ ದುರುಪಯೋಗವು ಹೆಚ್ಚಾಗುತ್ತಿದೆ. ಆಶ್ಚರ್ಯದ ಸಂಗತಿಯೆಂದರೆ ಎಷ್ಟೆ ದುಬಾರಿಯಾದರೂ ಜನರು ಈ ತಂತ್ರಜ್ಞಾನಗಳನ್ನು ದಾರಾಳವಾಗಿ ಸ್ವೀಕರಿಸುತ್ತಿದ್ದಾರೆ. ಇದಕ್ಕೆ ಕಾರಣವೇನು? ಈ ಅಪಾಯಕಾರಿ ತಂತ್ರಜ್ಞಾನಗಳು ಹೇಗೆ ಜನಮನ್ನಣೆ ಗಳಿಸುತ್ತಿವೆ? ಇದರಲ್ಲಿ ಆಯ್ಕೆಗೆ ಅವಕಾಶವಿದೆಯೆ? ಅಥವಾ ತಂತ್ರಜ್ಞಾನದ ನಿಯಂತ್ರಣ ಶಕ್ತಿಯನ್ನು ಸೂಚಿಸುತ್ತದೆಯೇ? ಈ ಪರಿಸ್ಥಿತಿಯನ್ನು ಬದಲಾಯಿಸುವುದು ಹೇಗೆ? ಎಂಬ ಪ್ರಶ್ನೆಗಳು ನಮ್ಮಲ್ಲಿ ಮೂಡಬಹುದು. ಇತ್ತೀಚೆಗೆ ವ್ಯಾಪಕವಾಗಿ ಬೆಳೆದು ಬಂದಿರುವ ಲಿಂಗ ನಿರ್ಣಯ ತಂತ್ರಜ್ಞಾನ ಮತ್ತು ಸರ್ಕಾರದ ನೀತಿಯ ಬಗ್ಗೆ ಅಧ್ಯಯನ ಮಾಡುವುದರ ಮೂಲಕ ಈ ಪ್ರಶ್ನೆಗಳಿಗೆ ಉತ್ತರ ಹುಡುಕ ಬಹುದು. ಇಲ್ಲಿನ ಲೇಖನವನ್ನು, ಈ ತಂತ್ರಜ್ಞಾನಗಳಿಗೆ ಮಹಿಳೆಯರು ಹೇಗೆ ಬಲಿಪಶುಗಳಾಗುತ್ತಿದ್ದಾರೆ ಮತ್ತು ಇದರ ಬಗ್ಗೆ ಸರ್ಕಾರದ ನೀತಿ ಏನು ಹೇಳುತ್ತದೆ ಅನ್ನುವ ವಿಷಯದ ಸುತ್ತ ಕೇಂದ್ರೀಕರಿಸಲಾಗಿದೆ.

ಈ ವಿಷಯಗಳನ್ನು ಅರ್ಥಪೂರ್ಣವಾಗಿ ಪ್ರಸ್ತುತ ಪಡಿಸಬೇಕೆಂದರೆ ತಂತ್ರಜ್ಞಾನಗಳ ರಾಜಕೀಯ - ಆರ್ಥಿಕ ಸ್ವರೂಪದ ಕಡೆ ನಮ್ಮ ಗಮನ ಹರಿಸುವುದು ಒಳ್ಳೆಯದು. ಈ ನಿಟ್ಟಿನಲ್ಲಿ, (a) ಪಟ್ಟಬದ್ಧ ಹಿತಾಸಕ್ತಿಗಳು ತಮಗೆ ಅನುಕೂಲವಾಗುವಂತೆ ನಿರೂಪಿಸಿರುವ ಈ ತಂತ್ರಜ್ಞಾನಗಳು ಪುರುಷ ಪ್ರಾಧಾನ್ಯತೆಯನ್ನು ಬಲಪಡಿಸುತ್ತವೆ. ಹೆಣ್ಣು ಮಗು ಹುಟ್ಟುವ ಮೊದಲು ಮತ್ತು ನಂತರ ತಾರತಮ್ಯ ತೋರುವ ಪದ್ಧತಿಯನ್ನು ಪೋಷಿಸುವ ಈ ಆಧುನಿಕ ತಂತ್ರಜ್ಞಾನಗಳನ್ನು ಬೆಂಬಲಿಸುವ ವಾದಗಳನ್ನು ಅವ್ಯಕ್ತಗೊಳಿಸುವುದು ಮತ್ತು

(b) ಸರ್ಕಾರದ ಮಧ್ಯಸ್ತಿಕೆ ಪಾತ್ರವನ್ನು ಪರಿಶೀಲಿಸುವುದರ ಜೊತೆಗೆ, ಈ ತಂತ್ರಜ್ಞಾನಗಳನ್ನು ವ್ಯಾಪಕವಾಗಿ ಹರಡುತ್ತಿರುವ ಪ್ರಬಲ ಶಕ್ತಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಪ್ರತಿಕ್ರಿಯೆ ತೋರುತ್ತಿದೆ ಎಂದು ಪರೀಕ್ಷಿಸುವುದು ಈ ಲೇಖನದ ಉದ್ದೇಶ. ಲೇಖನವು ಮುಖ್ಯವಾಗಿ ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನವನ್ನು ವಿಶ್ಲೇಷಿಸುತ್ತದೆ. ಕಳೆದ ಹಲವಾರು ವರ್ಷಗಳಿಂದ ಈ ವಿಧಾನವನ್ನು ಲಿಂಗ ನಿರ್ಣಯ ಕಾರ್ಯದಲ್ಲಿ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಅನೇಕ ಲೋಪದೋಷಗಳಿಂದ ಕೂಡಿದ, ಇನ್ನೂ ಪ್ರಶ್ನೆಯಾಗೇ ಉಳಿದಿರುವ ನಮ್ಮ ಭಾರತದ ಸಾಮಾಜಿಕ ನ್ಯಾಯಕ್ಕೆ ಇದು ಒಂದು ಹೊಸ ಸವಾಲಾಗಿದೆ. ಈ ಲೇಖನದ ಮೊದಲ ಭಾಗ, ಲಿಂಗ ನಿರ್ಣಯ ತಂತ್ರಜ್ಞಾನಗಳು ಎಷ್ಟರ ಮಟ್ಟಿಗೆ ಪ್ರಗತಿಪರವಾಗಿವೆ, ಯಾಕೆ ಜನ ಮನ್ನಣೆ ಗಳಿಸುತ್ತಿವೆ, ಮಹಿಳೆಯರ ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತಿವೆ, ಮಾನವ ಹಕ್ಕನ್ನು ಆಧಾರವಾಗಿಟ್ಟುಕೊಂಡು ಹೇಗೆ ಈ ತಂತ್ರಜ್ಞಾನಗಳಿಗೆ ಅರ್ಥ ನೀಡಲಾಗುತ್ತಿದೆ ಎಂಬುದನ್ನು ವಿಶ್ಲೇಷಿಸುತ್ತದೆ. ಎರಡನೆಯ ಭಾಗ ಈ ವಲಯದಲ್ಲಿ ಕಾನೂನಿನ ಮಧ್ಯಸ್ತಿಕೆಯ ಸ್ವರೂಪ ಮತ್ತು ಮಿತಿಗಳನ್ನು ವಿಶ್ಲೇಷಿಸುತ್ತದೆ. ತಂತ್ರಜ್ಞಾನಗಳ ಬಳಕೆ ಮತ್ತು ಸರ್ಕಾರದ ನೀತಿ ಎರಡರಲ್ಲೂ ಮಹಿಳೆಯರು ಹೇಗೆ ಬಲಿಪಶುಗಳಾಗುತ್ತಾರೆ ಎಂದು ಗುರುತಿಸುವುದೆ ಈ ಲೇಖನದ ಉದ್ದೇಶ. ಇಲ್ಲಿ ಗಮನಿಸ ಬೇಕಾದ ಅಂಶವೆಂದರೆ ಅನೇಕ ಪಟ್ಟಬದ್ಧ ಹಿತಾಸಕ್ತಿಗಳು ಇದರಲ್ಲಿ ಕೆಲಸ ಮಾಡುತ್ತವೆ. ವಾಣಿಜ್ಯೋದ್ಯಮಿಗಳು ಮತ್ತು ವೃತ್ತಿಪರ ವೈದ್ಯರು ಇವರಿಬ್ಬರು ಮುಖ್ಯ ಅಂಶಗಳನ್ನು ರೂಪಿಸುತ್ತಾರೆ. ಆದರೆ ಬಡವರು ಮತ್ತು ಮಧ್ಯಮ ವರ್ಗದವರು ಬಲಿಪಶುಗಳಾಗುತ್ತಾರೆ. ಈ ತಂತ್ರಜ್ಞಾನಗಳನ್ನ ಉಪಯೋಗಿಸಿದರೂ, ಉಪಯೋಗಿಸದಿದ್ದರೂ ಕಷ್ಟ ಅನುಭವಿಸುವವರು ಹೆಂಗಸರು.

ಭಾಗ I

ತಂತ್ರಜ್ಞಾನ ಮತ್ತು ನ್ಯಾಯಸಮ್ಮತಗೊಳಿಸುವಿಕೆ

ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನದಲ್ಲಿ, ಅಲ್ಟ್ರಾಸೋನೋಗ್ರಫಿ, ಆಮ್ನಿಯೋ ಸಿಂಥಿಸಿಸ್, ಕೋರಿಯನ್ ವಿಲ್ಲಿ ಬಯೋಪ್ಸಿ, ಫೀಟೋಸ್ಕೋಪಿ, ಮೆಟರ್ನಲ್ ಸೀರಮ್ ಅನಾಲಿಸಿಸ್ ಮುಂತಾದ ವಿಧಾನಗಳು ಸೇರಿವೆ. ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣದಲ್ಲಿ ಅಸ್ವಾಭಾವಿಕ ಬೆಳವಣಿಗೆ ಅಥವಾ ದೋಷಗಳೇನಾದರೂ ಇದೆಯೆ ಎಂದು ಪರೀಕ್ಷಿಸಿ ಇದ್ದರೆ ಗರ್ಭಪಾತ ಅಥವಾ ಥೆರಪಿ ಮೂಲಕ ಸರಿಪಡಿಸುವುದು ಈ ತಂತ್ರಜ್ಞಾನಗಳ ಉದ್ದೇಶ. ಭಾರತದಲ್ಲಿ ಈ ವಿಧಾನ ತುಂಬ ಬೇಗ ಬಳಕೆಗೆ ಬಂತು. ದುರಾದೃಷ್ಟವೆಂದರೆ ಮಹಿಳೆ ಮತ್ತು ಮಕ್ಕಳ ಆರೋಗ್ಯವನ್ನು ಉತ್ತಮ ಪಡಿಸಲು ಈ ತಂತ್ರಜ್ಞಾನಗಳನ್ನು ಬಳಸುತ್ತಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ಹೆಸರು ಮಾಡಲು, ಹಣ ಗಳಿಸಲು, ಮಗುವಿನ ಲಿಂಗ ಯಾವುದೆಂದು ತಿಳಿದುಕೊಳ್ಳಲು ಅದರಲ್ಲೂ ವಿಶಿಷ್ಟವಾಗಿ, ಹೆಣ್ಣು ಭ್ರೂಣವೆ ಎಂದು ಪರೀಕ್ಷಿಸಲು ಈ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಒಂದು ವರದಿಯ ಪ್ರಕಾರ, ೧೯೭೮-೮೨ರಲ್ಲಿ ದೇಶದಲ್ಲಿ ಲಿಂಗ ನಿರ್ಣಯದ ನಂತರ ಸುಮಾರು ೭೮,೦೦೦ ಹೆಣ್ಣು ಭ್ರೂಣ ಹತ್ಯೆ ಮಾಡಲಾಗಿದೆ. ೮೬-೮೭ರಲ್ಲಿ ೩೦,೦೦೦-೫೦,೦೦೦ ಹೆಣ್ಣು ಭ್ರೂಣಗಳ ಗರ್ಭಪಾತ ಮಾಡಲಾಗಿದೆ. ಮುಂಬಯಿಯಲ್ಲಿ ಲಿಂಗ ನಿರ್ಣಯಿಸುವ ಕ್ಲಿನಿಕ್‌ಗಳ ಸಂಖ್ಯೆ ಎರಡು ಮೂರು ಪಟ್ಟು ಹೆಚ್ಚಾಗಿದೆ. ಅದು ೧೦ರಿಂದ ೨೪೮ಕ್ಕೆ ಏರಿತು. ದೆಹಲಿಯ ಕ್ಲಿನಿಕ್‌ಗಳಲ್ಲಿ ಸುಮಾರು ೧೩,೦೦೦ ಲಿಂಗ ಪರೀಕ್ಷೆಗಳನ್ನು ಮಾಡಲಾಗಿದೆ, ೧೯೮೭-೮೮ರಲ್ಲಿ, (ಮೂಲ - ಸಹೇಲಿ, ದೆಹಲಿ). ಪತ್ರಿಕೆ, ರೈಲು ಬಸ್ಸುಗಳ ಮೇಲೆ, ಗೋಡೆ ಬರಹ, ಬಿತ್ತಿ ಪತ್ರ, ಕಾಗದ ಮುಂತಾದ ಜಾಹಿರಾತುಗಳ ಮೂಲಕ ಇವುಗಳಿಗೆ ಪ್ರಚಾರ ನೀಡುವುದನ್ನು ನೋಡಿದರೆ ಈ ತಂತ್ರಜ್ಞಾನಗಳ ಬಳಕೆಯ ಹಿಂದಿರುವ ವಾಣಿಜ್ಯ ಉದ್ದೇಶ ಸ್ಪಷ್ಟವಾಗಿ ಗೋಚರಿಸುತ್ತದೆ. ಅದರ ಮುಖ್ಯ ಗುರಿ ಬೇಡವಾದ ಹೆಣ್ಣು ಮಗುವಿನ ಜನನವನ್ನು ಪಡೆಯುವುದು.

ಈ ತಂತ್ರಜ್ಞಾನಗಳ ಬಳಕೆ ಯಾವುದೇ ಅಡೆತಡೆಯಿಲ್ಲದೆ ಮುಂದುವರೆದುಕೊಂಡು ಹೋಗುತ್ತಿದೆ. ಭಾರತದ ರಿಜಿಸ್ಟ್ರಾರ್ ಜನರಲ್, ೧೯೯೩-೯೬ರಲ್ಲಿ ೩.೬ ಲಕ್ಷ ಹೆಣ್ಣು ಭ್ರೂಣಗಳ ಗರ್ಭಪಾತ ಮಾಡಲಾಗಿದೆ ಎಂದು ಒಪ್ಪಿಕೊಂಡಿದೆ. ಇದನ್ನು ಕೇವಲ ಆಸ್ಪತ್ರೆಯ ಜನನ ದಾಖಲಾತಿಯಿಂದ ಅಂದಾಜು ಮಾಡಲಾಗಿದೆ. ದಾಖಲಾಗದೆಯಿರುವ ಎಷ್ಟು ಲಿಂಗ ಪರೀಕ್ಷೆಗಳನ್ನು ಮಾಡಲಾಗಿದೆ, ಪ್ರಸ್ತುತ ಎಷ್ಟು ಲಿಂಗ ಪರೀಕ್ಷೆಗಳು ನಡೆಯುತ್ತಿವೆ ಅನ್ನುವುದರ ಬಗ್ಗೆ ಅಂಕಿ ಅಂಶಗಳನ್ನು ಹೇಳುವುದು ಸಾಧ್ಯವಾಗದೆ ಹೋದರು, ಒಂದು ವರ್ಷದಲ್ಲಿ ಸುಮಾರು ೩ ಲಕ್ಷ ಲಿಂಗ ನಿರ್ಣಯ ಪರೀಕ್ಷೆಗಳು ನಡೆಯುತ್ತಿವೆ ಎಂದು ಅಂದಾಜು ಮಾಡಬಹುದು.

ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನವು ನಮ್ಮ ಜನಸಂಖ್ಯೆಯ ಸಮತೋಲನಕ್ಕೆ ದಕ್ಕೆ ತರುವುದಷ್ಟೇ ಅಲ್ಲ, ಮಹಿಳೆಯರ ಆರೋಗ್ಯಕ್ಕೂ ಅಪಾಯಕಾರಿಯಾಗಿದೆ. ಅನೇಕ ಕೇಸ್‌ಗಳಲ್ಲಿ, ಲಿಂಗ ಪರೀಕ್ಷೆಯ ನಂತರ ಮಾಡುವ ಗರ್ಭಪಾತ ಅಥವಾ ಭ್ರೂಣದ ಬಗ್ಗೆ ತಿಳಿದು ಬರುವ ತಪ್ಪು ಮಾಹಿತಿ ಸ್ತ್ರೀಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ತಂತ್ರಜ್ಞಾನದ ಬಳಕೆ ಸರಿಯಾಗಿ ಮಾಡದೆ ಇರುವುದರಿಂದ ಅಥವಾ ಬಳಕೆಯ ನಂತರ ಕೈಗೊಂಡ ಕ್ರಮದಿಂದ ಅನೇಕ ಅನಾಹುತಗಳು ಆಗುತ್ತವೆ. ಗರ್ಭಪಾತವನ್ನು ತುಂಬ ನಿಧಾನವಾಗಿ ಮಾಡುವುದರಿಂದ ಅಪಾಯಗಳು ಹೆಚ್ಚಾಗಿ ಕಂಡು ಬರುತ್ತವೆ. ಉದಾಹರಣೆಗೆ, ಗರ್ಭಧಾರಣೆಯಾದ ೧೫-೧೬ ವಾರಗಳ ನಂತರ ಆಮ್ನಿಯೋಸಿಂಥಿಸಿಸ್ ಸಾಧ್ಯ. ಆದರೆ ಅಲ್ಟ್ರಸೌಂಡ್ ವಿಧಾನದಲ್ಲಿ ಗರ್ಭಧಾರಣೆಯಾದ ೨೬-೨೮ ವಾರಗಳ ನಂತರ ಭ್ರೂಣದ ಲಿಂಗ ಪತ್ತೆಹಚ್ಚಲು ಸಾಧ್ಯ. ಪ್ರಸ್ತುತ ಈ ಅಲ್ಟ್ರಸೌಂಡ್ ತಂತ್ರಜ್ಞಾನವನ್ನು ಹೆಚ್ಚು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ.

ಮಹಾರಾಷ್ಟ್ರ ಬಿಟ್ಟರೆ ಇನ್ನೆಲ್ಲೂ ಈ ತಂತ್ರಜ್ಞಾನ ನಿಷೇಧವನ್ನು ಜಾರಿಗೊಳಿಸಿರಲಿಲ್ಲ. ೧೯೮೮ರಲ್ಲಿ ಮಹಾರಾಷ್ಟ್ರದಲ್ಲೂ ನಂತರ ಪಂಜಾಬ್, ಹರ್ಯಾಣ ಮತ್ತು ರಾಜಾಸ್ಥಾನಗಳಲ್ಲೂ ನಿಷೇದ ಕಾಯಿದೆಯನ್ನು ಜಾರಿಗೊಳಿಸಲಾಯಿತು. ತಂತ್ರಜ್ಞಾನದ ಒಂದು ಸ್ವರೂಪ ಮತ್ತು ವ್ಯಾಪಕತೆಯಿಂದ ಏನೇ ಕಾಯಿದೆ ಕಾನೂನು ಮಾಡಿದರು ಪ್ರಯೋಜನವಾಗುತ್ತಿಲ್ಲ. ಕೇಂದ್ರ ಸರ್ಕಾರಕ್ಕೂ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು ತೋರಿಕೆಗೆ ಕಾಟಾಚಾರಕ್ಕೆ ಕಾಯಿದೆ ಮಾಡಿದೆ. ಅದರಲ್ಲೆ ಅನೇಕ ಲೋಪದೋಷಗಳು ಇರುವುದರಿಂದ ತಂತ್ರಜ್ಞಾನಗಳ ಬಳಕೆ ಮುಂದುವರೆದಿದೆ. ಒಂದು ಕಡೆ, ಸಮಾಜದಲ್ಲಿ ಲಿಂಗಪಕ್ಷಪಾತವನ್ನು ಬಲಪಡಿಸುವುದರಿಂದ ಇನ್ನೊಂದು ಕಡೆ ಆಯ್ಕೆಯ ಹೆಸರಿನಲ್ಲಿ ತಾರತಮ್ಯ ತೋರುವ ವಿವಿಧ ಕಾಯಿದೆಗಳಿಂದ ಈ ವಿಷಯ ಇನ್ನೂ ವಿವಾದಾಸ್ಪದವಾಗುತ್ತಿದೆ ಮತ್ತು ಜಟಿಲವಾಗುತ್ತಿದೆ. ಈ ಎಲ್ಲಾ ಗೊಂದಲಗಳ ನಡುವೆಯೆ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು.

ಮೊದಲು ನಾವು ತಂತ್ರಜ್ಞಾನದ ವ್ಯಾಪಕ ಬಳಕೆ ಮತ್ತು ಅದಕ್ಕೆ ಯಾವ ರೀತಿಯಲ್ಲಿ ಕಾನೂನಿನ ರಕ್ಷಣೆ ಸಿಗುತ್ತಿದೆ ಎಂಬುದನ್ನು ಪರೀಕ್ಷಿಸಬೇಕು. ಈ ತಂತ್ರಜ್ಞಾನಗಳನ್ನು ಬೆಂಬಲಿಸುವವರ ವಾದವಿವಾದದಿಂದ ಐದು ಮುಖ್ಯ ಅಂಶಗಳನ್ನು ಗುರುತಿಸಿ ಅವುಗಳ ಪರಿಣಾಮಗಳನ್ನು ಕಂಡುಕೊಳ್ಳಬಹುದು.

ಈಗಿರುವ ಪರಿಸ್ಥಿತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡುವುದೇ ಆದರೆ ಮೊದಲು ಈ ವಿವಾದಾಸ್ಪದ ವಿಷಯದ ನಿಜ ಸ್ವರೂಪವನ್ನು ತಿಳಿದುಕೊಳ್ಳಬೇಕು. ವಾಣಿಜ್ಯೋದ್ಯಮಿಗಳು ಮತ್ತು ವೈದ್ಯರು ಹಣ ಹೆಸರು ಮಾಡಲು ಇದನ್ನ ಬೆಂಬಲಿಸುತ್ತಾರೆ. ಈ ತಂತ್ರಜ್ಞಾನಗಳನ್ನು ಬಳಸುವವರು ಬಳಸದವರು ಇಬ್ಬರಲ್ಲೂ ಬೆಂಬಲಿಗರು ಇರುವುದನ್ನು ನಾವು ಗಮನಿಸಬಹುದು.

ತಂತ್ರಜ್ಞಾನಗಳ ಮಿಥೀಕರಣ : ವಿಮೋಚನೆ ಮತ್ತು ಸಾಧನೆಯ ಹೆಸರಿನಲ್ಲಿ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ವೈದ್ಯರುಗಳು, ಗಂಡುಮಕ್ಕಳು ಬೇಕೆಂದು ಆಸೆ ಪಡುವ ಸಾಂಪ್ರದಾಯಿಕ ಮನೋಭಾವವಿರುವವರನ್ನು ಮತ್ತು ಅವಿದ್ಯಾವಂತರನ್ನು ತಮ್ಮ ಗಿರಾಕಿಗಳನ್ನಾಗಿ ಮಾಡಿಕೊಳ್ಳುವುದಷ್ಟೆ ಅಲ್ಲ, ಆಧುನಿಕ ಮನೋಭಾವವುಳ್ಳ ವಿದ್ಯಾವಂತ, ಶ್ರೀಮಂತ ಜನರನ್ನೂ ತಮ್ಮ ಗಿರಾಕಿಗಳನ್ನಾಗಿ ಮಾಡಿಕೊಂಡಿದ್ದಾರೆ. ಶ್ರೀಮಂತರಿಗೆ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು ವೈಚಾರಿಕತೆಯಲ್ಲದೆ ಬೇರೇನಲ್ಲ ಎಂದು ನಂಬಿಸುತ್ತಾರೆ. ಗಂಡು ಮಗುವಿಗಾಗಿ ಪುನಃ ಪುನಃ ಬಸಿರಾಗುವ ಹೊರೆಯಿಂದ ಹೆಂಗಸರನ್ನು ಮುಕ್ತಿಗೊಳಿಸುವುದೆ ಈ ತಂತ್ರಜ್ಞಾನಗಳ ಉದ್ದೇಶ, ಸಣ್ಣ ಕುಟುಂಬವನ್ನಿಟ್ಟುಕೊಂಡೆ ಗಂಡುಮಗುವಿಗಾಗಿ ಕಾಯಬಹುದು ಎಂದೆಲ್ಲ ಹೇಳಿ ಅವರನ್ನು ಒಲಿಸಿಕೊಳ್ಳುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ನಮ್ಮಲ್ಲಿ ಗಂಡು ಮಗುವಿಗೆ ಒಲವು ತೋರುವ ಪರಂಪರೆಯಿದೆ. ಇಂತಹ ಸಮಾಜದಲ್ಲಿ ವಿಜ್ಞಾನವು ನೀಡಿದ ಲಿಂಗ ಪರೀಕ್ಷೆ ಮತ್ತು ಹೆಣ್ಣು ಭ್ರೂಣದ ಗರ್ಭಪಾತದ ತಂತ್ರಜ್ಞಾನಗಳನ್ನು ಎಚ್ಚರಿಕೆಯಿಂದ ನಿರೂಪಿಸಿ ಅವುಗಳನ್ನು ಲಾಭದಾಯಕ ವ್ಯವಹಾರವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಪಾರಂಪರಿಕ ಪದ್ಧತಿಗಳನ್ನು ವಿರೋಧಿಸುವುದಕ್ಕಿಂದ ಈ ಆಧುನಿಕ ತಂತ್ರಜ್ಞಾನಗಳನ್ನು ವಿರೋಧಿಸುವುದು ಅಥವಾ ತಡೆಯುವುದು ಕಷ್ಟ. ಆದುದರಿಂದ ಈ ತಂತ್ರಜ್ಞಾನಗಳು ಹೆಣ್ಣು ಭ್ರೂಣಹತ್ಯೆಗೆ ದಾರಿ ಮಾಡಿಕೊಡುವುದಷ್ಟೆ ಅಲ್ಲ, ಕಾನೂನಿನ ರಕ್ಷಣೆ ನೀಡಿ ಅದನ್ನು ಮತ್ತಷ್ಟು ಬಲಪಡಿಸುತ್ತದೆ. ವಿಜ್ಞಾನದ ಕೊಡುಗೆಯನ್ನು ವಿಚಾರ ಮಾಡದೆ ಅನುಸರಿಸುವ ಅಪಾಯ ಉಂಟಾಗುತ್ತದೆ. ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನಕ್ಕೆ ನ್ಯಾಯ ಸಮ್ಮತಿ ನೀಡಿ ಕಾನೂನಿನ ರಕ್ಷಣೆ ನೀಡಿರುವುದರಿಂದ ಅದು ಕೊನೆಗೆ ಹೆಣ್ಣು ಭ್ರೂಣ ಹತ್ಯೆಗೆ ದಾರಿ ಕೊಡುತ್ತಿದೆ.

ಪ್ರಯೋಜನಯುಕ್ತತೆಯ ವ್ಯಾಖ್ಯಾನ : ಗಂಡು ಮಗುವಿನ ಒಲವು ಮತ್ತು ಆರ್ಥಿಕ ಹೊರೆಯೆನಿಸುವ ಹೆಣ್ಣು ಮಕ್ಕಳ ಜನನವನ್ನು ತಡೆಯಬೇಕೆನ್ನುವ ವಾದವು ಲಿಂಗ ನಿರ್ಣಯ ಪರೀಕ್ಷೆಗೆ ಮತ್ತಷ್ಟು ಬೆಂಬಲ ನೀಡುತ್ತದೆ. ಇದರ ಹಿಂದಿರುವ ತರ್ಕ, ಯಾವುದೇ ವಿಷಯ ಅದು ಸಮಾಜದ ದೃಷ್ಟಿಯಿಂದ ಕಡಿಮೆ ಲಾಭದಾಯಕವಾಗಿದ್ದು ವೈಯುಕ್ತಿಕವಾಗಿ ಹೆಚ್ಚು ಲಾಭದಾಯಕವಾಗಿದ್ದರೆ ಅಂತಹ ವಿಚಾರಗಳಿಗೆ ಹೆಚ್ಚು ಗಮನ ನೀಡಬೇಕಾಗಿಲ್ಲ. ಅವು ಮಾನವ ಸಂಬಂಧಗಳ ಮೇಲೆ ಅಷ್ಟು ಪ್ರಭಾವ ಬೀರುವುದಿಲ್ಲ ಎಂದು.

ಸಂಕುಚಿತ ಅರ್ಥ ನೀಡುವ ವ್ಯಕ್ತಿಗತ ಆಸಕ್ತಿಯುಳ್ಳ ಲೆಕ್ಕಚಾರಗಳ ಸ್ವರೂಪವೆ ಕೊನೆಗೆ ಸಮಾಜದ ಸ್ವರೂಪವಾಗಿ ಪರಿಣಮಿಸುತ್ತದೆ. ಈ ಅಂಶವನ್ನಿಟ್ಟುಕೊಂಡೆ ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನಕ್ಕೆ ಅರ್ಥ ವಿವರಣೆ ನೀಡಲಾಗುತ್ತದೆ. ಅರ್ಥಶಾಸ್ತ್ರದ 'ವೈಚಾರಿಕ ಮಾನವ' ಎಂಬ ತರ್ಕವು ಎಷ್ಟು ವ್ಯಕ್ತಿಗತವಾಗಿದೆ, ಆದರೂ ಅರ್ಥಶಾಸ್ತ್ರದ ತತ್ವಗಳನ್ನು ಸಾಮಾಜಿಕ ವಲಯಕ್ಕೂ ಅನ್ವಯಿಸಿ ಅಲ್ಲಿಯ ಸಮಸ್ಯೆಗಳನ್ನು ಬಗೆಹರಿಸಲು ಉಪಯೋಗಿಸಿಕೊಳ್ಳಲಾಗುತ್ತಿದೆ. ಅರ್ಥಶಾಸ್ತ್ರದ ಬೇಡಿಕೆ-ಪೂರೈಕೆ ಸಿದ್ಧಾಂತವನ್ನು ಮಹಿಳೆಯರಿಗೂ ಅನ್ವಯಿಸಿ, ಮಹಿಳೆಯರ ಸಂಖ್ಯೆ ಕಡಿಮೆಯಾದರೆ ಅವರ ಮೌಲ್ಯ ಹೆಚ್ಚಾಗುತ್ತದೆ ಎಂದು ಊಹೆ ಮಾಡಿ ಲಿಂಗ ನಿರ್ಣಯ ಮತ್ತು ಹೆಣ್ಣು ಭ್ರೂಣ ಹತ್ಯೆಗೆ ವೈಚಾರಿಕ ಕಾರಣ ನೀಡಲು ಪ್ರಯತ್ನಿಸಲಾಗಿದೆ. ಈ ವಾದದಲ್ಲಿ ಅನೇಕ ನ್ಯೂನತೆಗಳಿವೆ.

ಮೊದಲನೆಯದಾಗಿ ಇದು ಐತಿಹಾಸಿಕ ಅಂಶಗಳನ್ನು ನಿರ್ಲಕ್ಷಿಸಿದೆ. ಮಹಿಳೆಯರ ಸ್ಥಾನಮಾನವನ್ನು ಸೂಚಿಸುವ ಸೆಕ್ಸ್ ರೇಶಿಯೊ ಈಗಲೂ ಪ್ರತಿಕೂಲವಾಗಿದೆ. ಸೆಕ್ಸ್ ರೆಶಿಯೊ ಕಡಿಮೆಯಿರುವ ರಾಜ್ಯಗಳಾದ ಮಧ್ಯಪ್ರದೇಶ, ರಾಜಾಸ್ಥಾನ್, ಹರ್‍ಯಾಣ ಮತ್ತು ಪಂಜಾಬ್‌ಗಳಲ್ಲಿ ಈಗಲೂ ಒಬ್ಬ ಹೆಂಡತಿಯನ್ನು ಅಣ್ಣ ತಮ್ಮಂದಿರು ಮದುವೆಯಾಗುವ ಪದ್ಧತಿ, ಸತಿಪದ್ಧತಿಗಳು ಕಂಡುಬರುತ್ತವೆ.

ತಾರ್ಕಿಕವಾಗಿಯೂ ತನ್ನ ವಾದವನ್ನು ನಿರೂಪಿಸಲು ಈ ವಾದ ವಿಫಲವಾಗಿದೆ. ಬೇಡಿಕೆ ಪೂರೈಕೆಯ ತರ್ಕವನ್ನಿಟ್ಟುಕೊಂಡು ನೋಡಿದರೂ, ಹೆಂಗಸರ ಕೊರತೆ ಅವರ ಮೇಲಿನ ದೌರ್ಜನ್ಯವನ್ನು ಹೆಚ್ಚಿಸುತ್ತಿರುವುದನ್ನು ಕಾಣಬಹುದು. ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯರ ಅಪಹರಣ, ಅತ್ಯಾಚಾರ, ಬಹುಪತ್ನಿತ್ವ, ಮುಂತಾದ ದೌರ್ಜನ್ಯಗಳು ಹೆಚ್ಚುತ್ತಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ, ಮತ್ತು ಬಾಲ್ಯವಿವಾಹಗಳು ಹೆಚ್ಚಾದರು ಆಶ್ಚರ್ಯ ಪಡಬೇಕಾಗಿಲ್ಲ.

ಬೇಡಿಕೆ ಪೂರೈಕೆ ವಾದಕ್ಕಿರುವ ಮತ್ತೊಂದು ಆಕ್ಷೇಪಣೆಯೆಂದರೆ, ಮಹಿಳೆಯರ ಸ್ಥಿತಿಯನ್ನು ಅವರ ಸಂಖ್ಯೆಗೆ ಸಂಬಂಧಿಸಿ, ಅವರನ್ನ ಅಪಮೌಲ್ಯಗೊಳಿಸುವ ಮತ್ತು ಅವಕಾಶ

ವಂಚಿತರನ್ನಾಗಿಸುವ ರಾಜಕೀಯ ಅಂಶಗಳನ್ನು ಉದಾಸೀನ ಮಾಡಿರುವುದು. ಪುರುಷ ಪ್ರಧಾನ ವ್ಯವಸ್ಥೆಯನ್ನು ಬೆಂಬಲಿಸುವ ಕಾನೂನಾಗಲಿ ರಾಜಕೀಯ ರಚನೆಯಾಗಲಿ ಅವು ಮಹಿಳೆಯರ ಸ್ಥಾನಮಾನವನ್ನು ವಿವರಿಸುವಾಗ ಅವರ ಶಕ್ತಿಯನ್ನು ಅಪಮೌಲ್ಯಗೊಳಿಸಿ ತಪ್ಪುದಾರಿಗೆ ಎಳೆಯುತ್ತವೆ.

ಈ ರೀತಿಯ ತಂತ್ರಜ್ಞಾನಗಳು ಮಹಿಳೆಯರ ಬಗ್ಗೆ ಇರುವ ಪೂರ್ವಗ್ರಹ ನಂಬಿಕೆಯನ್ನು ಬದಲಾಯಿಸುವ ಬದಲು ಮತ್ತಷ್ಟು ಬಲಪಡಿಸುತ್ತದೆ. ಪರಿಹಾರ ತೋರಿಸುವ ಬದಲು ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸುತ್ತವೆ. ಮಹಿಳೆಯರ ಅಪಮೌಲ್ಯ ತಡೆಯುವುದಕ್ಕೆ ಹೆಣ್ಣು ಭ್ರೂಣ ಹತ್ಯೆ ಪರಿಹಾರವಲ್ಲ. ಇದು ಈಗಾಗಲೆ ಬೇರೂರಿರುವ ಲಿಂಗ ಪಕ್ಷಪಾತ ಮನೋಭಾವ ಮತ್ತು ಪದ್ಧತಿಗಳನ್ನು ಬಲಪಡಿಸುತ್ತಾ ಹೋಗುತ್ತವೆ.

ಸಾಮಾಜಿಕ ವಾದ : ಲಿಂಗ ನಿರ್ಣಯವನ್ನು ಬೆಂಬಲಿಸುವವರು ಅನೇಕ ವಾದಗಳನ್ನು ಮುಂದಿಡುತ್ತಾರೆ. ಅವುಗಳನ್ನು ಜನರೂ ಸುಲಭವಾಗಿ ಒಪ್ಪಿಕೊಳ್ಳುತ್ತಾರೆ. ಕೆಲವು ವಾದಗಳನ್ನು ಸಾಮಾಜಿಕ ಗುರಿಗಳನ್ನಾಗಿ ರೂಪಿಸಲಾಗಿದೆ. ಉದಾಹರಣೆಗೆ, ಲಿಂಗ ನಿರ್ಣಯ ತಂತ್ರಜ್ಞಾನಗಳು ಕುಟುಂಬ ಕಲ್ಯಾಣ ಯೋಜನೆಯ ಗುರಿಗಳನ್ನು ಸಾಧಿಸಲು ಸಹಾಯಕವಾಗಿವೆ. ಆದುದರಿಂದ ಅವುಗಳಿಗೆ ಅನುಮತಿ ನೀಡಬೇಕೆಂದು ಈ ವಾದ ಹೇಳುತ್ತದೆ. ತಂದೆ ತಾಯಿಗಳು ಗಂಡು ಮಗುವಿಗೋಸ್ಕರ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕಾಗಿಲ್ಲ, ಹೆಣ್ಣು ಮಕ್ಕಳು ಹುಟ್ಟುವುದನ್ನು ತಡೆಯುವುದರಿಂದ ಜನಸಂಖ್ಯೆಯಲ್ಲಿ ಅಸಮತೋಲತೆ ಉಂಟಾಗಿ ಸೆಕ್ಸ್ ರೇಶಿಯೊ ಮಹಿಳೆಯರಿಗೆ ಪ್ರತಿಕೂಲವಾಗುತ್ತದೆ ಎಂದು ಹೆದರಬೇಕಾಗಿಲ್ಲ. ಅದರ ಪರಿಣಾಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದರಿಂದ ಸಮಸ್ಯೆಯೆ ಹೊರತು ಬೇರೇನಿಲ್ಲ ಎಂದು ಈ ವಾದ ಹೇಳುತ್ತದೆ. ಜನಸಂಖ್ಯ ನಿಯಂತ್ರಣವನ್ನು ಸಮಾಜದ ಸಮ್ಮತಿಯ ಆಧಾರದ ಮೇಲೆ ಒಪ್ಪಿಕೊಳ್ಳಲಾಗಿದೆ, ಆದರೆ ಲಿಂಗ ನಿರ್ಣಯವನ್ನು ವೈಯ್ಯುಕ್ತಿಕ ಆಯ್ಕೆಯ ಆಧಾರದ ಮೇಲೆ ಒಪ್ಪಿಕೊಂಡು ಸಮಾಜದ ಒಳಿತನ್ನು ನಿರ್ಲಕ್ಷಿಸಲಾಗಿದೆ. ಸೆಕ್ಸ್ ರೇಶಿಯೋ ಪ್ರತಿಕೂಲವಾಗಿ ಅದರಿಂದ ಹುಟ್ಟುವ ಸಮಸ್ಯೆಗಳಿಗೆ ಈವಾದ ಗಮನ ನೀಡುವುದಿಲ್ಲ. ಆಯ್ಕೆಯ ಹೆಸರಿನಲ್ಲಿ ಮಹಿಳೆಯರ ಸ್ಥಾನಮಾನವನ್ನು ಅಪಮೌಲ್ಯಗೊಳಿಸುವುದಷ್ಟೆ ಅಲ್ಲ ಅವರ ಸಂತಾನೋತ್ಪತ್ತಿಯ ಮೇಲೂ ಪುರುಷರ ನಿಯಂತ್ರಣ ಹೆಚ್ಚುತ್ತದೆ. ವೈಯಕ್ತಿಕ ಆಯ್ಕೆಗಳು ಹೆಚ್ಚಾಗುತ್ತಿದೆ ಅನ್ನುವ ಕಾರಣಕ್ಕಾಗಿ ಸಮಾಜದಲ್ಲಿ ಶೋಷಣೆಯನ್ನು ಹೆಚ್ಚಿಸುವ ತಂತ್ರಜ್ಞಾನಗಳನ್ನು ಬೆಂಬಲಿಸಬೇಕಾಗಿಲ್ಲ. ವಿವಿಧ ರೀತಿಯ ಶೋಷಣೆ ನಿಯಂತ್ರಣ ವಿಧಾನಗಳನ್ನು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳಬೇಕು.

ಉದಾಹರಣೆಗೆ, ಈ ತಂತ್ರಜ್ಞಾನಗಳನ್ನು ಬಳಸುವವರನ್ನು ಫಲಾನುಭವಿಗಳು ಎಂದು ಕರೆದರೂ, ಅವುಗಳು ಮಹಿಳೆಯರ ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಅದರ ಬೆಂಬಲಿಗರು ಪರೀಕ್ಷಿಸುವುದಿಲ್ಲ. ಲಿಂಗ ಪರೀಕ್ಷೆಯ ಸಮಯದಲ್ಲಿ ಅವರ ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸಿದರೂ, ಗಂಡು ಮಗು ಆಗಬಹುದು ಎಂಬ ಆಸೆಯಿಂದ ಪುನಃ ಪುನಃ ಗರ್ಭಪಾತಕ್ಕೊಳಗಾಗುವುದರಿಂದ ಉಂಟಾಗುವ ಪರಿಣಾಮಗಳನ್ನು ನಿರ್ಲಕ್ಷಿಸಲಾಗಿದೆ. ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನವು ಸುಲಭವಾಗಿ ಜನರಿಗೆ ದೊರಕುವುದರಿಂದ ಲಿಂಗ ನಿರ್ಣಯ ಪರೀಕ್ಷೆ ಮತ್ತು ಹೆಣ್ಣು ಭ್ರೂಣ ಗರ್ಭಪಾತ ದೇಶದ ಉದ್ದಗಲಕ್ಕೂ ಹರಡುತ್ತಿದೆ.

ಹುಟ್ಟುವಾಗಲೆ ಮಗುವಿನ ಗುಣಮಟ್ಟವನ್ನು ನಿಯಂತ್ರಿಸುವುದು - ಮಗು ಹುಟ್ಟುವಾಗಲೆ ಅದರ ಗುಣಮಟ್ಟವನ್ನು ನಿರ್ಧರಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಎಂಬ ವಾದದ ಆಧಾರದ ಮೇಲೆ ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನವನ್ನು ಬೆಂಬಲಿಸುತ್ತಾರೆ. ಈ ರೀತಿ ಚಿಂತನೆಯ ಪರಿಣಾಮ ತುಂಬ ಅಪಾಯಕಾರಿಯಾದ್ದರಿಂದ ಇದರ ಬಗ್ಗೆ ಎಚ್ಚರಿಕೆಯಿಂದಿರಬೇಕು. ಗುಣಮಟ್ಟದ ಪ್ರಶ್ನೆಯು ನ್ಯಾಯ ಸಮ್ಮತವಾದರೆ, ಇದರ ಆಧಾರದ ಮೇಲೆ ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಬಳಕೆ ಬೇಕು ಎಂದು ಹೇಳುವುದಾದರೆ ಮುಂದೆ ಮಗುವನ್ನು ಪಡೆಯುವ ಹಕ್ಕು 'ಗುಣಮಟ್ಟದ' ಪ್ರಶ್ನೆಯಾಗುವ ದಿನ ದೂರವಿಲ್ಲ. ಸಂತಾನೋತ್ಪತ್ತಿಯು ಯಾಂತ್ರಿಕ ಪ್ರಕ್ರಿಯೆಯಾಗಿ ಅದು ಕೆಲವೆ ಮಂದಿಯ ಅರ್ಹತೆಯ ಪ್ರಶ್ನೆಯಾಗಿ ಬಿಡುತ್ತದೆ. ಇವೆಲ್ಲವನ್ನು ಹುಟ್ಟುವ ಮಗುವಿನ ದೃಷ್ಟಿಯಿಂದ ಮಾಡಲಾಗುತ್ತದೆ ಎಂದು ಹೇಳುತ್ತಾರೆ.

ಇದರಿಂದ ಮಗುವು ಒಂದು ವಾಣಿಜ್ಯೀಕರಣ ಸಂತಾನೋತ್ಪತ್ತಿ ಪ್ರಕ್ರಿಯೆಯ ಉತ್ಪನ್ನವಾಗಿ ಬಿಡುತ್ತದೆಯಷ್ಟೆ. ಮಗುವಿನ ಗುಣಮಟ್ಟ ನಿಯಂತ್ರಣ ಸೌಲಭ್ಯವನ್ನು ಹಣವಿರುವವರು ಮಾತ್ರ ಬಳಸಲು ಸಾಧ್ಯವಿರುವುದರಿಂದ, ಸಂತಾನೋತ್ಪತ್ತಿಯಲ್ಲೂ ವರ್ಗ ಭಿನ್ನತೆಯನ್ನು ಹೆಚ್ಚಿಸುತ್ತದೆ. ಈ ಸೌಲಭ್ಯಗಳು ಕೆಲವೆ ಮಂದಿಗೆ ಸೀಮಿತವಾಗಿ ಸಮಾಜದ ಅಸಮಾನತೆ ಹೆಚ್ಚಾಗುತ್ತದೆಯೆ ಹೊರತು ಕಡಿಮೆಯಾಗುವುದಿಲ್ಲ.

ಮಗುವಿನ ಅಂಗವಿಕಲತೆಯನ್ನು ನಿವಾರಿಸುವುದು : ಮಗುವಿನಲ್ಲಿ ದೋಷವೇನಾದರು ಇದ್ದರೆ ಅದನ್ನು ಮೊದಲೆ ಸರಿಪಡಿಸುವುದಕ್ಕೋಸ್ಕರ ಈ ತಂತ್ರಜ್ಞಾನವನ್ನು ಉಪಯೋಗಿಸಲಾಗುತ್ತದೆ ಎಂದು ಅದರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಾರೆ. ಇದು ಮಗುವಿನ ಹಕ್ಕಿನ ಪ್ರಶ್ನೆಯಾಗಿದೆ ನಿಜ. ಆದರೆ ಮಗುವಿನ ಹಕ್ಕಿನ ಪರವಾಗಿ ಮಾತನಾಡುವವರು

ಹೇಳುವುದೇನೆಂದರೆ, ಅದು ಮಹಿಳೆಯರನ್ನು ಕೇವಲ ಹೆರುವ ಯಂತ್ರವನ್ನಾಗಿ ಮಾಡುತ್ತದೆ. ಅಲ್ಲದೆ ವಾಸ್ತವಾಂಶವೆಂದರೆ, ಮಗುವಿನಲ್ಲಿ ಏನೇ ನ್ಯೂನ್ಯತೆ ಕಂಡುಬಂದರೂ ಮಧ್ಯದಲ್ಲಿ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಈ ತಂತ್ರಜ್ಞಾನಗಳು, ಅಂಗವಿಕಲ ಮಗುವಿನ ಗರ್ಭಪಾತಕ್ಕೆ ಅವಕಾಶ ಮಾಡಿಕೊಡುತ್ತದಷ್ಟೆ. ಅಂಗವಿಕಲ ಮಗುವಿನ ತಾಯಿಯ ಮೇಲೂ ದೋಷಾರೋಪಣೆ ಮಾಡಲಾಗುತ್ತದೆ. ಅಂಗವಿಕಲರಿಗೆ ಕಳಂಕ ಹಚ್ಚುವುದಷ್ಟೆ ಅಲ್ಲ, ಅವರನ್ನು ಭೂಮಿಯಿಂದಲೆ ಹೊರ ಹಾಕುತ್ತದೆ. ಆದರೆ ಅನೇಕ ಅಂಗವಿಕಲರು ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಕೊಡುಗೆಗಳನ್ನು ನೋಡಿದರೆ ಈ ವಾದವು ಹುರುಳಿಲ್ಲದ್ದು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮಗು ಹುಟ್ಟಿದಾಗ ಅದರ ಶಾರೀರಿಕ ರಚನೆಯ ಆಧಾರದ ಮೇಲೆ ಅದರ ಆರೋಗ್ಯ ಮಟ್ಟವನ್ನು ನಿರ್ಧರಿಸುವುದು ಸರಿಯಲ್ಲ. ಮಾನವ ಜೀವಿಯನ್ನು ರೂಪಿಸುವ, ಅವರು ಸಮಾಜಕ್ಕೆ ನೀಡುವ ಕೊಡುಗೆಯ ಸಾಮರ್ಥ್ಯವನ್ನು, ಸಾಮಾಜಿಕ ರಚನೆ, ಸಂಬಂಧಗಳು ಕೂಡ ನಿರ್ಧರಿಸುತ್ತವೆ ಎಂಬುದನ್ನು ಮರೆಯುವಂತಿಲ್ಲ. ಈ ತಂತ್ರಜ್ಞಾನಗಳಿಂದ ಆರೋಗ್ಯವಂತ ಸಮರ್ಥ ವ್ಯಕ್ತಿಗಳನ್ನು ಮಾತ್ರ ಹುಟ್ಟಿಸಲು ಸಾಧ್ಯವೆಂದು ಹೇಳಿದರೂ, ಆರೋಗ್ಯವಾಗಿ ಹುಟ್ಟಿದ ಮಗು ನಂತರ ಸಾಮಾಜಿಕ ಆರ್ಥಿಕ ಪರಿಸರದಿಂದ ಅನಾರೋಗ್ಯ, ಅಶಕ್ತ, ಅಸಾಮರ್ಥ್ಯ ವ್ಯಕ್ತಿಯಾಗಿ ಬೆಳೆದರೆ ಆಗ ಏನು ಮಾಡುವುದು ಎಂಬ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಈ ವಾದವು ವಿಫಲವಾಗಿದೆ.

ಪ್ರಿನೇಟಲ್ ತಂತ್ರಜ್ಞಾನಗಳನ್ನು ನ್ಯಾಯ ಸಮ್ಮತಗೊಳಿಸುವುದರಿಂದ, ಅದು ಕುಟುಂಬದ ಗಾತ್ರವನ್ನು ಕಡಿಮೆ ಮಾಡುತ್ತದೆ, ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ, ಮಗುವಿನ ಗುಣಮಟ್ಟವನ್ನು ಉತ್ತಮಗೊಳಿಸುತ್ತದೆ ಎಂದು ಹೇಳುತ್ತಾ ವೈದ್ಯರು ಮತ್ತು ವಾಣಿಜ್ಯೋದ್ಯಮಿಗಳು ಈ ತಂತ್ರಜ್ಞಾನಗಳನ್ನು ಬೆಂಬಲಿಸುತ್ತಾರೆ. ಸೂಕ್ತ ಸಮಯದಲ್ಲಿ ಈ ತಂತ್ರಜ್ಞಾನಗಳನ್ನು ತಡೆಯದೆ ಹೋದರೆ ಅವು ಮಹಿಳೆಯರ ಸಂತಾನೋತ್ಪತ್ತಿ ಹಕ್ಕನ್ನು ಕಸಿದುಕೊಳ್ಳುತ್ತದೆ. ಈ ತಂತ್ರಜ್ಞಾನಗಳಿಂದ ಮಾರುಕಟ್ಟೆ, ಶಕ್ತಿಗಳಿಂದ ಮಹಿಳೆಯರ ಸಂತಾನೋತ್ಪತ್ತಿ ಹಕ್ಕನ್ನು ರಕ್ಷಿಸಬೇಕಾಗಿದೆ. ಕಾಯಿದೆ ಮೂಲಕ ಅವರನ್ನು ರಕ್ಷಿಸುವುದು ಒಂದು ವಿಧಾನವಾಗಿದೆ.

ಭಾಗ ೩

ಕಾನೂನಿನ ಪ್ರತಿಕ್ರಿಯೆ : ಆರೋಗ್ಯ, ಸಾಮಾಜಿಕ ಮತ್ತು ಮಾನವ ಹಕ್ಕುಗಳಿಗಾಗಿ ಕೆಲಸ ಮಾಡುವ ಮಹಿಳಾ ಮತ್ತು ಇತರ ಗುಂಪುಗಳು ಈ ಲಿಂಗ ನಿರ್ಣಯ ಮತ್ತು ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಕಾಯಿದೆ ಮಾಡಬೇಕೆಂದು ಹಲವಾರು ವರ್ಷ ಹೋರಾಟ ನಡೆಸಿದವು. ಕೊನೆಗೆ ಸರ್ಕಾರ 'ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನಗಳ ದುರುಪಯೋಗ ನಿಯಂತ್ರಣ ಮತ್ತು ನಿಷೇಧ ಕಾಯಿದೆ'ಯನ್ನು ಜಾರಿಗೆ ತಂದಿತು. ಆದರೆ ಈ ಗುಂಪುಗಳೆ ಈಗ ಈ ಕಾಯಿದೆ ವಿರುದ್ಧ ಹೋರಾಟ ನಡೆಸುತ್ತಿವೆ. ಕಾಯಿದೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ, ಯಾಕೆ ಈ ಗುಂಪುಗಳು ಕಾಯಿದೆ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿವೆ ಮತ್ತು ಅದರಲ್ಲಿ ಬದಲಾವಣೆ ತರಬೇಕೆಂದು ಒತ್ತಾಯಿಸುತ್ತಿವೆ ಎಂದು ಅರ್ಥಮಾಡಿಕೊಳ್ಳಬಹುದು.

ಮೊದಲೆ ಹೇಳಿದಂತೆ ಈ ಕಾಯಿದೆ ಹೆಚ್ಚು ಪರಿಣಾಮಕಾರಿಯಾಗಿಲ್ಲ, ಏಕೆಂದರೆ –

(i) ಲಿಂಗ ನಿರ್ಣಯ ಸಮಸ್ಯೆಯನ್ನು ವಿಸ್ತಾರವಾಗಿ ನಿರೂಪಿಸಿಲ್ಲ. ಕೇವಲ ತೋರಿಕೆಗೆ ನಾಮಕಾವಸ್ತೆಗೆ ಕಾಯಿದೆಯನ್ನು ಜಾರಿಗೆ ತರಲಾಗಿದೆ ಮತ್ತು

(ii) ಅದನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಸೂಕ್ತ ರಚನಾಕಾರ್ಯಗಳನ್ನು ರಚಿಸಿಲ್ಲ. ಕಾಯಿದೆಯು ಬಿದ್ದು ಹೋಗಲು ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ.

ನ್ಯೂನ್ಯತೆ ಮತ್ತು ದೋಷಗಳು : ಕಾಯಿದೆಯ ಉದ್ದೇಶ ಸ್ಪಷ್ಟವಾಗಿದೆ. "ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನದ ಬಳಕೆಯನ್ನು ನಿಯಂತ್ರಿಸುವುದು, ಮಗು ಹುಟ್ಟುವ ಮೊದಲು ಅದರಲ್ಲೇನಾದರು ಅನುವಂಶಿಕ ತೊಂದರೆಯಿದ್ದರೆ ಪತ್ತೆ ಹಚ್ಚುವುದು, ಶಾರೀರಿಕ ವಿಕಾರ, ಅಸಹಜ ಬೆಳವಣಿಗೆ, ಜನ್ಮತಃ ದೋಷ ಅಥವಾ ಇನ್ಯಾವುದೆ ರೀತಿಯ ಕಾಯಿಲೆಯಿದ್ದರೆ ಅದನ್ನು ಕಂಡುಕೊಳ್ಳುವುದಕ್ಕೆ ಮಾತ್ರ ಈ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬಹುದು. ಆದರೆ ಹೆಣ್ಣು ಭ್ರೂಣಹತ್ಯೆಗೆ ದಾರಿ ಮಾಡಿಕೊಡುವ ಲಿಂಗ ನಿರ್ಣಯ ಪರೀಕ್ಷೆಯ ದುರುಪಯೋಗವನ್ನು ನಿಷೇದಿಸುವುದು."

ಕ್ರೋಮೋಸೋಮಲ್ ಅಬ್‌ನಾರ್ಮಲಿಟೀಸ್, ಜನಿಟಿಕ್ ಮೆಟಬಾಲಿಕ್ ಡಿಸೀಸಸ್, ಕಾಂಜೆನೈಟಲ್ ಅನಾಮಲೀಸ್, ಹಿಮೋಗ್ಲೋಬಿನೋಪಥೀಸ್, ಸೆಕ್ಸ್‌ಲಿಂಕ್ಡ್ ಜನೆಟಿಕ್ ಡಿಸೀಸಸ್ - ಈ ಐದು ಅಸಹಜ ಸ್ಥಿತಿಯಲ್ಲಿ ಯಾವ ಉದ್ದೇಶಕ್ಕಾಗಿ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಸ್ಪಷ್ಟವಾಗಿ ತಿಳಿಸಬೇಕು. ಈ ಕಾಯಿದೆಯನ್ನು ಜಾರಿಗೆ ತರಲು ಸ್ಥಾಪಿಸಿದ ಸೆಂಟ್ರಲ್ ಸುಪರ್‌ವೈಸರಿ ಬೋರ್ಡ್ (Central Supervisory Board) ಈ ಪಟ್ಟಿಯನ್ನು ವಿಸ್ತರಿಸಬಹುದು. ಈ ತಂತ್ರಜ್ಞಾನಗಳನ್ನು ಬಳಸಲು ಕಾಯಿದೆ ಕೆಲವು ಶರತ್ತುಗಳನ್ನು

ಹಾಕುತ್ತದೆ. ಗರ್ಭಿಣಿಯ ವಯಸ್ಸು ೩೫ ಆಗಿರಬೇಕು, ಎರಡು ಮೂರು ಸಲ ಗರ್ಭಪಾತವಾಗಿದ್ದರೆ, ಕುಟುಂಬದಲ್ಲಿ, ಅನುವಂಶಿಕ ಬುದ್ಧಿ ಭ್ರಮಣೆ ಅಥವಾ ಅಂಗವಿಕಲತೆಯಿದ್ದರೆ, ಅಥವಾ ಗರ್ಭಿಣಿ ಸ್ತ್ರೀಯು ಯಾವುದಾದರು ಔಷಧಿ, ಇನ್‌ಫೆಕ್ಷನ್ ಅಥವಾ ವಿಕಿರಣಕ್ಕೆ ಒಳಪಟ್ಟಿದ್ದರೆ ಅಂತಹ ಸಮಯದಲ್ಲಿ ಮಾತ್ರ ಈ ತಂತ್ರಜ್ಞಾನಗಳನ್ನು ಬಳಸಬಹುದು. ಸೆಂಟ್ರಲ್ ಸೂಪರ್‌ವೈಸರಿ ಬೋರ್ಡ್ ಈ ಪಟ್ಟಿಯಲ್ಲಿ ಇನ್ನು ಬೇರೆ ಕಾರಣಗಳನ್ನು ಸೇರಿಸಬಹುದು. ಇಂತಹ ಕಾರಣಗಳಿಗಾಗಿ ತಂತ್ರಜ್ಞಾನಗಳನ್ನು ಬಳಸುವಾಗ ಕಾಯಿದೆ ಪ್ರಶ್ನೆ ಮಾಡುವಂತಿಲ್ಲ. ಅದು ಕೇವಲ ಬಳಕೆಯ ಉದ್ದೇಶಗಳನ್ನು ಪ್ರಶ್ನಿಸಬಹುದು.

ಮಹಿಳಾ ಮತ್ತು ಇತರ ಗುಂಪುಗಳು, ಲಿಂಗ ನಿರ್ಣಯ ಬಿಟ್ಟು ಉಳಿದ ಬೇರೆ ಕಾರಣಗಳಿಗೆ ಈ ತಂತ್ರಜ್ಞಾನಗಳನ್ನು ಬಳಸುವುದಾದರೆ ಅದನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾತ್ರ ಮಾಡುವುದಕ್ಕೆ ಅನುಮತಿ ನೀಡಬೇಕು ಎಂದು ಕೇಳಿದರೆ ಅದಕ್ಕೆ ತದ್ವಿರುದ್ಧವಾಗಿ ಕಾಯಿದೆ ಖಾಸಗಿ ಕ್ಷೇತ್ರದಲ್ಲಿ ಅವುಗಳನ್ನು ಬಳಸಲು ಅವಕಾಶ ಮಾಡಿಕೊಟ್ಟಿತು. ಇದರಿಂದ ಕಾಯಿದೆ ಮೂಲಕವೆ ತಂತ್ರಜ್ಞಾನದ ದುರುಪಯೋಗ ಹೆಚ್ಚಾಗುತ್ತಿದೆ. ಈ ತಂತ್ರಜ್ಞಾನಗಳ ಬಳಕೆಗೆ ಸಂಬಂಧಪಟ್ಟ ಜನಟಿಕ್ ಕೌನ್ಸಿಲಿಂಗ್ ಸೆಂಟರ್ಸ್, ಜನಟಿಕ್ ಲ್ಯಾಬ್ ಮತ್ತು ಜನೆಟಿಕ್ ಕ್ಲಿನಿಕ್‌ಗಳು ನೊಂದಣಿ ಮಾಡಿಸಬೇಕೆಂದು ಕಾಯಿದೆ ಹೇಳುತ್ತದೆ. ಆದರೆ ನೊಂದಣಿ ಕಾರ್ಯವು, ಖಾಸಗಿ ಕ್ಲಿನಿಕ್‌ಗಳನ್ನು ನಿಯಂತ್ರಿಸಲು ಮತ್ತು ಕಾಯಿದೆ ಒಡ್ಡುವ ಅಡ್ಡಿಗಳನ್ನು ತಡೆಯಲು ನಾಮಕಾವಸ್ಥೆಗೆ ನಡೆಯುತ್ತದೆ. ಕ್ಲಿನಿಕ್‌ಗಳು ಹಣ ಮಾಡುವ ಉದ್ದೇಶದಿಂದಲೆ ಈ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತವೆ.

ಲಿಂಗ ನಿರ್ಣಯ ಪರೀಕ್ಷೆಯನ್ನು ನಿಷೇಧಿಸುವ ಬಗ್ಗೆ ಗಂಭೀರ ಆಸಕ್ತಿ ಕಾಳಜಿ ಇದ್ದಿದ್ದರೆ, ಅದು ಖಂಡಿತ ತಂತ್ರಜ್ಞಾನ ಬಳಕೆಯನ್ನು ನಿಯಂತ್ರಿಸುತ್ತಿತ್ತು. ದುರಾದೃಷ್ಟವಶಾತ್, ಕಾಯಿದೆಯು ತಂತ್ರಜ್ಞಾನ ಉಪಯೋಗಿಸುವ ವಿಷಯದಲ್ಲಿ ಅದರಲ್ಲೂ ಅಲ್ಟ್ರ ಸೌಂಡ್ ಯಂತ್ರ ಅಥವಾ ಇನ್ನಿತರ ಆಧುನಿಕ ಯಂತ್ರಗಳನ್ನು ನಡೆಯುತ್ತಿದೆ. ಇದರ ಜೊತೆಗೆ ಬಹುರಾಷ್ಟ್ರೀಯ ಕಂಪನಿಗಳು ಉದಾರ ನೀತಿಯ ಲಾಭ ಪಡೆದುಕೊಂಡು ಹೊಸ ಹೊಸ ತಂತ್ರಜ್ಞಾನ, ಯಂತ್ರಗಳ ಪ್ರವಾಹವನ್ನು ನಮ್ಮ ದೇಶಕ್ಕೆ ಹರಿಸುತ್ತವೆ. ಇಂತಹ ಸಮಯದಲ್ಲಿ ನಮ್ಮ ಈ ದುರ್ಬಲ ಕಾಯಿದೆ ಅವುಗಳ ದುರುಪಯೋಗಕ್ಕೆ ಸುಲಭ ದಾರಿ ಮಾಡಿಕೊಡುತ್ತಿದೆ. ಇದರಿಂದ ಏನೇ ಕಾಯಿದೆ ಕಾನೂನು ಮಾಡಿದರು ವಾಣಿಜ್ಯೋದ್ಯಮಿಗಳು ಮತ್ತು ವೈದ್ಯರು ಹಣ ಹೆಸರು ಮಾಡುವುದಕ್ಕೆ, ಮಹಿಳೆಯರ ಬಗ್ಗೆ ಇರುವ ಪೂರ್ವಗ್ರಹ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು, ಈ ತಂತ್ರಜ್ಞಾನಗಳನ್ನು ಯಾವುದೆ ಅಡೆತಡೆಯಿಲ್ಲದೆ ಬಳಸಿಕೊಳ್ಳುತ್ತಿದ್ದಾರೆ.

ಮುಂದೆ ಬರುವ ಹೊಸ ತಂತ್ರಜ್ಞಾನಗಳನ್ನು ನಿಯಂತ್ರಿಸುವ ಬಗ್ಗೆ ಗಂಭೀರ ಚಿಂತನೆ ಮಾಡದಿರುವುದರಿಂದ, ಕಾಯಿದೆಯಿಟ್ಟುಕೊಂಡಿರುವ ಉದ್ದೇಶಗಳೆ ಸಮಸ್ಯೆಯಾಗಿ ಪರಿಣಮಿಸುತ್ತಿವೆ. ತಂತ್ರಜ್ಞಾನಗಳಿಂದ ಉಂಟಾಗುತ್ತಿರುವ ಪರಿಣಾಮಗಳನ್ನು ಕಾಯಿದೆ ಚೌಕಟ್ಟಿನಲ್ಲಿ ತರದ ಹೊರತು, ಈ ಸಮಸ್ಯೆಯ ಬಗ್ಗೆ ಏನೇ ಚರ್ಚಿಸಿದರು ಪ್ರಯೋಜನವಿಲ್ಲ.

ಅಲ್ಲದೆ ಈ ಲಿಂಗ ನಿರ್ಣಯ ತಂತ್ರಜ್ಞಾನಗಳನ್ನು ಪ್ರಶ್ನಿಸುವಂತ ಯಾವುದೆ ಅಂಶಗಳು ಕಾಯಿದೆಯಲ್ಲಿ ಇಲ್ಲ. ಸೆಡಿಮೆಂಟೇಶನ್ ಅಥವಾ ಸೆಂಟ್ರಿಪೋಗೇಶನ್, ಎರಿಕ್‌ಸನ್ ಮೆಥಡ್, ಎಲೆಕ್ಟ್ರೋ ಪೊರ್ಸ್‌ಸಿಪ್ ಮುಂತಾದ ತಂತ್ರಜ್ಞಾನಗಳು ಈಗಾಗಲೆ ಬಳಕೆಯಲ್ಲಿವೆ. ಅವು ದೇಶದ ಸೆಕ್ಸ್ ರೇಶಿಯೋ ಮೇಲೆ ಕೆಟ್ಟ ಪರಿಣಾಮ ಬೀರುವುದರಿಂದ ಅವುಗಳನ್ನು ಕಾಯಿದೆ ಚೌಕಟ್ಟಿಗೆ ತರುವುದು ತುಂಬ ಅಗತ್ಯವಾಗಿದೆ.

ಜನರಲ್ಲಿ ತಿಳುವಳಿಕೆಯಿಲ್ಲದಿರುವುದರಿಂದ, ಹೆಣ್ಣು ಭ್ರೂಣ ಹತ್ಯೆಯು ಸಮಸ್ಯೆಯಾಗಿ ತಲೆದೋರಿದೆ ಎಂಬ ಊಹೆಯ ಆಧಾರದ ಮೇಲೆ ಕಾಯಿದೆ ಕೆಲಸ ಮಾಡುತ್ತಿದೆ. ಕಾಯಿದೆ ಸೆಂಟ್ರಲ್ ಸೂಪರ್‌ವೈಸರಿ ಬೋರ್ಡ್‌ಗೆ, ಲಿಂಗ ನಿರ್ಣಯ ಮತ್ತು ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಜನರಲ್ಲಿ ಅರಿವು ಮೂಡಿಸುವ ಜವಾಬ್ದಾರಿಯನ್ನು ವಹಿಸಿದೆ. ಇದು ಸಮಸ್ಯೆಯ ಒಂದು ಭಾಗದ ಗ್ರಹಿಕೆಯಾಗಿದೆ. ಇನ್ನೊಂದು ಭಾಗವಾದ ಗಂಡು ಮಗುವಿನೆಡೆಗಿನ ಒಲವು, ಮಹಿಳೆಯರನ್ನು ಅಪಮೌಲ್ಯಗೊಳಿಸುವ ಸಾಮಾಜಿಕ ಆರ್ಥಿಕ ರಾಜಕೀಯ ಅಂಶಗಳು ಯಾವುವು ಎಂದು ಗುರುತಿಸದೆ ಇರುವುದರಿಂದ ಸರ್ಕಾರದ ನೀತಿಗಳೆ ಇಂತಹ ತಂತ್ರಜ್ಞಾನಗಳ ಬಳಕೆಯನ್ನು ಹೆಚ್ಚಿಸುತ್ತಿವೆ. ಮಹಿಳೆಯರ ಸದ್ಯದ ಪರಿಸ್ಥಿತಿಯನ್ನು ಸುಧಾರಿಸದೆ ಜನರ ಮನೋಭಾವ, ನಂಬಿಕೆಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಯೋಜನಕಾರರು ಚಿಂತಿಸದ ಹೊರತು, ಕೇವಲ ಕಾಯಿದೆ ಮೂಲಕ ಏನು ಮಾಡಲು ಸಾಧ್ಯವಿಲ್ಲ.

ಈ ಕಾಯಿದೆಯ ಕೆಟ್ಟ ಮತ್ತು ತಪ್ಪುದಾರಿಗೆಳೆಯುವ ಲಕ್ಷಣವೆಂದರೆ, ಕಾಯಿದೆಯು ಈ ಸಮಸ್ಯೆಯನ್ನು ನಿವಾರಿಸುತ್ತದೆ ಎಂದು ಕಲ್ಪಿಸಿಕೊಂಡು ಮಹಿಳೆಯರನ್ನು ಬಲಿಪಶುಗಳನ್ನಾಗಿ ಮಾಡುವುದು. ಸೆರೆಮನೆಯ ಅತ್ಯಾಚಾರದ ಕೇಸಿನಲ್ಲಿ ಹೇಗೆ ಆರೋಪಿಯೆ ಅತ್ಯಾಚಾರವಾಗಿಲ್ಲ ಎಂದು ರುಜುವಾತು ಪಡಿಸುವಂತೆ ಕಾಯಿದೆಯನ್ನು ಬದಲಾಯಿಸಿದರೂ, ಸಮಾಜದಲ್ಲಿನ

ಪಕ್ಷಪಾತದಿಂದ ಅದು ಮಹಿಳೆಯರ ಪರವಾಗಿ ಕೆಲಸ ಮಾಡಲಿಲ್ಲವೋ ಹಾಗೆ ಇಲ್ಲೂ ಕಾಯಿದೆಯನ್ನು ಮಹಿಳೆಯರ ರಕ್ಷಣೆಗಾಗಿ ಮಾಡಿದರೂ ಅದು ಮಹಿಳೆಯರನ್ನು ರಕ್ಷಿಸುತ್ತಿಲ್ಲ.

ಮಹಿಳೆಯು ತಾನೆ ಸ್ವಇಚ್ಛೆಯಿಂದ ಪರೀಕ್ಷೆಗೆ ಒಳಪಟ್ಟರೆ ಶಿಕ್ಷೆ ನೀಡಬೇಕು ಎಂದು ಹೇಳುವುದರ ಅರ್ಥ, ಒಂದು ವೇಳೆ ಗಂಡ ಅಥವಾ ಮಹಿಳೆಯ ಸಂಬಂಧಿಕರು ತಾವು ಇದಕ್ಕೆ ಹೊಣೆಗಾರರಲ್ಲ ಎಂದು ಸಾಬೀತುಪಡಿಸಿದರೆ, ಆಗ ಮಹಿಳೆ ಶಿಕ್ಷೆಗೆ ಗುರಿಯಾಗುತ್ತಾಳೆ. ಆದರೆ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ, ಈ ರೀತಿಯ ನಿಲುವು ಅನ್ಯಾಯವಾಗಿ ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿರುವ ಸ್ತ್ರೀಯರಿಗೆ ನಿರ್ಧಾರ ಕೈಗೊಳ್ಳುವ ಅವಕಾಶವಿಲ್ಲದೆ, ಯಾವಾಗಲೂ ಬೇರೊಬ್ಬರ ಅಧೀನದಲ್ಲಿರುವ ಸಂದರ್ಭದಲ್ಲಿ ಇಂತಹ ಕಾಯಿದೆ ಮಹಿಳೆಯರ ಕಷ್ಟವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಈಗಿರುವ ಕಾಯಿದೆ ಮಹಿಳಾ ವಿರೋಧಿಯಾಗಿದೆಯಷ್ಟೆ ಅಲ್ಲ, ಈ ತಂತ್ರಜ್ಞಾನದ ಬಳಕೆಯನ್ನು ತಡೆಯುವುದಕ್ಕೂ ಅಡ್ಡಿ ಮಾಡುತ್ತದೆ. ಮಹಿಳೆಯರನ್ನು ಶಿಕ್ಷಿಸುವುದರಿಂದ ತಂತ್ರಜ್ಞಾನಗಳನ್ನು ಬಳಸುವವರ ಹಿತಾಸಕ್ತಿಗಳನ್ನು ರಕ್ಷಿಸಿದಂತಾಗುತ್ತದೆ. ಕಾಯಿದೆಯಲ್ಲಿರುವ ಲೋಪ ದೋಷಗಳಿಂದ, ಅದರ ಉದ್ದೇಶಗಳನ್ನು ಸಾಧಿಸಲಾಗುತ್ತಿಲ್ಲ. ಲಿಂಗ ನಿರ್ಣಯದ ಜೊತೆಗೆ ಬೇರೆ ಕಾರಣಗಳಿಗೂ ಈ ತಂತ್ರಜ್ಞಾನಗಳನ್ನು ಬಳಸುವುದರಿಂದ, ಅದರ ಮೇಲೆ ನಿಷೇಧ ಹೇರಲು ಸಾಧ್ಯವಿಲ್ಲ. ಕಾಯಿದೆ ಪ್ರಕಾರ ಪ್ರಿನೇಟಲ್ ಡಯಾಗ್ನಿಸಿಸ್ ಮಾಡಿದ ವ್ಯಕ್ತಿ ಮಹಿಳೆಗೆ ಎಂತ ಮಗು ಎಂದು ಹೇಳಬಾರದು. ಈ ನಿಯಮವೆ ಕಾನೂನಿನ ಚೌಕಟ್ಟಿನಲ್ಲಿ ವಿಷಯವನ್ನು ಬಹಿರಂಗಪಡಿಸುವಂತೆ ಮಾಡುತ್ತದೆ. ಮತ್ತು ಎಂತ ಮಗು ಎಂದು ಸಂಬಂಧಿಕರಲ್ಲದವರಿಗೆ ತಿಳಿಸಲು ಅಡ್ಡಿಯಿಲ್ಲ. ಸ್ನೇಹಿತರ ಮೂಲಕ ತಿಳಿಸಿದರೆ ಯಾವ ತೊಂದರೆಯೂ ಇಲ್ಲ.

ಸೆಂಟ್ರಲ್ ಸೂಪರ್‌ವೈಸರಿ ಬೋರ್ಡ್ ಪ್ರಿನೇಟಲ್ ಡಯಾಗ್ನಿಸಿಸ್‌ನ ನೀತಿ ನಿಯಮ, ಕಾಯಿದೆ ಎಷ್ಟರ ಮಟ್ಟಿಗೆ ಜಾರಿಯಲ್ಲಿದೆ, ಏನಾದರು ಬದಲಾವಣೆ ಮಾಡಬೇಕಾಗಿದಿಯೆ ಎಂಬ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡಬೇಕು. ಅದು ಜನಟಿಕ್ ಕೌನ್ಸಿಲ್, ಜನಟಿಕ್ ಲ್ಯಾಬ್ ಮತ್ತು ಜನಟಿಕ್ ಕ್ಲಿನಿಕ್‌ಗಳಲ್ಲಿ ಕೆಲಸ ಮಾಡುವವರಿಗೆ ಒಂದು ನಡವಳಿಕೆ ಸಂಹಿತೆಯನ್ನು ರಚಿಸಿಕೊಡಬೇಕು.

ಬೋರ್ಡಿನ ಕಾರ್ಯ ನಿರ್ವಹಣೆ ಬಗ್ಗೆ ಕಾಯಿದೆ ಏನೇ ಹೇಳಿದರು, ಬೋರ್ಡಿನ ನೀತಿ ನಿರೂಪಣೆಯಲ್ಲಿ ದೋಷವಿದೆ, ಸದಸ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಥವಾ ಬೋರ್ಡಿನ ಕಾರ್ಯ ನಿರ್ವಹಣೆಯ ಅವ್ಯವಸ್ಥೆಯ ಕಾರಣಗಳಿಂದ ಅದರ ಕಾಯಿದೆ ಅಥವಾ ಕಾರ್ಯ ವಿಧಾನಗಳನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ. ಬೋರ್ಡಿನ ಕಾರ್ಯ ನಿರ್ವಹಣೆ ಅವ್ಯವಸ್ಥೆಯಾಗಿದ್ದರೂ ಅದರ ಬಗ್ಗೆ ಚಿಂತಿಯಿಲ್ಲದಂತಿರುವಾಗ ಇನ್ನು ಎಂದರೆ, ಕಾಯಿದೆಯಲ್ಲಿ ಬೋರ್ಡಿನ ನೀತಿನಿಯಮದ ಬಗ್ಗೆ ಅಷ್ಟು ವಿಸ್ತಾರವಾಗಿ ವಿವರಣೆ ನೀಡುವುದರ ಅಗತ್ಯವೇನಿತ್ತು ಎಂಬ ಪ್ರಶ್ನೆ ಏಳುತ್ತದೆ.

ಪ್ರತಿ ರಾಜ್ಯಕ್ಕೂ ಒಬ್ಬ ಅಥವಾ ಎರಡು ಮೂರು ಅಧಿಕಾರಿಗಳನ್ನು ನೇಮಿಸಿ, ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದು ಕಾಯಿದೆ ಹೇಳುತ್ತದೆ. ಈ ಅಧಿಕಾರಿ ವರ್ಗಕ್ಕೆ ಜನಟಿಕ್ ಕ್ಲಿನಿಕ್‌ಗಳಿಗೆ ನೊಂದಣಿಗೆ ಅನುಮತಿ ನೀಡುವ ಅಥವಾ ತೆಗೆದು ಹಾಕುವ ಅಧಿಕಾರವಿರುತ್ತದೆ. ಹಾಗೆ ಮಾಡುವಾಗ ಅವರು ಸಲಹಾ ಸಮಿತಿಯ ಸಲಹೆ ಕೇಳಬೇಕು. ಕ್ಲಿನಿಕ್‌ಗಳಲ್ಲಿ ಒಳ್ಳೆ ಗುಣಮಟ್ಟ ಹೊಂದಿರುವಂತೆ ಮಾಡಬೇಕು. ಅವುಗಳ ಬಗ್ಗೆ ದೂರು ಬಂದರೆ, ಅವು ಕಾನೂನಿನ ಉಲ್ಲಂಘನೆ ಮಾಡಿದ್ದರೆ, ಅಂತಹ ಸಮಯದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು.

ಈ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿಗಳ ನೇಮಕಾತಿ ಬಗ್ಗೆ ಕಾಯಿದೆ ಸ್ಪಷ್ಟವಾಗಿ ಹೇಳುವುದಿಲ್ಲ. ರಾಜ್ಯಮಟ್ಟದಲ್ಲಿ ನೇಮಿಸುವ ಆರೋಗ್ಯ ಜಂಟಿ ನಿರ್ದೇಶಕರು ಅಥವಾ ಕುಟುಂಬ ಕಲ್ಯಾಣ ನಿರ್ದೇಶಕರಿಗಿಂತ ಮೇಲ್ಪಟ್ಟ ಅಧಿಕಾರಿಗಳನ್ನು ನೇಮಿಸಬೇಕೆಂದಷ್ಟೆ ಹೇಳುತ್ತದೆ. ಸಲಹಾ ಸಮಿತಿಯಲ್ಲಿ ಮೂರು ಜನ ವೈದ್ಯಕೀಯ ತಜ್ಞರು, ಒಬ್ಬ ಕಾನೂನು ತಜ್ಞ, ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿ ಮತ್ತು ಮೂರು ಜನ ಸಮಾಜ ಕಾರ್ಯಕರ್ತರು ಇರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ಸಂಘಟನೆಯಿಂದ ಬಂದಿರಬೇಕು. ಆದರೆ ಈ ಸಲಹಾ ಸಮಿತಿಗೆ ಕಾನೂನು ರಚಿಸುವ ಅಧಿಕಾರವಿರುವುದಿಲ್ಲ.

ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸ್ಥಳೀಯ ಜಾಗೃತಿ ಸಮಿತಿಯನ್ನು ರಚಿಸುವ ಬಗ್ಗೆ ಕಾಯಿದೆ ಏನು ಹೇಳುವುದಿಲ್ಲ. ಜನಿಟಿಕ್ ಕ್ಲಿನಿಕ್‌ಗಳು ಕಾನೂನು ಉಲ್ಲಂಘನೆ ಮಾಡಿದ್ದರೆ ಅಧಿಕಾರಿಗಳು ಸಲಹಾ ಸಮಿತಿಯ ಸಲಹೆಯ ಮೇರೆಗೆ ಅವುಗಳ ನೊಂದಣಿಯನ್ನು ರದ್ದುಪಡಿಸಬಹುದು ಎಂದು ಹೇಳುತ್ತದಷ್ಟೆ. ರದ್ದು ಮಾಡುವ ಮೊದಲು ನೋಟಿಸ್ ಕೊಡಬೇಕು. ಕೊಡದಿದ್ದರೆ ಕ್ಲಿನಿಕ್‌ನವರು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಅಧಿಕಾರಿಗಳ ವಿರುದ್ಧ ಮನವಿ ಮಾಡಿಕೊಳ್ಳಬಹುದು.

ಒಬ್ಬ ವೈದ್ಯನು ಇಂತಹ ಕಾರ್ಯದಲ್ಲಿ ತೊಡಗಿದ್ದರೆ ಮೆಡಿಕಲ್ ಕೌನ್ಸಿಲ್‌ನಿಂದ ಅವನ ಹೆಸರನ್ನು ತೆಗೆದು ಹಾಕಿಸಬಹುದು. ಮೊದಲನೆ ಸಲ ಮಾಡಿದ್ದರೆ ೨ ವ: ಸಜೆ ಮತ್ತು ಮತ್ತೆ ಮಾಡುತ್ತಿದ್ದರೆ ಖಾಯಂ ಆಗಿ ಅವನ ಹೆಸರನ್ನು ತೆಗೆದು ಹಾಕಿಸಬಹುದು. ಅಪರಾಧಿಗಳಿಗೆ ದಂಡ ಹಾಕಲೂ ಕಾಯಿದೆ ಅವಕಾಶ ಮಾಡಿಕೊಟ್ಟಿದೆ. ಆದರೆ ಕನಿಷ್ಟ ಶಿಕ್ಷೆ ಏನು ಎಂದು ಕಾಯಿದೆ ಹೇಳುವುದಿಲ್ಲ. ೩ ವರ್ಷಗಳ ಜೈಲು ವಾಸ ಮತ್ತು ೧೦,೦೦೦ ದಂಡ ಹಾಕಬೇಕು ಎಂದು ಮಾತ್ರ ಹೇಳುತ್ತದೆ. ಇದರಿಂದ ಅಪರಾಧಿಗಳಿಗೆ ಅತ್ಯಂತ ಕಡಿಮೆ ಶಿಕ್ಷೆ ನೀಡಲು ಅವಕಾಶವಿರುತ್ತದೆ.

ಅಲ್ಲದೆ ಕಾಯಿದೆಯು ಹೆಣ್ಣು ಭ್ರೂಣ ಹತ್ಯೆಯ ಸಮಸ್ಯೆಯ ಕೆಲವು ಅಂಶಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಂಡು, ಪ್ರಿನೇಟಲ್ ಡಯಾಗ್ನಿಸಿಸ್ ತಂತ್ರಜ್ಞಾನಗಳು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ, ಅವುಗಳ ಅಗತ್ಯವೆಷ್ಟು, ಅವು ಎಷ್ಟು ಸುರಕ್ಷಿತ ಎಂದು ಪ್ರಶ್ನಿಸುವುದಿಲ್ಲ.

ಲಿಂಗ ನಿರ್ಣಯ ಪರೀಕ್ಷೆ ದೇಶದ ಸೆಕ್ಸ್ ರೇಶಿಯೊವನ್ನು ಕಡಿಮೆ ಮಾಡುತ್ತಿದೆ. ಪ್ರಸ್ತುತ ೧,೦೦೦ ಗಂಡಸರಿಗೆ ೯೨೭ ಹೆಂಗಸರಿದ್ದಾರೆ. ಕಾಯಿದೆಯಲ್ಲಿ ಲೋಪದೋಷಗಳಿರುವುದರಿಂದ ಜನರು ಸುಲಭವಾಗಿ ಕಾಯಿದೆಯನ್ನು ಉಲ್ಲಂಘಿಸುತ್ತಿದ್ದಾರೆ.

ಕಾಯಿದೆಯಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗಿದೆ. ಅದು ಇನ್ನೂ ಹೆಚ್ಚು ಜಂಡರ್ ಸೆನ್ಸಿಟೀವ್ ಆಗಬೇಕಾಗಿದೆ. ಕಾಯಿದೆಯನ್ನು ಸರಳಗೊಳಿಸಿ ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಹಣಕ್ಕೋಸ್ಕರ ಇದನ್ನು ದಂದೆಯನ್ನಾಗಿ ಮಾಡಿರುವ ವೈದ್ಯರು ಮತ್ತು ವಾಣಿಜ್ಯೋದ್ಯಮಿಗಳನ್ನೂ ರಕ್ಷಿಸುವಂತ ಅಂಶಗಳನ್ನು ತೆಗೆದು ಹಾಕಬೇಕು. ಮಹಿಳೆಯರು ಬಲಿಪಶುಗಳಾಗುವುದನ್ನು ತಡೆಯುವುದಷ್ಟೆ ಅಲ್ಲ, ವೈದ್ಯರುಗಳನ್ನು ಶಿಕ್ಷಿಸಬೇಕು. ಮುಂದೆ ಬರುವಂತ ಹೊಸ ಲಿಂಗ ನಿರ್ಣಯ ಪರೀಕ್ಷೆಗಳನ್ನು ಕೂಡ ನಿಯಂತ್ರಿಸಬೇಕು.

ಮಹಿಳೆಯರನ್ನು ಅಪಮೌಲ್ಯಗೊಳಿಸುವ, ಪುರುಷ ಪ್ರಾಧಾನ್ಯತೆಯನ್ನು ಹೆಚ್ಚಿಸುವ ಸರ್ಕಾರಿ ನೀತಿ ನಿಯಮ ಮತ್ತು ಕಾರ್ಯಕ್ರಮಗಳ ಪುನರ್ ವಿಮರ್ಶೆ ಮಾಡಿ ಅವುಗಳನ್ನು ಸರಿಪಡಿಸುವುದು ತುಂಬ ಅಗತ್ಯವಾಗಿದೆ. ಗಂಡು ಮಗುವಿನ ಒಲವು ಮತ್ತು ಲಿಂಗ ಪಕ್ಷಪಾತವನ್ನು ಶಾಶ್ವತಗೊಳಿಸುವಂತ ಪರಿಸ್ಥಿತಿಗಳನ್ನು ಬದಲಾಯಿಸಬೇಕು. ಈ ರೀತಿ ಸಮಾಜದಲ್ಲಿ ಮೂಲಭೂತ ಬದಲಾವಣೆಯಾಗದ ಹೊರತು, ಬರಿ ಸರ್ಕಾರದ ಕಾಯಿದೆ ನೀತಿ ನಿಯಮಗಳಿಂದ ಯಾವ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಹಾಗೆ ಕಾಯಿದೆ ತಂದರು, ಕಾಟಾಚಾರಕ್ಕೆ ತಂದು ಜನರನ್ನು ವಂಚಿಸಿದಂತಾಗುತ್ತದೆ.

ಉಪ ಸಂಹಾರ : ಇಲ್ಲಿ ಕಾನೂನಿನ ಮೂಲಕ ಸರ್ಕಾರ ಮಧ್ಯಪ್ರವೇಶ ಮಾಡುವುದು ಅಗತ್ಯ ಎಂದು ಹೇಳಿದರೂ, ಕಾನೂನೆ ಮಹಿಳೆಯರ ಸಮಸ್ಯೆಗಳಿಗೆ ಅಂತಿಮ ಪರಿಹಾರ ನೀಡುತ್ತದೆ ಎಂದು ಹೇಳಲು ಬರುವುದಿಲ್ಲ. ಆದರೂ, ಯಾವುದೆ ಸಮಸ್ಯೆಯ ವಿರುದ್ಧ ಹೋರಾಡುವವರ ಕೈಯನ್ನು ಬಲಪಡಿಸಲು ಕಾಯಿದೆ ಕಾನೂನು ಬೇಕೇ ಬೇಕು. ಇಲ್ಲದಿದ್ದರೆ ಆಳುವವರ ಶಕ್ತಿ ಹೆಚ್ಚಾಗಿ ಶೋಷಣೆ ಹೆಚ್ಚಾಗುತ್ತದೆ.

ಎಲ್ಲರಿಗೂ ತಿಳಿದಂತೆ, ಸಾಮಾನ್ಯವಾಗಿ ಸರ್ಕಾರ ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಒಳ ಸಂಚು ಮಾಡುತ್ತಾ ಅವರಿಗೆ ಬೆಂಬಲ ನೀಡುತ್ತದೆ. ತಾನು ಮಧ್ಯ ಪ್ರವೇಶಿಸುವುದಿಲ್ಲ ಎಂದು ಹೇಳಿ ಅಥವಾ ಪ್ರವೇಶಿಸಿದರು ನಾಮಕಾವಸ್ಥೆಗೆ ಒಂದು ಕಾನೂನು ಅಂತ ಮಾಡಿ, ತಂತ್ರಜ್ಞಾನ ಬಳಕೆ ವ್ಯಾಪಕವಾಗಿ ಹರಡುವಂತೆ ಮಾಡುತ್ತದೆ. ಆದುದರಿಂದ ಆಸಕ್ತ ಮಹಿಳಾ ಗುಂಪುಗಳು ಈ ತಂತ್ರಜ್ಞಾನಗಳನ್ನು ತಡೆಯಲು ಸೂಕ್ತ ಕಾನೂನನ್ನು ಮಾಡಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು. ವೈದ್ಯರು ಮತ್ತು ವಾಣಿಜ್ಯೋದ್ಯಮಿಗಳು ಮಾಡುತ್ತಿರುವ ಕೆಲಸ ಎಷ್ಟರ ಮಟ್ಟಿಗೆ ನ್ಯಾಯ ಸಮ್ಮತವಾಗಿವೆ, ತಂತ್ರಜ್ಞಾನಗಳನ್ನು ಯಾಕೆ, ಯಾವ ಸಮಯದಲ್ಲಿ ಬಳಸಲಾಗಿದೆ ಎಂದು ಪ್ರಶ್ನಿಸಬೇಕು. ಮತ್ತು ತಂತ್ರಜ್ಞಾನಗಳ ಬಗ್ಗೆ ಇರುವ ತಪ್ಪು ನಂಬಿಕೆಗಳನ್ನು ಹೋಗಲಾಡಿಸಬೇಕು.

ತಂತ್ರಜ್ಞಾನ ಬಳಕೆಯು ಎಷ್ಟರ ಮಟ್ಟಿಗೆ ಮಹಿಳೆಯರಿಗೆ ಸಂತಾನೋತ್ಪತ್ತಿ ಕಾರ್ಯವನ್ನು ಆಯ್ಕೆಯ ವಿಷಯವನ್ನಾಗಿಸಿದೆ, ಅವರ ನಿರ್ಧಾರ ಕೈಗೊಳ್ಳುವ ಹಕ್ಕನ್ನು ನಿರಾಕರಿಸುತ್ತದೆ? ಎಂಬ ವಿಷಯಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಬೇಕು. ಸ್ತ್ರೀಯರ ಮೇಲೆ ಅವು ಯಾವ ರೀತಿ ಪರಿಣಾಮ ಬೀರುತ್ತವೆ ಎಂದು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸವಾಲಿರುವುದು ಕಾನೂನನ್ನು ಮಾಡುವುದರಲ್ಲಲ್ಲ. ಶೋಷಣೆಗೆ ದಾರಿ ಮಾಡಿಕೊಡುವ ತಂತ್ರಜ್ಞಾನಗಳ ಜಟಿಲತೆಯನ್ನು ಬಹಿರಂಗ ಪಡಿಸುವುದರಲ್ಲಿದೆ, ತಂತ್ರಜ್ಞಾನಗಳನ್ನು ನಿರ್ಮೂಲ ಮಾಡುವುದರಲ್ಲಿದೆ. ಈ ತಂತ್ರಜ್ಞಾನದ ಬೆಳವಣಿಗೆಗೆ, ಹರಡುವಿಕೆಗೆ ಅವಕಾಶ ಮಾಡಿಕೊಡುವ ಸಾಮಾಜಿಕ ರಚನೆಗಳನ್ನು ಬದಲಾಯಿಸುವುದರಲ್ಲಿದೆ. ಸಮಾಜದಲ್ಲಿ ಮೂಲಭೂತ ಬದಲಾವಣೆಯಾದರೆ ಲಿಂಗ ನಿರ್ಣಯ ಪರೀಕ್ಷೆ ಮತ್ತು ಹೆಣ್ಣು ಭ್ರೂಣ ಹತ್ಯೆ ಸಮಸ್ಯೆಗಳು ತಾವಾಗಿಯೆ ನಿವಾರಣೆಯಾಗುತ್ತವೆ.

ಮೂಲ : The Victimising Discourse
Sex determination Technologies & Policy
Economic & Political Weekly - Feb 17, 1996
ಸಂಗ್ರಹಾನುವಾದ : ಹೇಮಲತ H. M.

'ಮನೆಕೆಲಸದಲ್ಲಿ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಶಿಕ್ಷಣ ನೀಡಬೇಕು'

ಗಾಂಧೀಜಿ

ನಮಗೆಲ್ಲ ತಿಳಿದಿರುವಂತೆ ಗಾಂಧೀಜಿಯವರ ಎಷ್ಟೋ ವಿಚಾರಗಳು, ಚಿಂತನೆಗಳು ತತ್ವಗಳು ನಮ್ಮ ಜೀವನದ ಅನೇಕ ವಿಷಯಗಳಲ್ಲಿ ಈಗಲೂ ಪ್ರಸಕ್ತವೆನಿಸುತ್ತವೆ. ಅದರಲ್ಲೂ ಅವರು ಮಹಿಳೆಯರ ಕುರಿತು ಹೇಳಿರುವ ವಿಷಯಗಳನ್ನು ನಾವು ಅನುಸರಿಸಿದರೆ, ಮಹಿಳೆಯರ ಬಗ್ಗೆ ಇರುವ ಅನೇಕ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಬಹುದು. ಮನೆ ಕೆಲಸದಿಂದ ಹಿಡಿದು ರಾಜಕೀಯದವರೆಗೆ ಎಲ್ಲಾ ಕ್ಷೇತ್ರದಲ್ಲೂ ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಭಾಗವಹಿಸಬೇಕು ಎಂದು ಹೇಳುತ್ತಿದ್ದರು. ಮನೆಕೆಲಸದ ಬಗ್ಗೆ ಅವರ ಅಭಿಪ್ರಾಯವನ್ನು ಕೆಳಗಿನ ಒಂದು ಸಂವಾದದಿಂದ ತಿಳಿದುಕೊಳ್ಳಬಹುದು.

ಗಾಂಧೀಜಿಯವರ ಆಶ್ರಮದ ಸಹದ್ಯೋಗಿ ಕಾಕಾಸಾಹೇಬ್ ಬರೆದು ಕೊಡಲು ಹೇಳಿದರು. ಗಾಂಧೀಜಿಯವರಿಗೆ ಪ್ರಾಥಮಿಕ ಶಾಲೆ ಮಕ್ಕಳಿಗೆ ಪಠ್ಯಪುಸ್ತಕ ಬರೆದು ಕೊಡಲು ಹೇಳಿದರು. ಗಾಂಧೀಜಿಯವರು ಒಂದು ಸಣ್ಣ ಪುಸ್ತಕ ಬರೆದುಕೊಟ್ಟರು. ಪಾಠವು ತಾಯಿ ಮಗುವಿಗೆ ಬೋಧಿಸುವ ರೀತಿಯಲ್ಲಿತ್ತು. ಪಾಠಗಳಲ್ಲಿ ಅವರು ಲಿಂಗತಾರತಮ್ಯವೂ ತೋರದಂತ ವಿಷಯಗಳನ್ನೆ ಹೆಚ್ಚಾಗಿ ಬಳಸಿದ್ದರು. ಇದನ್ನು ಕೆಲವು ಸಹದ್ಯೋಗಿಗಳು ವಿರೋಧಿಸಿದರು. ಆಗ ಗಾಂಧೀಜಿ ಹೇಳಿದರು "ನಾನು ಹೊಸ ಸಮಾಜವನ್ನು ಕಟ್ಟುತ್ತಿದ್ದೇನೆ. ಆ ಹೊಸ ಸಮಾಜದಲ್ಲಿ ಮಕ್ಕಳು ಸ್ವಚ್ಛವಾಗಿರಬೇಕು, ಪ್ರಾರ್ಥನೆ ಮಾಡಬೇಕು, ಆಟ ಆಡಬೇಕು, ವ್ಯಾಯಾಮ ಮಾಡಬೇಕು, ಆರೋಗ್ಯವಂತರಾಗಿ ಬಲಿಷ್ಠರಾಗಿರಬೇಕು, ಕೆಲಸ ಮಾಡುವುದರಲ್ಲಿ ಸಂತೋಷ ಪಡಬೇಕು, ಜಮೀನಿನಲ್ಲಿ ಕೆಲಸ ಮಾಡಬೇಕು, ಕುಶಲ ಕೆಲಸಗಳ ಜೊತೆ ಮನೆಕೆಲಸವನ್ನು ಮಾಡಬೇಕು"

'ಮನೆಕೆಲಸ' ಎಂಬ ಅಧ್ಯಾಯದಲ್ಲಿ ತಾಯಿ ಮಗನಿಗೆ ಹೇಳುತ್ತಾಳೆ.

- 'ಮಗು ನೀನು ನಿನ್ನ ಅಕ್ಕನ ಹಾಗೆ ಮನೆಕೆಲಸದಲ್ಲಿ ಸಹಾಯ ಮಾಡಬೇಕು'.

ಮಗ ಹೇಳುತ್ತಾನೆ - 'ಆದರೆ ಅಕ್ಕ ಹುಡುಗಿ, ನಾನು ಹುಡುಗ. ಹುಡುಗ ಆಟ ಆಟಬೇಕು, ಓದಬೇಕು, ನಾನ್ಯಾಕೆ ಕೆಲಸ ಮಾಡಲಿ.

ಅಕ್ಕ : ಅದು ಹೇಗೆ ಸಾಧ್ಯ? ನನಗೂ ಆಟ ಆಡಲು ಆಸೆ ಓದಲು ಆಸೆ.

ಮಗ : ಅಕ್ಕ ನೀನು ಆಟ ಆಡಬೇಡ, ಓದಬೇಡ ಎಂದು ನಾನು ಹೇಳುವುದಿಲ್ಲ. ಆದರೆ ನೀನು ಮನೆಕೆಲಸ ಮಾಡಲೇ ಬೇಕು.

ತಾಯಿ : ಹುಡುಗ ಯಾಕೆ ಮನೆಕೆಲಸ ಮಾಡಬಾರದು?

ಮಗ : ಯಾಕೆಂದರೆ ಹುಡುಗ ದೊಡ್ಡವನಾದ ಮೇಲೆ ಹಣ ಸಂಪಾದಿಸಬೇಕು, ಆದುದರಿಂದ ಅವನು ಚೆನ್ನಾಗಿ ಓದಬೇಕು.

ತಾಯಿ : ಮಗು ನೀನು ತಪ್ಪು ತಿಳಿದಿದ್ದೀಯ. ಹೆಂಗಸರೂ ಕುಟುಂಬಕ್ಕೋಸ್ಕರ ಹಣ ಸಂಪಾದಿಸುತ್ತಾರೆ. ಮನೆಕೆಲಸದಿಂದ ಕಲಿಯುವುದು ಸಾಕಷ್ಟಿದೆ. ಮನೆ ಸ್ವಚ್ಛಮಾಡುವುದು, ಅಡಿಗೆ ಮಾಡುವುದು, ಬಟ್ಟೆ ಒಗೆಯುವುದು, ಇವೆಲ್ಲವು ನಮ್ಮ ಜೀವನದಲ್ಲಿ ತುಂಬ ಅಗತ್ಯ. ಈ ಕೆಲಸಗಳನ್ನು ಮಾಡುವುದರಿಂದ ನೀನು ಅನೇಕ ದೈಹಿಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಬಹುದು ಮತ್ತು ನಿನ್ನಲ್ಲಿ ನಿನಗೆ ಆತ್ಮವಿಶ್ವಾಸ ಹುಟ್ಟುತ್ತದೆ. ಮನೆಕೆಲಸಗಳನ್ನು ಮಾಡಲು ಕಣ್ಣು, ಕೈ ಮತ್ತು ಮಿದುಳನ್ನು ಬಳಸಿಕೊಳ್ಳುವುದರಿಂದ, ಈ ಚಟುವಟಿಕೆಗಳು ನಮಗೆ ಶಿಕ್ಷಣ ನೀಡುತ್ತವೆ ಮತ್ತು ನಮ್ಮ ನಡವಳಿಕೆಯನ್ನು ರೂಪಿಸುತ್ತವೆ. ಮನೆಕೆಲಸದಲ್ಲಿ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಶಿಕ್ಷಣ ನೀಡಬೇಕು ಏಕೆಂದರೆ ಮನೆಯು ಇಬ್ಬರಿಗೂ ಸೇರಿರುವಂತದ್ದು".

ಮೂಲ - Gandhi on Women - Pushpa Joshi

ಸಂಗ್ರಹ - ಹೇಮಲತ H. M, ಮೈಸೂರು.

ಸಮೂಹ ಮಾಧ್ಯಮ ಮತ್ತು ಮಹಿಳೆ

ಚಂದ್ರಮತಿ ಸೋಂದಾ

ಯಾವುದೇ ಒಂದು ಸಮುದಾಯದ ಆಶಯ, ಆಶೋತ್ತರಗಳನ್ನು, ನೋವು-ನಲಿವುಗಳನ್ನು ಪ್ರತಿಬಿಂಬಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹಿರಿದಾದುದು. ಕಾಲದಿಂದ ಕಾಲಕ್ಕೆ ಈ ಮಾಧ್ಯಮಗಳ ಸ್ವರೂಪ ಬದಲಾಗುವುದಾದರೂ ಪ್ರಾಚೀನ ಕಾಲದಿಂದಲೂ ಈ ಮಾಧ್ಯಮ ಸಮುದಾಯದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡೇ ಬಂದಿದೆ. ಹಿಂದೆ, ಜನಪದ ಕಾವ್ಯಗಳು ಮತ್ತು ಜನಪದ ರಂಗಭೂಮಿ ತಾವು ಪ್ರತಿನಿಧಿಸುವ ಸಮುದಾಯದ ನಂಬಿಕೆಗಳ, ಆಶಯಗಳ ಮುಖವಾಣಿಯಾಗಿ ಕೆಲಸ ಮಾಡುತ್ತಿದ್ದವು. ಆ ಸಮುದಾಯದ ಒಪ್ಪಿತ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿದ್ದವು. ಇಪ್ಪತ್ತನೆಯ ಶತಮಾನದಲ್ಲಿ ಅಕ್ಷರ ಸಂಸ್ಕೃತಿ ಹೆಚ್ಚು ವ್ಯಾಪಕವಾಗ ತೊಡಗುತ್ತಿದ್ದಂತೆ ಪತ್ರಿಕೆಗಳು ಆ ಸ್ಥಾನವನ್ನು ಆಕ್ರಮಿಸಿದವು.

ಸ್ವಾತಂತ್ರ್ಯಪೂರ್ವದಲ್ಲಿ, ಜನರನ್ನು ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದರಲ್ಲಿ ಪತ್ರಿಕೆಗಳು ಪ್ರಧಾನ ಪಾತ್ರ ವಹಿಸಿದವು. ಲೋಕಮಾನ್ಯ ತಿಲಕರು 'ಮರಾಠಾ', 'ಕೇಸರಿ' ಪತ್ರಿಕೆಗಳ ಮೂಲಕ ಸ್ವಾತಂತ್ರ್ಯದ ಕಹಳೆಯೂದಿದರೆ, ಕನ್ನಡನಾಡಿನಲ್ಲಿ ನವ ಕರ್ನಾಟಕ, ಸಂಯುಕ್ತ ಕರ್ನಾಟಕದಂತಹ ಪತ್ರಿಕೆಗಳು ಆ ಕೆಲಸವನ್ನು ನಿರ್ವಹಿಸಿದವು. ಅದೇ ಹೊತ್ತಿನಲ್ಲಿ ನಂಜನಗೂಡು ತಿರುಮಲಾಂಬಾ ಅವರು 'ಕರ್ನಾಟಕ ನಂದಿನಿ' ಎಂಬ ಪತ್ರಿಕೆಯ ಪ್ರಕಟನೆಗೆ ಕೈಯಿಕ್ಕಿ ಪತ್ರಿಕೋದ್ಯಮಿಯಾದರು. ಅವರು ಈ ಪತ್ರಿಕೆಯಲ್ಲಿ ಮಹಿಳೆಯರಿಗೆ ಮೊದಲ ಆದ್ಯತೆ ನೀಡಿದರು. ಮಹಿಳೆಯರ ಸಾಹಿತ್ಯ ಪ್ರಕಟನೆಗೆ ಪ್ರೋತ್ಸಾಹ ನೀಡುವುದರೊಂದಿಗೆ, ಮಹಿಳಾ ಸಮಸ್ಯೆಗಳಿಗೆ ಸಾಕಷ್ಟು ಗಮನಹರಿಸಿದರು. "ನಮ್ಮ ಬಾಲಿಕಾ ಶಿಕ್ಷಣದ ಕಡೆಗೂ, ಸ್ತ್ರೀಯರ ನಿತ್ಯ ಸೇವಾ ವಿಚಾರದ ಕಡೆಗೂ ನಮ್ಮ ದೇಶಬಾಂಧವರು ಕೊಡಬೇಕಾದ ಆಸಕ್ತಿ, ಮತ್ತು ಅನಾಥೆಯರಾಗಿ, ಸಮಾಜ ಶಾಸನಕ್ಕೆ ಬಲಿಬಿದ್ದು ಕ್ಲೇಶ-ರೋಷಗಳಿಂದ ನರಳುತ್ತಿರುವ ಆ ದೀನ ದುಃಖಿಯರಾದ ವಿತಂತು ಭಗಿನಿಯರಲ್ಲಿ, ನಮ್ಮವರೂ ನಮ್ಮ ಭಾತೃವರ್ಗೀಯರೂ ತೋರಿಸಬೇಕಾದ ವಿಶ್ವಾಸ ಗೌರವ ಇವರನ್ನು ಕುರಿತು ವಿಚಾರ ಮಾಡುವುದು" 26-2-1924ರ ಸಂಚಿಕೆಯಲ್ಲಿ ಅವರು ನೀಡಿರುವ ಈ ಸಂದೇಶವೇ ಅವರ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಹೆಣ್ಣೊಬ್ಬಳು ಪುಸ್ತಕ ಹಿಡಿಯುವುದೇ ಅಪರಾಧ ಎಂದು ಭಾವಿಸಿದ್ದ ಸಮಯದಲ್ಲಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಕುರಿತಂತೆ ಲೇಖನಗಳನ್ನು ಸ್ವತಃ ಬರೆದು ಪ್ರಕಟಿಸಿದರು. ಕುಟುಂಬದ ಉನ್ನತಿಗೆ, ಮಕ್ಕಳ ಅಭಿವೃದ್ಧಿಗೆ ಮಹಿಳೆ ಅಕ್ಷರಸ್ಥಳಾಗಬೇಕಾದ ಅನಿವಾರ್ಯತೆಯನ್ನು ಎತ್ತಿ ತೋರಿಸಿದರು. ವಿಧವೆಯರನ್ನು ವಿರೂಪಗೊಳಿಸುವುದನ್ನು ವಿರೋಧಿಸಿದರು; ಅವರು ಸಮಾಜಸೇವೆ ಮಾಡಲು ಅವಕಾಶವಿರಬೇಕೆಂದು ಪ್ರತಿಪಾದಿಸಿದರು.

ತಿರುಮಲಾಂಬ ಅವರಂತೆಯೇ ಆರ್. ಕಲ್ಯಾಣಮ್ಮ ಅವರು 'ಸರಸ್ವತಿ' ಪತ್ರಿಕೆಯನ್ನು ನಡೆಸಿದರು. ಈ ಪತ್ರಿಕೆ ಸುಮಾರು 40 ವರ್ಷಗಳ ಕಾಲ ಪ್ರಕಟವಾಯಿತು. ಮಹಿಳೆಯರ ಸಮಸ್ಯೆಗಳ ಬಗೆಗೆ ಕಲ್ಯಾಣಮ್ಮ ಅವರ ಧೋರಣೆ ತಿರುಮಲಾಂಬ ಅವರಿಗಿಂತ ತುಸು ಭಿನ್ನವಾದುದು. ಸ್ತ್ರೀ ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿದ ಕಲ್ಯಾಣಮ್ಮ ವಿಧವೆಯರ ಪುನರ್ವಿವಾಹದ ಪರವಾಗಿ ಮಾತನಾಡಿದರು. ಪತ್ರಿಕೆಯಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗವನ್ನು ಪ್ರಾರಂಭಿಸಿದ ಅವರು ಮಹಿಳೆಯರ ಸಮಸ್ಯೆಗಳ ಮೂಲ ಕಾರಣಗಳನ್ನು ಗ್ರಹಿಸಿ ಅವುಗಳ ನಿವಾರಣೆಗೆ ಕೆಲವು ಪರಿಹಾರೋಪಾಯಗಳನ್ನು ಆ ಮೂಲಕ ಸೂಚಿಸಿದರು. ಸಮಕಾಲೀನ ಲೇಖಕಿಯರಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿದರು. ಈ ಬರಹಗಾರ್ತಿಯರಿಬ್ಬರೂ ಬಾಲ್ಯವಿವಾಹವನ್ನು ವಿರೋಧಿಸಿ, ಅದರಿಂದುಂಟಾಗುವ ಕೆಡಕನ್ನು ತಿಳಿಸಿ ಸಮಾಜವನ್ನು ಎಚ್ಚರಿಸುವ ಕೆಲಸವನ್ನು ಬಹಳ ನಿಸ್ಪೃಹತೆಯಿಂದ, ಕಾಳಜಿಯಿಂದ ಮಾಡಿದರು.

ಕರ್ನಾಟಕದ ಉತ್ತರ ಭಾಗದಿಂದ ಹೊರಡುತ್ತಿದ್ದ ಜಯ ಕರ್ನಾಟಕ ಪತ್ರಿಕೆಯಲ್ಲಿ ತಮ್ಮ ಪತಿಯೊಂದಿಗೆ ಕೆಲಸ ಮಾಡುತ್ತಿದ್ದ ಶ್ಯಾಮಲಾದೇವಿಯವರು ಆ ಪತ್ರಿಕೆಯ ಮೂಲಕ ಆ ಭಾಗದ ಜನರನ್ನು ಎಚ್ಚರಿಸುವ ಕಾರ್ಯವನ್ನು ಕೈಗೊಂಡರು; ಮಹಿಳೆಯರ ಪ್ರಗತಿಗಾಗಿ ಬಹಳ ಶ್ರಮಿಸಿದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಮ್ಮ ಸಹೋದರಿಯರ ಬಿಡುಗಡೆಗಾಗಿ ಕಾರ್ಯ ಪ್ರವೃತ್ತರಾಗುವುದು ಕಡಿಮೆಯಾಗುತ್ತ ಬಂತು. ಸಾಕಷ್ಟು ಪತ್ರಿಕೆಗಳು ಈಗ ಹೊರಬರುತ್ತಿವೆ. ಆದರೆ ಮಹಿಳೆಯರ ಅಭಿವೃದ್ಧಿಯನ್ನು ಗಮನದಲ್ಲಿರಿಸಿರುವ ಪತ್ರಿಕೆಗಳು ಇಲ್ಲವೆಂದೇ ಹೇಳಬಹುದು. ಪ್ರಾರಂಭದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಅಂಕಣವನ್ನು ಹೊಂದಿದ್ದ ಪತ್ರಿಕೆಗಳೂ ಇತ್ತೀಚಿನ ವರ್ಷಗಳಲ್ಲಿ ಅದನ್ನು ಕೈಬಿಟ್ಟವು. ಉದಾ : 'ಕನ್ನಡಪ್ರಭ',

'ಪ್ರಜಾವಾಣಿ', 'ಉದಯವಾಣಿ', 'ಸಂಯುಕ್ತ ಕರ್ನಾಟಕ' ಮುಂತಾದ ರಾಜ್ಯವ್ಯಾಪ್ತಿಯನ್ನು ಹೊಂದಿರುವ ದೈನಿಕಗಳು ಮಹಿಳೆಯರಿಗೆ ಸಂಬಂಧಿಸಿದಂತೆ ವಿಶೇಷ ಗಮನವನ್ನೇನೂ ಕೊಡುತ್ತಿಲ್ಲ.

ಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಬೇಕಷ್ಟು ವಾರ ಪತ್ರಿಕೆಗಳು ಪ್ರಕಟವಾಗುತ್ತಿವೆ. ಇವು ಮಹಿಳೆಗೆ ಸಂಬಂಧಿಸಿದಂತೆ ಪ್ರಗತಿಪರ ಧೋರಣೆಯನ್ನುಳ್ಳ ಪತ್ರಿಕೆಗಳಲ್ಲ. ಮಹಿಳೆಯರ ಕೆಲವು ಜನಪ್ರಿಯ ಧಾರವಾಹಿಗಳನ್ನು, ಆಕರ್ಷಕ ಕತೆಗಳನ್ನು ಪ್ರಕಟಿಸುತ್ತಿದೆ. ಕರ್ಮವೀರ, ತರಂಗ, ಪ್ರಜಾಮತ, ಮಂಗಳ, ಸುಧಾ ಇವೆಲ್ಲ ಒಂದೇ ಗುಂಪಿಗೆ ಸೇರಿದವು. ಕೆಲವು ವಾರಪತ್ರಿಕೆಗಳು ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗವನ್ನು ಹೊಂದಿದ್ದರೂ, ಸುಧಾ ಪತ್ರಿಕೆಯ ಕಾಮಧೇನು ವಿಭಾಗದಂತೆ ಹೊಸ ಅಡಿಗೆ, ರಂಗೋಲಿ, ಕಸೂತಿ, ಕೇಶವಿನ್ಯಾಸ, ಗೃಹಾಲಂಕಾರ, ಫ್ಯಾಶನ್ ಉಡುಪುಗಳಿಗೆ ಆದ್ಯತೆ. ಅಪರೂಪಕ್ಕೊಮ್ಮೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಲ್ಲಿ ಯಾರಾದರೊಬ್ಬರ ಸಂದರ್ಶನವನ್ನೋ, ಮಾಹಿತಿಗಳನ್ನೋ ಪ್ರಕಟಿಸಿ, ತಾವೂ ಮಹಿಳಾಪರ ಎಂದು ಕೈತೊಳೆದುಕೊಳ್ಳುತ್ತಿವೆ. ಈ ಪತ್ರಿಕೆಗಳಿಗೆ ಹೋಲಿಸಿದರೆ 'ಲಂಕೇಶ್ ಪತ್ರಿಕೆ' ಹಲವಾರು ಮಹಿಳೆಯರಿಗೆ ಸಾಹಿತ್ಯ ಕೃಷಿಗೆ ಪ್ರೋತ್ಸಾಹ ನೀಡುತ್ತ ಬಂದಿದೆ.

ಮಯೂರ, ತುಷಾರ, ಉತ್ಥಾನ, ಮಲ್ಲಿಗೆ ಮುಂತಾದ ಮಾಸಪತ್ರಿಕೆಗಳ ಉದ್ದೇಶ ಕಥಾ ಪ್ರಕಟನೆ. ಎಲ್ಲೋ ಒಂದೊಂದು ಲೇಖನ. ಇವು ಎಲ್ಲ ಬಗೆಯ ಓದುಗ ಬಳಗವನ್ನೂ ಲಕ್ಷ್ಯದಲ್ಲಿರಿಸಿಕೊಂಡು ಸಾಂಪ್ರದಾಯಿಕ ಮೌಲ್ಯಗಳಾದ ಶೀಲ, ಪಾತಿವ್ರತ್ಯ, ವಿಧೇಯತೆಗಳು ಮಹಿಳೆಯರಲ್ಲಿ ಇರಲೇಬೇಕೆನ್ನುವಂತಹ ಕತೆಗಳನ್ನು ಮುಖ್ಯವಾಗಿ, ಹಾಗೂ ಬದಲಾವಣೆಗೆ ಸ್ಪಂದಿಸುವ ಕತೆಗಳನ್ನು ಆಗೊಮ್ಮೆ, ಈಗೊಮ್ಮೆ ಪ್ರಕಟಿಸುತ್ತಿವೆ. ಈ ಪತ್ರಿಕೆಗಳಿಗೆ ಯಾವುದೇ ಸೈದ್ಧಾಂತಿಕ ಧೋರಣೆಗಳಿಲ್ಲ. ತಮ್ಮ ಪ್ರಸಾರವನ್ನು ಹೆಚ್ಚಿಸಿಕೊಳ್ಳಲು ಬೇಕಾದ ಹುನ್ನಾರವನ್ನು ಕಂಡುಕೊಳ್ಳುವುದು ಇವುಗಳ ಉದ್ದೇಶ. ಈ ಮಾತು ವಾರಪತ್ರಿಕೆಗಳಿಗೂ ಅನ್ವಯಿಸುತ್ತದೆ. ಈ ಎಲ್ಲ ಪತ್ರಿಕೆಗಳು ಮಹಿಳೆ ಅಬಲೆ, ಸ್ವಂತ ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯ ಆಕೆಗಿಲ್ಲ; ಆಡಳಿತಾತ್ಮಕ ಜವಾಬ್ದಾರಿಯನ್ನು ಆಕೆ ನಿರ್ವಹಿಸಲಾರಳು ಎಂಬಂತಹ 'ಮಿಥ್ಯೆ'ಯನ್ನು ಒಡೆದು ಸಮಾಜವನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಬಹುದಿತ್ತು. ಇವು ಅಂತಹ ಪ್ರಗತಿಪರ ಧೋರಣೆಯ ಬಗೆಗೆ ಮೌನವಹಿಸಿವೆ.

ಕೆಲವು ಮಹಿಳಾ ಪತ್ರಿಕೆಗಳಿವೆ. ಯುವತಿಯರ ಅಚ್ಚುಮೆಚ್ಚಿನ ಪತ್ರಿಕೆ ಎಂಬ ಹಣೆಪಟ್ಟಿ ಅಂಟಿಸಿಕೊಂಡಿರುವ 'ಗೃಹಶೋಭಾ' ಹದಿ ಹರಯದವರನ್ನು ವಾಸ್ತವತೆಗೆ ವಿಮುಖರನ್ನಾಗಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡುತ್ತಿದೆ. ಪತ್ರಿಕೆಯ ಹೆಸರೇ ಸೂಚಿಸುವಂತೆ ಮಹಿಳೆ ಗೃಹಕ್ಕೆ ಮಾತ್ರ ಶೋಭೆ ಎನ್ನುವಂತಹ ಲೇಖನಗಳನ್ನು ಮತ್ತು ಕತೆಗಳನ್ನು ಮಾತ್ರ ಪ್ರಕಟಿಸುತ್ತದೆ. ಈ ಪತ್ರಿಕೆಯ ಧೋರಣೆಯನ್ನು 1994ರ ನವೆಂಬರ್ ಸಂಚಿಕೆಯ 'ವಿಹಂಗಮ' ವಿಭಾಗದ ಈ ಕೆಳಗಿನ ಮಾತುಗಳು ಪ್ರತಿನಿಧಿಸುತ್ತದೆ : 'ಸ್ತ್ರೀ ಶಕ್ತಿ ಸಮಾನತೆಯ ಬಗ್ಗೆ ಈ ಮಹಿಳಾ ಕೂಗು ಬರಿಯ ವ್ಯರ್ಥಾಲಾಪವಾಗಿ ಕೇಳುತ್ತಿದೆ. ಅದು ಹೆಣ್ಣನ್ನು ಗಂಡಾಗಿಸಲು ಧಾವಿಸಿ ಅವಳ ಸ್ತ್ರೀಯೋಚಿತ ಶ್ರೇಷ್ಠತೆಗೆ ಸಂಚಕಾರ ತರುತ್ತಿದೆ. ಪುರುಷರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಭರಾಟೆಯಲ್ಲಿ ಮಹಿಳೆಯರು ತಮ್ಮ ರೂಪ-ಲಾವಣ್ಯ ಇನ್ನಿಲ್ಲವಾಗಿಸಿ ಕೊಳ್ಳುತ್ತಿದ್ದಾರೆ. ಅವರ ಆಕರ್ಷಣೆ ಅವರ ಬುದ್ಧಿಯ ಪರದೆಯಿಂದ ಮುಚ್ಚಿಡಲ್ಪಡುತ್ತಿದೆ. ವಧುದಕ್ಷಿಣೆ ಅಥವಾ ವರದಕ್ಷಿಣೆಯನ್ನು ಟೀಕಿಸುವವರು ಈ ಎರಡೂ ಸಂದರ್ಭಗಳಲ್ಲೂ ಹಣ ವಧುವಿಗೇ ಸೇರುತ್ತದೆ ಎಂಬುದನ್ನು ಮರೆತಂತಿದೆ. ಅದು ಅವಳ ವ್ಯಕ್ತಿತ್ವದ ಮೌಲ್ಯ, ಅವಳ ಯೋಗ್ಯತೆಯ ಮಾನದಂಡ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಇದರ ಬಗ್ಗೆ ಚೀರಾಡುವುದಕ್ಕೆ ಮುಂಚೆ ತುಸು ಚಿಂತಿಸುವುದು ಲೇಸು''. ಈ ಪತ್ರಿಕೆಯಲ್ಲಿ ಇಂತಹ ಅಭಿಪ್ರಾಯ ಆಕಸ್ಮಿಕವಲ್ಲ. ಜನವರಿ 96ರ ಸಂಚಿಕೆಯ ಅದೇ ಅಂಕಣದ ನುಡಿಮುತ್ತುಗಳಿವೆ : 'ನಮ್ಮದು ಪುರುಷ ಪ್ರಧಾನ ಸ್ತ್ರೀ ವಿರೋಧಿ ಸಮಾಜ.... ಇಡೀ ಜಗತ್ತೇ ಪುರುಷನ ವಿರುದ್ಧ ಸಿಡಿದೆದ್ದಂತಿದೆ. ಮನೆಯೊಳಗೆ ಹಿಂಸೆ ಕೊಡುವುದರಲ್ಲಿ ಹೆಂಗಸೇ ಮುಂದು. ಮುಗ್ಧ ಮಕ್ಕಳ ಶೋಷಣೆ, ಸವತಿ ಕಾಟ, ಮುದಿ ಅತ್ತೆ, ಮಾವಂದಿರಿಗೆ, ಮಹಿಳೆಯರೇ ಹೆಚ್ಚು ತೊಂದರೆ ಕೊಡುತ್ತಾರೆ'. ಫೆಮಿನಾ ಕೂಡ ಇದೇ ಸಾಲಿಗೆ ಸೇರುತ್ತದೆ. ಇಂತಹ ಪತ್ರಿಕೆಗಳು ಮಹಿಳೆಯ ಪ್ರಗತಿಗೆ ಅಡ್ಡಗಾಲು ಹಾಕುವುದಲ್ಲದೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಮಹಿಳೆಯ ಯಾವುದೇ ಸಾಧನೆಗೆ ಪ್ರಾಶಸ್ತ್ಯ ನೀಡದೆ, ಆಕೆಯ ದೇಹ ಸೌಂದರ್ಯಕ್ಕೆ ಒತ್ತು ನೀಡಿ, ಗ್ಲ್ಯಾಮರ್ ಸೃಷ್ಟಿಸಿ, ಯುವ ಪೀಳಿಗೆಯನ್ನು ತಪ್ಪುದಾರಿಗೆ ಎಳೆಯುತ್ತವೆ.

ವನಿತಾ ಮಹಿಳಾ ವಾರಪತ್ರಿಕೆಯಾಗಿದ್ದು ಒಪ್ಪಿತ ಸಾಮಾಜಿಕ ಮೌಲ್ಯಗಳನ್ನು ತಿರಸ್ಕರಿಸದೆ, ಸುಧಾರಣೆಯನ್ನು ಸ್ವಾಗತಿಸುವ ಕೆಲಸವನ್ನು ಮಾಡುತ್ತಿದೆ. ಪ್ರಗತಿಪರ ವಿಚಾರ ಧಾರೆಯುಳ್ಳ ಲೇಖನಗಳನ್ನು, ಕತೆಗಳನ್ನು ಪ್ರಕಟಿಸುತ್ತಿದೆ. ವರದಕ್ಷಿಣೆ, ವಧುದಹನ ಅತ್ಯಾಚಾರಗಳನ್ನು ವಿರೋಧಿಸುತ್ತ, ವಿಧವಾ ವಿವಾಹ, ಮಹಿಳೆಯರ ದುಡಿಮೆ ಮುಂತಾದ ಮಹಿಳಾಪರ ಆಲೋಚನೆಗಳಿಗೆ ಅವಕಾಶ ನೀಡುತ್ತಿದೆ.

ಬೆಂಗಳೂರಿನಲ್ಲಿ ಪ್ರಕಟವಾಗುತ್ತಿರುವ ಮಾನಸ ಮತ್ತು ಅಚಲ ಪತ್ರಿಕೆಗಳು ಸ್ತ್ರೀವಾದಿ ಚಳುವಳಿಯಲ್ಲಿ ತಮ್ಮನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡ ಮಹಿಳೆಯರಿಂದ ಪ್ರಕಟವಾಗುತ್ತಿವೆ. ಈ ಪತ್ರಿಕೆಗಳು ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿನ ದೋಷಗಳನ್ನು ಬೆರಳಿಟ್ಟು ತೋರಿಸುತ್ತ, ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿನ ಗುಣಾತ್ಮಕ ಅಂಶಗಳಿಗಾಗಿ ಹುಡುಕಾಟ ನಡೆಸುತ್ತ ಪರ್ಯಾಯ ಸಂಸ್ಕೃತಿಯ ನಿರ್ಮಾಣಕ್ಕೆ ರಚನಾತ್ಮಕವಾಗಿ ಹೋರಾಡುತ್ತಿವೆ. ಮೈಸೂರಿನ ಸಮತಾ ವೇದಿಕೆ ಅನಿಯತಕಾಲಿಕವಾಗಿ ಹೊರತರುತ್ತಿರುವ ಸಮತಾ ವಾರ್ತಾಪತ್ರ ಸಮಾನತೆಯನ್ನು ಆಧರಿಸಿದ ಸಮಾಜ ನಿರ್ಮಾಣವನ್ನು ಗುರಿಯಾಗಿಟ್ಟುಕೊಂಡಿದೆ. ಬಂಡವಾಳ ಶಾಹಿಯನ್ನು ದೂರವಿಟ್ಟಿರುವ, ಜಾಹಿರಾತುಗಳನ್ನು ಆಶ್ರಯಿಸದ ಪತ್ರಿಕೆಗಳಿವು. ಆದರೆ ಇವು ನಗರ ಪ್ರದೇಶದ ಮಧ್ಯಮವರ್ಗದ ಕೆಲವೇ ಮಹಿಳೆಯರನ್ನು ತಲುಪುತ್ತಿವೆ. ಇಂತಹ ಪತ್ರಿಕೆಗಳು ನಗರ ಮತ್ತು ಗ್ರಾಮೀಣ ಪ್ರದೇಶದ ಎಲ್ಲ ವರ್ಗದ ಮಹಿಳೆಯರನ್ನು ತಲುಪುವಂತಾಗಿ ಅವರಲ್ಲಿ ಅರಿವನ್ನುಂಟುಮಾಡಿ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರೇರೇಪಿಸುವಂತಹ ಸಾಮರ್ಥ್ಯವನ್ನು, ವ್ಯಾಪ್ತಿಯನ್ನು ಪಡೆದುಕೊಂಡರೆ ಮಾತ್ರ ಇವುಗಳ ಪರಿಶ್ರಮ ಸಾರ್ಥಕವಾಗುತ್ತದೆ. ಈ ದಿಸೆಯಲ್ಲಿ ಚಿಂತನೆ ಮಾಡುವ ಅಗತ್ಯವಿದೆ. ಕರ್ನಾಟಕ ಲೇಖಕಿಯರ ಸಂಘ ಹೊರತರುತ್ತಿರುವ 'ಲೇಖಕಿ' ಮಹಿಳೆಯರ ಸಾಹಿತ್ಯ ಕೃಷಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತ ಬರುತ್ತಿದೆ. ಲೇಖಕಿಯರ ಕೃತಿ ಪರಿಚಯ ಮಾಡುವುದರೊಂದಿಗೆ, ಆಗಾಗ್ಗೆ ಲೇಖಕಿಯರಿಗಾಗಿ ಕಮ್ಮಟಗಳನ್ನು ಏರ್ಪಡಿಸುತ್ತಿದೆ. ಹಿರಿಯ ಲೇಖಕಿಯರ ಕೃತಿಗಳ ಪ್ರಕಟನೆಯ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಸುಮಾರು ಐದು ದಶಕಗಳಿಂದ ಆಕಾಶವಾಣಿಯು ಪ್ರಭಾವಯುತ ಸಮೂಹ ಮಾಧ್ಯಮವಾಗಿ ಕೆಲಸ ಮಾಡುತ್ತ ಬಂದಿದೆ. ಶ್ರವ್ಯ ಮಾಧ್ಯಮವಾದ್ದರಿಂದ ಇದು ಅನಕ್ಷರಸ್ಥರನ್ನು ತಲುಪುತ್ತಿದೆ. ನಗರ, ಗ್ರಾಮಾಂತರ ಎಲ್ಲ ಪ್ರದೇಶದ, ಎಲ್ಲ ಬಗೆಯ ಶ್ರೋತೃ ಬಳಗವನ್ನು ಹೊಂದಿರುವ ಆಕಾಶವಾಣಿಯು ಮಹಿಳೆಯರಿಗಾಗಿ ಪ್ರತ್ಯೇಕವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಬೇರೆ ಬೇರೆ ಕೇಂದ್ರಗಳು ಬೇರೆ ಬೇರೆ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತವೆ. ಮಹಿಳಾರಂಗ, ವನಿತಾ ವಿಹಾರ, ಗೃಹಲಕ್ಷ್ಮಿ, ಮಾವು ಮಲ್ಲಿಗೆ ಇತ್ಯಾದಿ ಗ್ರಾಮೀಣ ಮಹಿಳೆಯರಿಗೆ, ಉದ್ಯೋಗಸ್ಥ ಮಹಿಳೆಯರಿಗೆ, ಮನೆಯಲ್ಲಿರುವ ಮಹಿಳೆಯರಿಗೆ ಎಂದು ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ ಅಡಿಗೆ-ಸಂಪ್ರದಾಯದ ಹಾಡುಗಳೂ ಇರುತ್ತವೆ; ಮಹಿಳೆಯರಿಗೆ ಉಪಯುಕ್ತವಾಗುವಂತಹ ಕಾರ್ಯಕ್ರಮಗಳೂ ಇರುತ್ತವೆ. ಮನೆಯಲ್ಲಿರುವ ಮಹಿಳೆಯರು ಆರ್ಥಿಕ ಸ್ವಾವಲಂಬಿಯಾಗಲು ಏನೇನು ಕೆಲಸಗಳನ್ನು ಮಾಡಬಹುದು, ಸರಕಾರದಿಂದ ಯಾವ ಸವಲತ್ತು ಸಿಗುತ್ತದೆ ಎನ್ನುವ ಮಾಹಿತಿಯನ್ನು ನೀಡುವುದು, ಚಿಕ್ಕ ಸಂಸಾರದ ಅನುಕೂಲತೆ, ಮಹಿಳೆಯರ ಆರೋಗ್ಯದ ಬಗೆಗೆ ಮಾಹಿತಿ ಮುಂತಾದವು, ರೂಪಕಗಳು, ನಾಟಕಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಮಹಿಳೆಯರಲ್ಲಿ ಸ್ವಂತಿಕೆಯ ಅರಿವನ್ನುಂಟುಮಾಡಲು ಶ್ರಮಿಸುತ್ತಿದೆ. ಮಹಿಳೆಯರ ಸಾಹಿತ್ಯದ ಪರಿಚಯ, ಪರಿಚರ್ಚೆ ಮುಂತಾದ ಕಾರ್ಯಕ್ರಮಗಳು ಇದಕ್ಕೆ ಪೂರಕವಾಗಿರುತ್ತವೆ. ಮೈಸೂರು ಆಕಾಶವಾಣಿ ಪ್ರಸಾರ ಮಾಡಿರುವ ಅಕ್ಕಮಹಾದೇವಿಯಿಂದ ಪ್ರಾರಂಭಿಸಿ ಆಧುನಿಕ ಲೇಖಕಿಯರೂ ಸೇರಿದಂತೆ ಮಹಿಳೆಯ ಸಾಹಿತ್ಯಿಕ ಪರಿಚಯ, 'ಆಧುನಿಕ ಕವಿಗಳು ಕಂಡ ಪೌರಾಣಿಕ ನಾಯಕಿಯರು' ಎನಂತಹ ವಿಶ್ಲೇಷಣಾತ್ಮಕ ವಿಷಯಗಳ ಭಾಷಣ, 'ಮಹಿಳೆಯರಿಗೆ ಸಮಾನತೆಯನ್ನು ಕಾನೂನು ಕೊಡಬಲ್ಲುದೆ' ಎಂಬಂತಹ ಚರ್ಚೆಗಳು ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಲು ಸಹಾಯಕವಾಗುವಂಥ ಕಾರ್ಯಕ್ರಮಗಳು. ಸರಕಾರೀ ಒಡೆತನದಲ್ಲಿರುವ ಈ ಮಾಧ್ಯಮ ಆಳುವವರ ಮರ್ಜಿಯನ್ನವಲಂಬಿಸಿ ನಡೆಯಬೇಕಾಗುತ್ತದೆ. ಆದಾಗ್ಯೂ, ಆಯಾ ಕೇಂದ್ರ ನಿರ್ದೇಶಕರ ಸಾಮರ್ಥ್ಯ ಧೋರಣೆಗಳು ಈ ಮಿತಿಯಲ್ಲಿಯೂ ಕೆಲಸ ಮಾಡುತ್ತವೆ.

ಸುಮಾರು ಅರ್ಧ ಶತಮಾನದಿಂದ ಚಿತ್ರರಂಗ ಸಮಾಜದ ಮೇಲೆ ತನ್ನ ಪರಿಣಾಮ ಬೀರುತ್ತ ಬಂದಿದೆ. ಪ್ರಾರಂಭದಲ್ಲಿ ಇತಿಹಾಸದಲ್ಲಿ ಪ್ರಸಿದ್ಧರಾದ ಕಿತ್ತೂರು ಚೆನ್ನಮ್ಮ, ಝಾನ್ಸಿ ಲಕ್ಷ್ಮಿಬಾಯಿ, ಸಕ್ಕೂಬಾಯಿ, ಭಕ್ತ ಮೀರಾಬಾಯಿ, ಅಕ್ಕಮಹಾದೇವಿ ಮುಂತಾದವರನ್ನು ಕುರಿತ ಚಿತ್ರಗಳು ಬಂದವು. ಮುಂದಿನ ಹಂತದಲ್ಲಿ ಸಾಮಾಜಿಕ ಚಿತ್ರಗಳು ಪ್ರಧಾನವಾದವು. ಮಹಿಳೆ ಅಬಲೆ, ಪರಾವಲಂಬಿ ಶೀಲ, ಪಾತಿವ್ರತ್ಯಗಳೇ ಆಕೆಗೆ ಆಭರಣ ಎನ್ನುವಂತಹ ಚಿತ್ರಗಳೇ ಅಧಿಕವಾಗಿ ತಯಾರಾದವು. ಗೃಹಲಕ್ಷ್ಮಿ, ಅರಿಶಿನ ಕುಂಕುಮ ಮುಂತಾದ ಚಿತ್ರಗಳಲ್ಲಿ ಆಕೆಯ ತ್ಯಾಗ, ಸಹನೆಯ ಮೇಲೆ ಒತ್ತು ಬಿತ್ತು. ಇವುಗಳ ಜೊತೆ ಜೊತೆಗೇ ಕಾದಂಬರಿ ಆಧರಿತ ಚಿತ್ರಗಳ ಮಹಾಪೂರವೇ ಬಂತು. ಪ್ರಗತಿಶೀಲರ ಕಾದಂಬರಿಗಳಾದ ಚಂದನದ ಗೊಂಬೆ, ಬೆಂಕಿಯ ಬಲೆ, ಗಾಳಿ ಮಾತು, ಕರುಣೆಯೇ ಕುಟುಂಬದ ಕಣ್ಣು, ಭಾಗೀರಥಿ ಮುಂತಾದವು. ಗೆಜ್ಜೆಪೂಜೆ, ಮಿಥಿಲೆಯ ಸೀತೆಯರು ಕೂಡ ಇದೇ ಧೋರಣೆಯನ್ನುಳ್ಳವು. ಇವುಗಳಲ್ಲಿ ಅನ್ಯಾಯ ನೋವಿನ ಬಗ್ಗೆ

ಅನುಕಂಪವಿದೆ. ಈ ನಾಯಕಿಯರಿಗೆ ತಮಗಾದ ಅನ್ಯಾಯದ ಬಗ್ಗೆ ಅರಿವೂ ಇದೆ. ಆದರೆ ಪ್ರತಿಭಟಿಸುವ ಸಾಮರ್ಥ್ಯವಿಲ್ಲ. ಹಾಗಾಗಿ ಬದುಕನ್ನು ಅಂತ್ಯಗೊಳಿಸುವುದೇ ಪರಿಹಾರವಾಗಿದೆ. ಸಮಾಜದಿಂದ ಅನ್ಯಾಯಕ್ಕೊಳಗಾದಾಗ, ಅವಮಾನಿತಳಾದಾಗ ಆತ್ಮಹತ್ಯೆಯೊಂದೇ ಮಹಿಳೆಗುಳಿದಿರುವ ದಾರಿ ಎಂದು ಇಂಥ ಚಿತ್ರಗಳು ಪರಿಹಾರವನ್ನು ಸೂಚಿಸುತ್ತವೆ. ಧೈರ್ಯದಿಂದ, ಆತ್ಮಾಭಿಮಾನದಿಂದ ಬದುಕನ್ನು ಎದುರಿಸುವ ಕೆಚ್ಚು ಈ ನಾಯಕಿಯರಲ್ಲಿಲ್ಲ. ಬದಲಾವಣೆಯನ್ನು ಸ್ವಾಗತಿಸುವಂತಹ ಫಣಿಯಮ್ಮ, ಹೊಸ ನೀರು, ಬಂಧನ, ಉಷಾದಂತಹ ಕೆಲವೇ ಚಿತ್ರಗಳು ಬಂದವು. ಗಂಡನ ಕಿರುಕುಳ ಅತಿಯಾದಾಗ, ಆತನನ್ನು ಬಿಟ್ಟುಬಂದು ಬದುಕುತ್ತೇನೆಂಬ ಆತ್ಮವಿಶ್ವಾಸ ಬಂಧನದ ನಾಯಕಿಯದು. ಫಣಿಯಮ್ಮ ಮತ್ತು ಉಷಾ ಮರು ಮದುವೆಯನ್ನು ಸ್ವಾಗತಿಸಿದವು. ಎಂಬತ್ತರ ದಶಕದಿಂದ ಚಿತ್ರರಂಗ ಮಹಿಳೆಯನ್ನು ಒಂದು ಸರಕಾಗಿ ಕಾಣುತ್ತಿದೆ. ಈ ರಂಗದಲ್ಲಿ ದುಡಿಯುತ್ತಿರುವ ಮಹಿಳೆಯರು ಈ ಬಗ್ಗೆ ತುಟಿಪಿಟಕ್ಕೆನ್ನದೆ ತಮ್ಮ ಸೌಂದರ್ಯ ಪ್ರದರ್ಶನಕ್ಕೆ ಇದೊಂದು ಸದಾವಕಾಶವೆಂದು ತಿಳಿದು 'ಗ್ಲಾಮರ್'ಗೆ ಆಕರ್ಷಿತರಾಗುತ್ತಿದ್ದಾರೆ. ಇತ್ತೀಚೆಗೆ ನಾಯಕಿ ಪ್ರಧಾನ ಚಿತ್ರಗಳೂ ಕಡಿಮೆಯಾಗುತ್ತಿದೆ. ಆಕೆ ನಾಯಕನ ಮೆರೆತಕ್ಕೆ ಪೂರಕಳು ಮಾತ್ರ. ಓಂದಿ ಚಿತ್ರ ಆಶಿಕಿ ನಂತರ ಖಯಾಮತ್‌ಸೆ ಖಯಾಮತ್‌ತಕ್, ಲವ್‌ಸ್ಟೋರಿ, ಪ್ರೇಮಪರ್ವ ಮುಂತಾದ ಅಪ್ರಾಪ್ತ ವಯಸ್ಸಿನ ಪ್ರೇಮಕತೆಗಳನ್ನಾಧರಿಸಿದ ಚಿತ್ರಗಳು ಕೆಲವು ಬಂದವು. ಇಂಥವು ಹದಿಹರಯದವರನ್ನು ಆಕರ್ಷಿಸುವ, ದಾರಿತಪ್ಪಿಸುವ ಕೆಲಸವನ್ನಷ್ಟೆ ಮಾಡುತ್ತವೆ. ನಿಜ ಜೀವನದಲ್ಲಿ ಅಪ್ರಾಪ್ತ ವಯಸ್ಸಿನ ಮದುವೆ ಕಾನೂನುಬಾಹಿರವಾಗಿರುವಾಗ ಇಂತಹ ಪ್ರೀತಿಯನ್ನು ತೆರೆಯ ಮೇಲೆ ತೋರಿಸುವುದನ್ನು ನೋಡಿದರೆ ಈ ಮಾಧ್ಯಮ ವಾಸ್ತವತೆಯಿಂದ ಎಷ್ಟು ದೂರದಲ್ಲಿದೆ ಎನ್ನುವುದರ ಅರಿವಾಗುತ್ತದೆ. ಹೆಂಡ್ತಿಗ್ಹೇಳಬೇಡಿ, ಸುಖ ಸಂಸಾರಕ್ಕೆ ಹನ್ನೆರಡು ಸೂತ್ರಗಳು, ಹೆಂಡ್ತಿರೇ ಹುಷಾರ್‌ನಂತಹ ಚಿತ್ರಗಳು ಹೆಣ್ಣನ್ನು ಗಯ್ಯಾಳಿಯಾಗಿ ಮಾತ್ರ ಚಿತ್ರಿಸುತ್ತಾ, ಕೌಟುಂಬಿಕ ಬದುಕನ್ನು ಗಂಭೀರವಾಗಿ ಪರಿಗಣಿಸದೆ ಲೇವಡಿ ಮಾಡುವಂಥವು. ಉತ್ಕರ್ಷ, ಬ್ಯಾಂಡಿಟ್ ಕ್ವೀನ್ ಮುಂತಾದ ಚಿತ್ರಗಳು ವಾಸ್ತವತೆಯ ಹೆಸರಿನಲ್ಲಿ ಕಲೆಯನ್ನು ಕೊಲೆ ಮಾಡುತ್ತಿವೆ. 'ಚೋಲಿ ಕೆ ಪೀಛೆ ಕ್ಯಾ ಹೈ' ಎನ್ನುವ ಹಾಡು ಬಿಡುಗಡೆಯಾದ ಕೆಲವು ಸಭ್ಯರು ಅದನ್ನು ವಿರೋಧಿಸಿದರು, ನ್ಯಾಯಾಲಯದ ಕಟ್ಟೆಯನ್ನೂ ಹತ್ತಿದರು. ಈಗ ಚಿತ್ರರಂಗ ಹೆಚ್ಚಾಗಿ ಇಂಥ ಹಾಡುಗಳಿಂದ ತುಂಬಿದೆ. ಅತ್ಯಾಚಾರ, ಅಶ್ಲೀಲ ದೃಶ್ಯ, ಅಂಗಾಂಗ ಪ್ರದರ್ಶನದ ತುಣುಕುಗಳು, ಜೊತೆಗೆ ಒಂದಿಷ್ಟು ಹಾಡು, ಕುಣಿತ ಸೇರಿದರೆ ಒಂದು ಚಿತ್ರ ತಯಾರಾದಂತೆ. ಇಂತಹ ಚಿತ್ರಗಳು ಸಮಾಜದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿವೆ. ಆಟೋ ಶಂಕರನ ಪ್ರಕರಣವನ್ನು ಇದಕ್ಕೆ ಉದಾಹರಣೆಯಾಗಿ ಗಮನಿಸಬಹುದು.

ಇತ್ತೀಚಿನ ವರ್ಷಗಳಲ್ಲಿ ಎಲೆಕ್ಟ್ರಾನಿಕ್ಸ್ ಮಾಧ್ಯಮವಾದ ದೂರದರ್ಶನ ಬಹಳ ಶಕ್ತಿಯುತ ಮಾಧ್ಯಮವಾಗಿ ಕೆಲಸ ಮಾಡುತ್ತಿದೆ. ಮನೆಯಲ್ಲಿಯೇ ಕುಳಿತು ನೋಡಬಹುದಾದ್ದರಿಂದ ಇದು ಹೆಚ್ಚು ಜನರನ್ನು ತಲುಪುತ್ತಿದೆ. ದೂರದರ್ಶನ ದೃಶ್ಯ ಮಾಧ್ಯಮವಾದ ಚಿತ್ರರಂಗದ ಸಿದ್ಧ ಚೌಕಟ್ಟನ್ನು ಇಡಿಯಾಗಿ ಸ್ವೀಕರಿಸಿ, ಚಿತ್ರರಂಗಕ್ಕೆ ಪರ್ಯಾಯವಾಗಿ ಕೆಲಸ ಮಾಡುತ್ತಿದೆ. ಮನೋರಂಜನೆಯ ಹೆಸರಿನಲ್ಲಿ ಚಲನಚಿತ್ರಗಳಿಗೆ, ಚಿತ್ರಗೀತೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಧಾರವಾಹಿಗಳನ್ನು ಪ್ರಸಾರ ಮಾಡುತ್ತಿದ್ದರೂ ಶೇಕಡ 90 ಭಾಗ ಇವು ಮಹಿಳೆಯನ್ನು ನೇತ್ಯಾತ್ಮಕವಾಗಿಯೇ ಚಿತ್ರಿಸುತ್ತಿವೆ.

ದೆಹಲಿಯಿಂದ ಪ್ರಸಾರವಾಗುತ್ತಿದ್ದ ಉಡಾನ್, ಭಾರತಿ ಮತ್ತು ಈಗ ಪ್ರಸಾರವಾಗುತ್ತಿರುವ ಝೂನ್ಸಿ ಕಿ ರಾಣಿ - ಇವೆಲ್ಲ ಮಹಿಳೆಯ ಸಾಮರ್ಥ್ಯ-ಸಾಧನೆಗಳಿಗೆ ಕನ್ನಡಿ ಹಿಡಿದರೆ, ಸಂಘರ್ಷ, ತೋಡಾಸಾ ಆಸ್ಮಾನ್, ಗೆಲುವಿನ ಹೆಜ್ಜೆಯಂತಹ ಧಾರವಾಹಿಗಳು ಮಹಿಳೆಯರು ತಮಗಾದ ಅನ್ಯಾಯದ ವಿರುದ್ಧ ಹೋರಾಡಿ ಜಯಶೀಲರಾದ ಕತೆಯನ್ನು ಹೇಳುತ್ತವೆ; ಆ ದಾರಿ ಎಷ್ಟು ದುರ್ಗಮವಾದುದು ಎನ್ನುವುದನ್ನೂ ತೋರಿಸುತ್ತದೆ. ಇಂಥವು ಅಪರೂಪಕ್ಕೊಮ್ಮೆ ಪ್ರಸಾರವಾಗುತ್ತವೆ. ಮಹಿಳೆಯರನ್ನು, ಅಹಂಕಾರಿ, ಸ್ವಾರ್ಥಿಯಾಗಿ ತೋರಿಸುವ 'ದೇವಿ' ತಿಧವಾ ವಿಧವಾ ವಿವಾಹ ಅಪಾಯಕಾರಿ ಎಂದು ಸಾರುವ ಆಫೀಸಾಯಣದಂತಹ ಧಾರವಾಹಿಗಳೇ ಅಧಿಕ. ಶಾಂತಿ ಮತ್ತು ಸ್ವಾಭಿಮಾನ್ ಈಗ ಜನಪ್ರಿಯವಾಗಿರುವ ಧಾರವಾಹಿಗಳು. ಶ್ರೀಮಂತ ವರ್ಗದ ಮಹಿಳೆಯರು ಮತ್ತು ಪುರುಷರು ತಮ್ಮ ಅಧಿಕಾರ ಲಾಲಸೆಗಾಗಿ ನಡೆಸುವ ಅವ್ಯವಹಾರ, ಅನೈತಿಕತೆಯನ್ನು ಇವು ವೈಭವೀಕರಿಸುತ್ತಿವೆ. ಅಧಿಕಾರ ಉಳಿಸಿಕೊಳ್ಳೋದೆ ಸ್ವಾಭಿಮಾನ. ಈ ಧಾರವಾಹಿಗಳು ವಿವಾಹಬಾಹಿರ ಸಂಬಂಧಗಳನ್ನು ಉದಾತ್ತೀಕರಿಸುವುದರಿಂದ ಮನೆಯಲ್ಲಿರುವ ಮಧ್ಯಮ ವರ್ಗದ ಮಹಿಳೆಯರ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಸ್ವಾಭಿಮಾನ್‌ದ ಮಲ್ಹೋತ್ರ ಕುಟುಂಬದ ವ್ಯಕ್ತಿಗಳ ವಿವಾಹಬಾಹಿರ ಸಂಬಂಧಗಳನ್ನು ಉದಾಹರಿಸಬಹುದು. ತಾಯಿಗಾದ ಅನ್ಯಾಯಕ್ಕಾಗಿ ಉಗ್ರ ಪ್ರತಿಭಟನೆ ತೋರುತ್ತಿದ್ದ ಶಾಂತಿಯ ನಾಯಕಿ, ಆಸ್ತಿ, ಅಂತಸ್ತುಗಳು ದೊರಕುತ್ತಿದ್ದಂತೆ ತಣ್ಣಗಾಗುತ್ತಾಳೆ. ಕೆಲಮಟ್ಟಿನ ಕಾಳಜಿಯಿಂದ ಮಹಿಳೆಯರ ಅಭಿವೃದ್ಧಿಯನ್ನು ಉದ್ದೇಶಿಸಿ ಕೆಲಸ ಮಾಡುತ್ತಿದ್ದ ಆಕಾಶವಾಣಿಯ ಶ್ರೋತೃಗಳನ್ನು ತನ್ನತ್ತ ಸೆಳೆದುಕೊಂಡಿರುವ ದೂರದರ್ಶನ

ಪ್ರತಿಕೂಲ ಪರಿಣಾಮ ಬೀರುವ ಕಾರ್ಯಕ್ರಮಗಳ ಪ್ರಸಾರಕ್ಕೇ ಹೆಚ್ಚಿನ ಸಮಯವನ್ನು ವಿನಿಯೋಗಿಸುವಂತೆ ತೋರುತ್ತದೆ. ಇದಕ್ಕೆ ಅನ್ಯ ಚಾನೆಲ್‌ಗಳ ಹಾವಳಿಯೂ ಕಾರಣವಾಗಿದೆ.

ಇನ್ನು ಜಾಹಿರಾತುಗಳೋ, ತಮ್ಮ ಸರಕಿಗೆ ಮಾರುಕಟ್ಟೆಯನ್ನು ಹುಡುಕಿಕೊಳ್ಳುವುದೇ ಇವುಗಳ ಉದ್ದೇಶ. ಹಾಗಾಗಿ, ಅವು ತಮ್ಮ ಸರಕಿನ ಹೆಗ್ಗಳಿಕೆಯನ್ನು ಅತಿಯಾಗಿ ಹೇಳಿಕೊಳ್ಳುತ್ತವೆ. ಈ ಜಾಹಿರಾತುಗಳು ಪತ್ರಿಕೆಗಳಲ್ಲಿರಲಿ, ಆಕಾಶವಾಣಿ ಅಥವಾ ದೂರದರ್ಶನದಲ್ಲಿ ಪ್ರಸಾರವಾಗಲಿ, ಮಹಿಳೆಯನ್ನು ಕೆಲವೇ ಕೆಲಸಗಳಿಗೆ ಸೀಮಿತಗೊಳಿಸುತ್ತವೆ. ಸೋಪು, ಶಾಂಪೂಗಳನ್ನು ಮಹಿಳೆಯರು ಮಾತ್ರ ಬಳಸುತ್ತಾರೆಯೇ? ಪುರುಷರಿಗೆ ಸ್ವಚ್ಛತೆಯ ಅವಶ್ಯಕತೆ ಇಲ್ಲವೇ? ಯಾವುದೇ ಸೋಪು ಅಥವಾ ಸೋಪಿನ ಪುಡಿಯ ಜಾಹಿರಾತಿರಲಿ, ಬಟ್ಟೆ ಒಗೆಯುವುದು ಮಹಿಳೆಯೇ. ರಸನಾ, ಕಾಫಿ, ಟೀ, ಹಾರ್ಲಿಕ್ಸ್ ಮುಂತಾದ ಪಾನೀಯಗಳ ಜಾಹಿರಾತಿನಲ್ಲಂತೂ ಮಹಿಳೆಯೇ ಅವುಗಳನ್ನು ಬಳಸುವುದು. ವಾಶಿಂಗ್ ಮಿಶನ್ ಕೂಡ ಇದಕ್ಕೆ ಹೊರತಲ್ಲ. ಅಂದರೆ, ಲಾಗಾಯ್ತಿನಿಂದಲೂ ಅವೇ ಕೆಲಸವನ್ನು ನಿರ್ವಹಿಸುತ್ತ ಬಂದ ಮಹಿಳೆಯೇ ಇಂದೂ ಆ ಎಲ್ಲ ಕೆಲಸಗಳ ಹೊಣೆಯನ್ನು ಹೊರಬೇಕೆಂದು ಇವು ಬಯಸುತ್ತವೆ. ಕಾರ್‌ನ ಡ್ರೈವಿಂಗ್, ಸ್ಕೂಟರ್ ಸವಾರಿಯಂತಹ 'ಸಾಹಸ'ದ ಕೆಲಸಗಳು ಪುರುಷನಿಗೆ ಮೀಸಲು. ಇಪ್ಪತ್ತೊಂದನೆಯ ಶತಮಾನದ ತಂತ್ರಯುಗಕ್ಕೆ ಕಾಲಿಡುತ್ತಿರುವ, ಮಿಲಿಟರಿಯಲ್ಲಿ ಹಾಗೂ ವಿಮಾನ ಚಾಲಕಿಯಾಗಿ ಮಹಿಳೆಯರು ಕಾರ್ಯ ನಿರ್ವಹಿಸುತ್ತಿರುವ ಈ ಸನ್ನಿವೇಶದಲ್ಲಿಯೂ ಮಾಧ್ಯಮಗಳು ಮಹಿಳೆಯನ್ನು ಹೀಗೆ ಚಿತ್ರಿಸುತ್ತಿರುವುದು ಆತಂಕಕಾರಿಯಾದ ವಿಷಯ. (ಚಲನಚಿತ್ರ ಜಾಹಿರಾತುಗಳಂತೂ ಇದಕ್ಕಿಂತ ಅಧ್ವಾನವಾಗಿರುತ್ತವೆ. ಚಿತ್ರದಲ್ಲಿರುವ ಯಾವುದೋ ಅಸಭ್ಯ ದೃಶ್ಯವನ್ನು ಪೋಸ್ಟರುಗಳಲ್ಲಿ ತೋರಿಸಿ ಪ್ರೇಕ್ಷಕರನ್ನು ಸೆಳೆಯಲು ಹವಣಿಸುತ್ತವೆ). ಸರಕಾರ ಪ್ರಸಾರ ಮಾಡುತ್ತಿರುವ ಸಾಕ್ಷರತಾ ಕಾರ್ಯಕ್ರಮಗಳಲ್ಲಿ, ಹೆಣ್ಣು ಮಗು ಕೀಳಲ್ಲ ಎಂದು ಘೋಷಿಸುವ ಸರಕಾರೀ ಜಾಹಿರಾತುಗಳಲ್ಲಿ ಮಹಿಳೆ ಇದಕ್ಕಿಂತ ಭಿನ್ನಳಾಗಿ ಕಾಣಿಸಿಕೊಳ್ಳುತ್ತಾಳೆ. ಆಕೆ ಎಲ್ಲ ಕಾರ್ಯವನ್ನೂ ನಿರ್ವಹಿಸಬಲ್ಲಳೆನ್ನುವಂತೆ ಚಿತ್ರಿತಳಾಗುತ್ತಾಳೆ.

ಮಾಧ್ಯಮಗಳು ಮಹಿಳೆಯರ ಬಗೆಗೆ ಗೌರವಾದರಗಳನ್ನು ತೋರುತ್ತ, ಲಿಂಗಾಧರಿತ ಅಸಮಾನತೆಯ ನಿವಾರಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿವೆ. ಸರಕಾರೀ ಒಡೆತನದಲ್ಲಿರುವ ಮಾಧ್ಯಮಗಳು ಅಲ್ಲಿಂದ ಬಿಡುಗಡೆ ಪಡೆದು ಸಾಮಾಜಿಕ ಸಮತೋಲನಕ್ಕೆ ಅನುವಾಗುವಂತಹ ಕಾರ್ಯಕ್ರಮಗಳನ್ನು ನಿರ್ವಹಿಸುವ ಹೊಣೆ ಅವುಗಳ ಮೇಲಿದೆ. ಬಂಡವಾಳಶಾಹಿಗಳ ಹಿಡಿತದಲ್ಲಿ ಸಿಕ್ಕು ನರಳುತ್ತಿರುವ ಮಾಧ್ಯಮಗಳಿಗೂ ಈ ಮಾತು ಅನ್ವಯಿಸುತ್ತದೆ.

●

ಸಮಾಜ

ಛಲಭೈರವನೆದುರು
ಸೋಲೆಂಬ ಪದವಿಲ್ಲ
ಕೊನೆಗೂ ಕಾಲನು, ತನ್ನ ಗೆಲುವ
ಬಿಡಲಿಲ್ಲ.

ತಿಳಿದೋ ತಿಳಿದೆಯೋ
ಮಾಡಿದನವಳ ಶೀಲಭಂಗ,
ಅಶೀಲವಂತೆ! ಅಶೀಲವಂತೆಯೇ?
ಎಂದು ನಿಂದಿಸುವುದು ಅವಳನ್ನ.

ಸಮಾಜದ ದೃಷ್ಟಿಗೇಕೆ ಗಂಡು ಬೀಳಲಿಲ್ಲ?
ಅವನಿಗಿಲ್ಲವೇ ಈ ಶಾಪ?
ತನ್ನ ಸಹೋದರಿಗಾದರೇ ಈ ತಾಪ
ಸಹಿಸುವನೇ ಆ ಪರಿತಾಪ!

ತನ್ನಂತೆಯೇ ಇರುವ ಈ ಮುಗ್ದೆಗೆ
ಬಾಳು ಕೊಡಲಿಲ್ಲ ಕ್ರೂರಿ ಏತಕೆ
ತಾನಂದ ಶೀಲವಂತ
ಅನುವಾದ ವಿವಾಹಕ್ಕಂತ

ತಾನೆಂದ ಪರಿಶುದ್ಧ
ತನೆಗೆಂದು ತಪ್ಪಿಲ್ಲ
ತನ್ನದೊಂದೆ ನೀತಿ,
ಅವಳದ್ದೊಂದೇ ನೀತಿ
ತೋರಿದ್ದ ಜಗಕೆ ಈ ರೀತಿ
ಬಾಳಿ ಕೊಡಲೊಪ್ಪವ ನಲ್ಲ.

ಪದ್ಮ ಟಿ.

ಸೌಂದರ್ಯ ಸ್ಪರ್ಧೆಯ ನಂತರ

ಸೌಂದರ್ಯ ಸ್ಪರ್ಧೆ ಮುಗಿಯಿತು. ಬರ್ಮನ್ ಸಾಹೇಬರು, ಪಟೇಲ್ ಸಾಹೇಬರು ಪಣ ತೊಟ್ಟು ಟೊಂಕಕಟ್ಟಿ ಯಾವುದಕ್ಕೂ ಅಂಜದೆ, ಅಳುಕದೆ ಸ್ಪರ್ಧೆಯನ್ನು ನಡೆಸಿಕೊಟ್ಟು ವೀರರಾಗಿದ್ದಾರೆ. ಇಬ್ಬರಿಗೂ ಈ ಬಾರಿಯ ಶೌರ್ಯ ಪ್ರಶಸ್ತಿ ಸಿಗಲಿ!

ಭದ್ರತಾ ವೆಚ್ಚ ಒಟ್ಟು 2.05 ಕೋಟಿಯನ್ನು ABCL ನವರಿಂದ ವಸೂಲಿ ಮಾಡಲು, ಬರ್ಮನ್ ಸಾಹೇಬರು ತಿಣುಕ ಬೇಕಾಯಿತು. ನಂ. 23ರ ಕಾರೋನೇಶನ್ ಮಧ್ಯಾನದವರೆಗೆ ABCLನವರು ಹಣ ಪಾವತಿಸಿರಲಿಲ್ಲ. ಇನ್ನು ABCLನಿಂದ ನಾಮ ಹಾಕಿಸಿಕೊಳ್ಳುವುದು ಖಚಿತವೆನಿಸಿ ಇಡೀ ABCL ಸಿಬ್ಬಂದಿ ಹಾಗು ಇತರೆ ಸೌಂದರ್ಯ ಸ್ಪರ್ಧೆಗೆ ಕೆಲಸ ಮಾಡುತ್ತಿದ್ದವರನ್ನು ತೆಗೆದು ಹೊರ ಹಾಕಲಾಗುವುದೆಂದು ಆಜ್ಞಾಪಿಸಿದರು.

"ಅವರನ್ನು ಎಲ್ಲಿವರೆಗೆ ಸಾಧ್ಯವೋ ಅಲ್ಲಿವರೆಗೆ ಸಹಿಸಿಕೊಂಡೆ ಪ್ರಾಯೋಜಕರಿಂದ ಇನ್ನು ಹಣ ಸಿಗದಿರುವುದರಿಂದ, ಹಣ ಪಾವತಿಸಲು ಹೆಚ್ಚಿನ ಕಾಲಾವಕಾಶ ಬೇಕೆಂದು ಹೇಳಿದರು. ಇನ್ನು ಕಾಯಲು ಸಾಧ್ಯವೇ ಇರಲಿಲ್ಲ, ಸರ್ಕಾರಕ್ಕೆ ಉತ್ತರ ಹೇಳಬೇಕಿತ್ತು. ಅಭಿಮನ್ಯುವಿನ ತರಹ ಚಕ್ರವ್ಯೂಹದಲ್ಲಿ ಸಿಕ್ಕಿಕೊಳ್ಳುವ ಆಸೆ ನನಗಿಲ್ಲ" ಎಂದು ತಮ್ಮ ನಿಲುವನ್ನು ಬರ್ಮನ್ ಸಾಹೇಬರು ಸಮರ್ಥಿಸಿಕೊಂಡರು.

ನನ್ನ ಕಠಿಣ ನಿಲುವು ತಿಳಿದ ಮೇಲೆ, ಬೆಂಗಳೂರಿನಲ್ಲಿದ್ದ ಮುಂಬೈ ಕೆನರಾ ಬ್ಯಾಂಕಿನ ಉನ್ನತ ಅಧಿಕಾರಿಯೊಬ್ಬರನ್ನು ಹೇಗೊ ಒಪ್ಪಿಸಿ ಚೆಕ್ ಅನ್ನು ದೃಢೀಕರಿಸಿಕೊಂಡು ನನಗೆ ನೀಡಿದರು. ಅಲ್ಲಿಗೂ ಅವರನ್ನು ನಂಬದೆ ಮುಂಬೈನ ಕೆನರಾ ಬ್ಯಾಂಕಿಗೆ ಫೋನಿಸಿ, ಅಕೌಂಟ್‌ನಲ್ಲಿ ಹಣ ಇರುವುದನ್ನು ದೃಢಪಡಿಸಿಕೊಂಡು ಆ ಚೆಕ್ ಅನ್ನು RBIಗೆ ಕಟ್ಟಲಾಯಿತು. ಮಾತು ಕೊಟ್ಟಂತೆ ಹಣ ನೀಡಬೇಕಾದ ಕನಿಷ್ಠ ಪ್ರಮಾಣಿಕತೆಯೂ ಇಲ್ಲದ ಕಂಪೆನಿಯೊಂದಕ್ಕೆ ಪಾಪ! ಬರ್ಮನ್ ಸಾಹೇಬರು ಎಷ್ಟೆಲ್ಲಾ ಬೆವರು ಸುರಿಸಿದರು! ಅವರ ಪಡೆಯವರು ಊಟವೂ ಸಿಗದೆ ಸುಂದರಿಯರನ್ನು, ದಳ್ಳಾಳಿಗಳನ್ನು ಕಾದರು. ಊಟಕ್ಕೂ ತೊಂದರೆಯಾದ ಪೋಲೀಸ್ ಪೇದೆಯೊಬ್ಬನು 'ಸೌಂದರ್ಯ ಸ್ಪರ್ಧೆ ಹೆಸರೆತ್ತಬೇಡಿ ಸಾರ್' ಎಂದರಂತೆ. ಸರಿಯಾದ ವಸತಿ ವ್ಯವಸ್ಥೆ, ನೀರೂ ಇಲ್ಲದೆ, ಚಳಿ, ಹಸಿವಿನಲ್ಲಿ ಪೋಲೀಸ್ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿದೆವೆಂದು ಗೋಳಾಡಿಕೊಂಡಿದ್ದಾರೆ. ತಮ್ಮ ವಿಜಯೋತ್ಸಾಹವನ್ನು ಪುಸ್ತಕ ರೂಪದಲ್ಲಿ ದಾಖಲಿಸ ಹೊರಟಿರುವ ಬರ್ಮನ್ ಸಾಹೇಬರು ಪೇದೆಗಳ ಕಷ್ಟವನ್ನು ವಿವರವಾಗಿ ದಾಖಲಿಸಬಹುದೇನೋ?

ಸೌಂದರ್ಯ ಸ್ಪರ್ಧೆಯಿಂದ ಪ್ರವಾಸೋದ್ಯಮಕ್ಕೆ ಹಣದ ಹೊಳೆ ಹರಿದು ಬರುವುದೆಂದು ಹೇಳಿದ್ದ ನಮ್ಮ ಪ್ರವಾಸೋದ್ಯಮ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು ಸ್ಪರ್ಧೆ ಮುಗಿದ ಮೇಲೆ ತಮ್ಮ ಕನಸು ಚೂರಾಗಿದ್ದನ್ನು ದುಃಖದಿಂದ ಪತ್ರಿಕೆಯಲ್ಲಿ ಹೇಳಿಕೊಂಡಿದ್ದಾರೆ.

ಸೌಂದರ್ಯ ಸ್ಪರ್ಧೆಯಿಂದ ರಾಜ್ಯಕ್ಕೆ ಮೂರು ಕಾಸಿನ ಲಾಭವೂ ಆಗಿಲ್ಲ, ಯಾರೂ ಪ್ರವಾಸಿ ಕೇಂದ್ರಗಳತ್ತ ಸುಳಿದಾಡಲಿಲ್ಲ (ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನತ್ತ ಸುಂದರಿಯರು ಕಣ್ಣು ಹಾಯಿಸಿ ಧನ್ಯಗೊಳಿಸಿದ್ದರು). ಈ ಸ್ಪರ್ಧೆಯಿಂದ ಯಾವ ಕ್ಷೇತ್ರಕ್ಕೂ ಲಾಭವಾಗಿಲ್ಲ (ಮುಂದೆ ಆಗಬಹುದೇನೋ ಎಂಬ ಆಸೆ, ನಂಬಿಕೆ ಇರಿಸಿಕೊಂಡಿದ್ದಾರೆ ಮಾನ್ಯ ಮಂತ್ರಿಗಳು). ಟಿ.ವಿ.ಯಲ್ಲಿ ಬೆಂಗಳೂರಿನ ದರ್ಶನವಾಗಲಿ ಆಗಲೇ ಇಲ್ಲ, ಇದರಿಂದ ತೀವ್ರ ನಿರಾಸೆಯುಂಟಾಗಿದೆಯೆಂದು ಗೋಳಾಡಿದ್ದಾರೆ.

ಪಾಪ 'ಬದುಕಿ'ಗಾಗಿ ವೃತ್ತಿ ಮಾಡಬೇಕಾಗಿರುವ ಎಬಿವಿಪಿಯ ಸಕ್ರಿಯ ಸದಸ್ಯ ಪ್ರಿಯದರ್ಶನ್ ಅವರು ಸಾವಿರ ಕಲಾವಿದರನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರ್ದೇಶಿಸುವ ಹೊಣೆ ಹೊತ್ತದ್ದನ್ನು, ಹಾಗೂ ಸಾಬು ವಾರಾನುಗಟ್ಟಲೆ ದುಡಿದು ಕೋಟ್ಯಾಂತರ ರೂಪಾಯಿಯ ಹಂಪೆಯ ಅವಶೇಷದ ಸೆಟ್ ಹಾಕಿದ್ದನ್ನು ಸಚಿವೆಯು ಮರೆತುಬಿಡುವುದೆ?

ವೃತ್ತಿ, ರಾಜಕೀಯ ಬೆರಸಲಾರೆ ಎನ್ನುವ ಪ್ರಿಯದರ್ಶನ್ ಅವರ ABVP ಸಂಘಟನೆಗೆ ಸಂಸ್ಕೃತಿ ಉಳಿಸಲು ಹೋರಾಡುವುದೆ ವೃತ್ತಿಯಾಗಿರುವುದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರಾ?

ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವಂತೆ ಅಭಿವೃದ್ಧಿ ಪಡಿಸಲು ವಿಶ್ವಸುಂದರಿ ಸ್ಪರ್ಧೆಯನ್ನು ಉತ್ತಮ ರೀತಿಯಲ್ಲಿ ಬಳಸಿ ಕೊಳ್ಳಲಾಗುವುದು. ಈ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದೆ ನನ್ನ ಮುಖ್ಯ ಉದ್ದೇಶ ಅಲ್ಲದೆ ನಮ್ಮ ಸಂಸ್ಕೃತಿ ಜಗತ್ತಿಗೆ ತಿಳಿಯುವುದು ಎಂದು ಹೋದೆಡೆಯೆಲ್ಲ ಕೂಗಾಡಿದ್ದರು ನಮ್ಮ ಮಾನ್ಯ ಮುಖ್ಯಮಂತ್ರಿಗಳು. ವಿರೋಧಿಸುವವರೆಲ್ಲ ಸಂಸ್ಕೃತಿಗೆ

ಮಸಿ ಬಳಿಯುವವರು, ಸಮಾಜ ಘಾತಕರು. ಅವರ ಮೇಲೆ ಮುಲಾಜಿಲ್ಲದೆ ಕ್ರಮ ಜರುಗಿಸುವಂತೆ ಪೋಲಿಸ್ ಸೋದರರಿಗೆ ಹೇಳಿದ್ದರು. ಹಾಗು ತಾವು ಮಾಡುತ್ತಿರುವ ಘನಕಾರ್ಯಕ್ಕೆ ವಿರೋಧಿಗಳೊಂದಿಗೆ ಸಹಕರಿಸದೆ ಬೆಂಬಲಿಸ ಬೇಕೆಂದು ಜನರಲ್ಲಿ ನಮ್ರ ಮನವಿ ಮಾಡಿಕೊಂಡಿದ್ದರು.

ನಗರಾಭಿವೃದ್ಧಿ ಎಲ್ಲಿ ಆಯಿತು? ಸ್ಟೇಡಿಯಂ ರೋಡು, ವಿಂಡ್ಸರ್ ಮ್ಯಾನರ್ ರೋಡು, ಏರ್ ಪೋರ್ಟ್ ರೋಡು ನೀಟಾದವು. ಆಟೋ ಚಾಲಕರು ಒಂದೇ ದಿನದಲ್ಲಿ ಲಕ್ಷಾಂತರ ರೂಪಾಯಿ ಸಂಪಾದಿಸಬಹುದೆಂದು ಮಾನ್ಯ ಮು.ಮ. ಹೇಳಿದ್ದರು. ಬುಲೆಟ್ ಪ್ರೂಫ್ ಹವಾನಿಯಂತ್ರಿತ ವಾಹನಗಳಲ್ಲಿ ಕೂತು ನಗರ ವೀಕ್ಷಣೆ ಮಾಡಿದ ಸುಂದರಿಯರು ಆಟೋದಲ್ಲಿ ಕೂರುವಂತವರೆ? ಏರ್‌ಪೋರ್ಟ್‌ನಲ್ಲಿರುವ ಟೂರಿಸಂ ಕೌಂಟರ್, ಬಾದಾಮಿಹೌಸ್ ನಲ್ಲಿನ KSTDC ಕೌಂಟರ್‌ನಲ್ಲಿ ಯಾವ ವಿಶೇಷ ಬುಕಿಂಗ್ ಆಗಲಿ, ಉದ್ದನೆ ಕ್ಯೂ ಆಗಲಿ ಇರಲಿಲ್ಲ. ಆದರೆ ಪ್ರಭುದೇವನ ಹಮ್ಮ ಹಮ್ಮ ನೃತ್ಯ, ಆಲಿಶಾಳ Made in India ಹಾಡುಗಳು ಕನ್ನಡ ಸಂಸ್ಕೃತಿಯ ಕಂಪನ್ನ ಚಾನೆಲ್‌ಗಳ ಮೂಲಕ ಜಗತ್ತಿಗೆ ಬೀರಿದರು (ಯಕ್ಷಗಾನದ, ಕಥಕ್ಕಳಿ ನೃತ್ಯ ಕಲಾವಿದರು Made in Indiaಗಳ, ಹಮ್ಮ ಹಮ್ಮಗಳ ನಡುವೆ ಕಾಣಿಸಿಕೊಂಡರು. ಪಾಪ! ಚಾನೆಲ್‌ಗಳಲ್ಲಿ ಛಾನ್ಸ ಸಿಗಲಿಲ್ಲ). ಈ ಯಶಸ್ಸು ಮುಖ್ಯಮಂತ್ರಿಗಳಿಗೆ ಸಲ್ಲಬೇಕು.

ಹೇಗೆ, ಯಾವಾಗ ಡೊನೇಷನ್ ನೀಡುತ್ತೋ ಆಗ grace & gratitude ನಿಂದ ಸ್ವೀಕರಿಸುತ್ತೇವೆ ಎಂದು ಇನ್ನೂ ಸ್ಪಾಸ್ಟಿಕ್ ಸೊಸೈಟಿಯವರು ಕಾಯುತ್ತಲೆ ಇದ್ದಾರೆ. ಹೇಳಿದ 60 ಲಕ್ಷಕ್ಕಿಂತ ಇನ್ನು ಹೆಚ್ಚು ಕೊಡಬಹುದೇನೋ ಅದಕ್ಕೆ ತಡವಾಗುತ್ತಿದೆ ಎಂದು ಸ್ಪಾಸ್ಟಿಕ್ ಸೊಸೈಟಿಯ ಹಷೀಮಾ ಹೇಳಿದ್ದಾರೆ. Graceful ಆಗಿ ಅಲ್ಲ ನೀರಸವಾಗಿ - ಸಮಾಜ ಕಲ್ಯಾಣ ಇಲಾಖೆಯ ಸೆಕ್ರಟರಿ ಹಾಗೂ ಸ್ಪಾಸ್ಟಿಕ್ ಸೊಸೈಟಿ ಪೋಷಕರು ಆದ ಆದೀಪ್ ಚೌಧರಿಯವರು ABCLನವರ reputation ಸಂತೋಷದಾಯಕ ವಾಗೇನೂ ಇಲ್ಲ, ಆದರು ABCL ಸಾರ್ವಜನಿಕವಾಗಿ ಹಣ ನೀಡುವುದೆಂದು ಮಾತು ಕೊಟ್ಟಿರುವುದರಿಂದಾಗಿ ಕೊಡದೆ ಇರಲು ಸಾಧ್ಯವೆ ಇಲ್ಲ ಅಂದಿದ್ದಾರೆ. ಅಲ್ಲದೆ ಅಮಿತಾಬಚ್ಚನ್ ಹಷೀಮ ಹಾಗೂ ಚೌಧರಿಯವರು ABCLನವರ ಉದಾತ್ತ ಗೌರವಯುತ ಪ್ರಯತ್ನವನ್ನು ನಂಬದೆ ಇರಲು ಕಾರಣಗಳೆ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಪಾಪ ಕೋಟ್ಯಾಂತರ ರೂಫಾಯಿ ವ್ಯವಹಾರ ನಡೆಸಿದ ಅಮಿತಾಭನಿಗೆ 66 ಲಕ್ಷ ನೀಡಲು ಏನು ತೊಂದರೆಯೊ? ಸ್ಪಾಸ್ಟಿಕ್ ಸೊಸೈಟಿಯವರಿಗೆ ಕಾಯಲು ತಾಳ್ಮೆ ಸಿಗಲಿ ಎಂದು ಪ್ರಾರ್ಥಿಸೋಣ. ಇನ್‌ಕಂ ಟ್ಯಾಕ್ಸ್‌ನವರು ಮಾತ್ರ ತಾಳ್ಮೆಯಿಲ್ಲದೆ ಆಗಲೆ ABCLನವರು ನೀಡಿರುವ ಹಣದ ವಿವರವನ್ನು ಸ್ಪಾಸ್ಟಿಕ್ ಸೊಸೈಟಿಯವರನ್ನು ಕೇಳಿದ್ದಾರೆ.

ಸೌಂದರ್ಯ ಸಾಧನ ಉತ್ಪಾದಕ ಕಂಪನಿಗಳಿಗೆ ನೋಟಿಸ್

ಏಕಸ್ವಾಮ್ಯ ವ್ಯಾಪಾರ ಚಟುವಟಿಕೆಯಲ್ಲಿ ತೊಡಗಿದ ಆಪಾದನೆ ಮೇಲೆ ಪ್ರಮುಖ ಸೌಂದರ್ಯ ಸಾಧನ ಉತ್ಪಾದಕ ಕಂಪೆನಿಗಳಾದ ಲಾಕ್ಮೆ, ಗೋದ್ರೆಜ್ ಸೋಪ್ಸ್, ಪಾಂಡ್ಸ್ ಹಾಗೂ ಕಾಲ್ಗೇಟ್-ಪಾಮೋಲಿವ್‌ಗಳಿಗೆ ಏಕಸ್ವಾಮ್ಯ ಮತ್ತು ನಿರ್ಬಂಧಿತ ವಾಣಿಜ್ಯ ಚಟುವಟಿಕೆಗಳ ತಡೆ ಆಯೋಗ (ಎಂಆರ್‌ಟಿಪಿಸಿ) ತನಿಖೆ ನೋಟಿಸ್ ಜಾರಿ ಮಾಡಿದೆ.

ಈ ಕಂಪೆನಿಗಳು ಜಾಹೀರಾತಿಗಾಗಿ ಭಾರೀ ಹಣ ವೆಚ್ಚ ಮಾಡಿ ಈ ವೆಚ್ಚವನ್ನು ತಮ್ಮ ಉತ್ಪನ್ನಗಳ ಬೆಲೆ ಹೆಚ್ಚಿಸುವ ಮೂಲಕ ಗ್ರಾಹಕರಿಗೆ ವರ್ಗಾಯಿಸಿವೆ ಎಂದು ನೋಟೀಸ್‌ನಲ್ಲಿ ಹೇಳಲಾಗಿದೆ.

1989-91ರ ಅವಧಿಯಲ್ಲಿ ಈ ಕಂಪೆನಿಗಳು ತಮ್ಮ ಉತ್ಪನ್ನಗಳಿಗೆ ಮನಸೋಇಚ್ಛೆ ಬೆಲೆ ಗೊತ್ತುಪಡಿಸಿವೆ ಎಂದು ಆಯೋಗದ ಮಹಾನಿರ್ದೇಶಕರು ತನಿಖೆಯ ನಂತರ ಆಯೋಗಕ್ಕೆ ತಿಳಿಸಿದ್ದಾರೆ.

ಲಾಕ್ಮೆ ಕಂಪೆನಿಯು ಎರಡು ವರ್ಷಗಳ ಅವಧಿಯಲ್ಲಿ ತನ್ನ ಸೌಂದರ್ಯ ಸಾಧನಗಳಿಗೆ ಶೇಕಡಾ 6.7ರಿಂದ ಶೇಕಡಾ 120.9ರಷ್ಟು ಅಂದರೆ ಸುಮಾರು 6 ಪಟ್ಟು ಬೆಲೆ ಏರಿಸಿದೆ ಎಂದು ನೋಟೀಸು ಆರೋಪಿಸಿದೆ. 1988-89ರಲ್ಲಿ 1.88 ಕೋಟಿ ರೂ. ಇದ್ದ ಲಾಕ್ಮೆ ಜಾಹೀರಾತು ವೆಚ್ಚವು 1990-91ರಲ್ಲಿ 4.49 ಕೋಟಿ ರೂ.ಗಳಿಗೆ ಏರಿತು. ಅಂದರೆ ಸುಮಾರು ಶೇಕಡಾ 138.78ರಷ್ಟು ಏರಿಕೆ ಆಯಿತು.

ಈ ವೆಚ್ಚವನ್ನು ಕಂಪೆನಿಯು ಅಂತಿಮವಾಗಿ ಗ್ರಾಹಕರ ತಲೆಗೆ ಕಟ್ಟಿತು. 1989ರಲ್ಲಿ 1.24 ಕೋಟಿ ರೂ. ಇದ್ದ ಈ ಕಂಪೆನಿಯ ಲಾಭಾಂಶವು 1991ರಲ್ಲಿ 3.21 ಕೋಟಿ ರೂ.ಗಳಿಗೆ ಏರಿತು; ಅಂದರೆ ಶೇಕಡಾ 158.5ರಷ್ಟು ಏರಿಕೆಯಾಗಿದ್ದು ಇದು ಅಸ್ವಾಭಾವಿಕ ಎಂದು ಆಯೋಗ ಹೇಳಿದೆ.

(ಕೃಪೆ: ಪ್ರಜಾವಾಣಿ)

KSCA ಸ್ಟೇಡಿಯಂನವರು ಸಹ ತಮಗೆ ಇನ್ನು ಬರಬೇಕಿರುವ 25 ಲಕ್ಷ ದಾನಕ್ಕಾಗಿ ಕಾದು ಕೂತಿದ್ದಾರೆ. ಸ್ಟೇಡಿಯಂಗೆ ಸೆಟ್‌ನಿಂದಾಗಿ ಯಾವ ಹಾನಿಯೂ ಆಗಿಲ್ಲವೆಂದಿದ್ದಾರೆ. ಸ್ಟೇಡಿಯಂ ಅಭಿವೃದ್ಧಿಗಾಗಿ ಹಿಂದೆ ನಾಲ್ಕು ಕೋಟಿ ಸಾಲ ಮಾಡಲಾಗಿತ್ತು. ಬರುವ ಹಣದಿಂದ ಸಾಲ ಮರುಪಾವತಿ ಮಾಡಬಹುದೆಂದು KSCAನ ಡಾ. ತಿಮ್ಮಪ್ಪಯ್ಯ ಹೇಳಿದ್ದಾರೆ. ಕ್ರಿಕೆಟ್ ಬಿಟ್ಟು ಮುಂದೆ ಈ ರೀತಿಯ ಕಾರ್ಯಕ್ರಮ ನಡೆಸಿದರೆ ಪೂರ್ತಿ 4 ಕೋಟಿ ಸಾಲ ಬೇಗನೆ ತೀರಬಹುದು!

ಲಾಭ ನಿಜಕ್ಕೂ ಆಗಿರುವುದು ಛತ್ರಿ ವ್ಯಾಪಾರಿಗಳಿಗೆ! ABCL ಭಾರೀಪ್ರಮಾಣದಲ್ಲಿ ಬೆಂಗಳೂರಿನ ಅಂಗಡಿಗಳನ್ನೆಲ್ಲ ಜಾಲಾಡಿ ಛತ್ರಿಗಳನ್ನು ಕೊಂಡು ಛತ್ರಿ ವ್ಯಾಪಾರಿಗಳಿಗೆ ಲಾಭ ಉಂಟುಮಾಡಿದ್ದಾರೆ. ಛತ್ರಿಗಳಿಂದ ವಿಶ್ವಸುಂದರಿಯೆನಿಸಿಕೊಂಡ ಐರಿನಾ ಸ್ಕ್ಲಿವಾ ತನ್ನುದ್ದಕ್ಕೂ ಬಹುಮಾನಗಳ ರಾಶಿ ಸುರಿಸಿಕೊಂಡಿದ್ದಾಳೆ. 80 ಸಾವಿರ ಡಾಲರ್ ಹಣ, ವಜ್ರ ಖಚಿತ ವಾಚು, ಉಚಿತ ವಿಮಾನ ಪ್ರಯಾಣ, ಕಾರು, ಒಡವೆ ಇತ್ಯಾದಿ. ಇವನ್ನೆಲ್ಲ ವ್ಯಾಪಕ ಪ್ರವಾಸಕ್ಕೆ, ಸಂತೋಷ ಅನುಭವಿಸಲಿಕ್ಕೆ ಉಪಯೋಗಿಸುವೆನೆಂದು ಹೇಳಿದ್ದಾಳೆ. ಧರ್ಮಾರ್ಥ ಕಾರ್ಯಗಳಿಗಾಗಿ ಹಣ ಸಂಗ್ರಹಣೆ ಮಾಡುವ ಉದ್ದೇಶದಿಂದ ಸಂಘಟಿಸುವ ಎಲ್ಲಾ ಕಾರ್ಯಕ್ರಮಗಳಿಗೆ ನೆರವು ನೀಡುತ್ತೇನೆ ಎಂದಿದ್ದಾಳೆ. ದಾನ ಬೇಕಾಗಿರುವವರೆಲ್ಲ ಅವಳ ನೆರವು ಕೇಳಿ ಅರ್ಜಿ ಗುಜರಾಯಿಸಿಕೊಳ್ಳಬಹುದು!

ಈ ಅದ್ಭುತ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿದ ಬರ್ಮನ್, ಪಟೇಲ, ಅಮಿತಾಬರ ಹೆಸರುಗಳು ಚರಿತ್ರೆಯಲ್ಲಿ ಚಿರಾಯುವಾಗಲಿ!

●

['ಮುಖಾಮುಖಿ' - ಹಿಂದಿನ ಸಂಚಿಕೆಯಿಂದ]

ಅಭಿಪ್ರಾಯ : ಈ ಸೌಂದರ್ಯ ಸ್ಪರ್ಧೆಗಳು ಹೆಂಗಸರ ವಿಮೋಚನೆಗೆ ಹಾದಿಗಳಾಗಿವೆ. ಇವು ಹೆಂಗಸರನ್ನು ಮೇಲೆತ್ತುತ್ತವೆ.

ನಮ್ಮ ಪ್ರತಿಕ್ರಿಯೆ : ಮಹಿಳಾ ಚಳುವಳಿಯಲ್ಲಿ ಇರುವವರನ್ನೂ ಒಳಗೊಂಡಂತೆ ಅನೇಕರು ಹೀಗೆ ಅಭಿಪ್ರಾಯಪಡುವುದುಂಟು. ಆದರೆ ಮಾರುಕಟ್ಟೆ ಕೇಂದ್ರಿತವಾದ ಈ 'ಸೌಂದರ್ಯ ಸ್ಪರ್ಧೆ' ಮತ್ತು 'ವಿಶ್ವಕ್ಕೆಲ್ಲ ಒಬ್ಬ ಸೌಂದರ್ಯ ರಾಣಿ' ಎಂಬ ಕಲ್ಪನೆಗಳು ವಯಕ್ತಿಕವಾಗಿ ಹೆಂಗಸರಲ್ಲಿ ಎಂತಹ ದಾಸ್ಯ ಬೆಳೆಸುತ್ತವೆ ಎಂಬುದನ್ನಷ್ಟೇ ಗಮನಿಸೋಣ. ಈ ಸೌಂದರ್ಯ ಸ್ಪರ್ಧೆಗಳ ಪ್ರಾಯೋಜಕರೂ ಆಗಿ ಕೆಲಸ ಮಾಡುವ ಫೆಮಿನಾದಂತಹ ಪತ್ರಿಕೆಗಳಾಗಲೀ ಇಲ್ಲವೇ ಇಂತದೇ ಮಹಿಳೆಯರ ಪತ್ರಿಕೆಗಳಾದ ಈವ್ಸ್ ವೀಕ್ಲಿ, ಗೃಹಶೋಭದಂತ ಪತ್ರಿಕೆಗಳು ಹೆಂಗಸರಲ್ಲಿ ತಮ್ಮ ಲುಕ್ ಕುರಿತ ಆತಂಕ ಹುಟ್ಟಿಸುತ್ತವೆ, ದೇಹದ ಮೇಲೆ ಗೀಳು ಹಿಡಿಸುತ್ತವೆ. ಹೆಂಗಸರ ಪ್ರಗತಿಪರತೆಯ ಬಗ್ಗೆ ಮಾತನಾಡುತ್ತಲೇ ಇಂತಹ ಪತ್ರಿಕೆಗಳು ಹೆಂಗಸರನ್ನು ಸೌಂದರ್ಯದ ಬೊಂಬೆಗಳಾಗಿ ಪರಿವರ್ತಿಸುತ್ತವೆ. ಪುರುಷ ವ್ಯಾಖ್ಯಿತವಾದ ಈ ಸಮಾಜದಲ್ಲಿ ಈ ಪ್ರಕ್ರಿಯೆ ಬಲಶಾಲೀ ಹಿತಾಸಕ್ತಿಗಳನ್ನು ಬೆಂಬಲಿಸುತ್ತಾ ಹೆಂಗಸರನ್ನು ಮತ್ತಷ್ಟು ದಾಸ್ಯಕ್ಕೆ ತಳ್ಳುತ್ತವೆ. ಖಂಡಿತವಾಗಿಯೂ, ಸೌಂದರ್ಯ ರಾಣಿಯರು ಕಿರೀಟ ಗೆದ್ದು ಒಂದು ಇತ್ಯಾತ್ಮಕ ಅನುಭವಕ್ಕೆ ಪಕ್ಕಾಗುತ್ತಾರೆ ನಿಜ. ಸುಂದರಿಯರನ್ನು ಜನ ಸಾಮಾನ್ಯವಾಗಿ ಇಷ್ಟಪಡುವುದರಿಂದ ಅವರು ಯಶಸ್ವಿಗಳಾಗುತ್ತಾರೆ. ಆದರೆ ಸೌಂದರ್ಯ ಸ್ಪರ್ಧೆಯೊಳಕ್ಕೆ ದಾಸಿಯರಾಗುವವರು ಇದು ಕೊಡುವ ಸಾಮಾಜಿಕ ಸ್ಥಾನಮಾನವನ್ನು ಕಳಕೊಳ್ಳುವ ಭಯದಲ್ಲೇ ಸದಾಕಾಲ ಬದುಕುತ್ತಾರೆ. ಒಂದು ಐತಿಹ್ಯವೇ ಆಗಿದ್ದ ಮರ್ಲಿನ್ ಮನ್ರೋ ತನ್ನ 36ನೇ ವಯಸ್ಸಿನಲ್ಲಿ ಆತ್ಮಹತ್ಯೆಯೇಕೆ ಮಾಡಿಕೊಂಡಳು? ಅವಳು ತನ್ನ ಜೀವಮಾನಪೂರ್ತ ಚೆನ್ನಾಗಿ ಕಾಣುವುದರಲ್ಲೇ ಸವೆಸಿದಳು. 36ನೇ ವಯಸ್ಸೆಂದರೆ, ಕನ್ಸ್ಯೂಮರ್ ನಿಯಂತ್ರಿತ ಬಂಡವಾಳಶಾಹೀ ಸಮಾಜ ಹೆಂಗಸಿನ ಲುಕ್ ಕೊನೆಗೊಳ್ಳುವ ವಯಸ್ಸೆಂದೇ ಭಾವಿಸುತ್ತದೆ. ಹೀಗೆ ಕನ್ನಡಿಗೇ ಅಂಟಿಕೊಂಡು ಮೇಕಪ್ ಇಲ್ಲದೆ ಮನೆ ಬಿಡಲು ಸಾಧ್ಯವಾಗದ ಹೆಂಗಸರು ತಮ್ಮೊಳಗಿನ ಸೌಂದರ್ಯ, ಚಾರಿತ್ರ್ಯ ಮತ್ತು ಲವಲವಿಕೆಗಳನ್ನು ಕೊಂದುಕೊಳ್ಳುತ್ತಾರೆ. ಅಂದರೆ ವ್ಯಕ್ತಿತ್ವದ ಸಹಜ ಅರಳುವಿಕೆ ಇಲ್ಲಿ ಹೊಸಗಲ್ಪಡುತ್ತದೆ. ಯಾವ ಪಿತೃ ಪ್ರಧಾನ ವ್ಯವಸ್ಥೆ ಮಹಿಳೆಯರ ವ್ಯಕ್ತಿತ್ವ ಅರಳುವಿಕೆಯನ್ನು ಹೊಸಕಿ ಹಾಕುತ್ತಾ ಬಂದಿದೆಯೋ, ಇಲ್ಲಿ ಮಹಿಳೆಯರ ವಿಮೋಚನೆಯ ಹೆಸರೇಳಿಕೊಂಡು ಅದರ ಮುಂದುವರಿಕೆಯಾಗುತ್ತಿದೆ ಎಂಬುದಷ್ಟೇ ದಿಟ.

[ಹೀಗೆ ಸಾಮಾನ್ಯವಾಗಿ ಬಂದ ಮತ್ತೆ ಕೆಲವು ಅಭಿಪ್ರಾಯಗಳೆಂದರೆ - "ಮಹಿಳಾ ಸಂಘಟನೆಗಳು ಈಗ ಮಾತ್ರ ಯಾಕೆ ಪ್ರತಿಭಟಿಸುತ್ತಿವೆ" - "ಸೌಂದರ್ಯ ರಾಣಿಯರನ್ನು ಬುದ್ಧಿಮತ್ತೆಯ ಆಧಾರದಲ್ಲೂ ಆರಿಸಲಾಗುತ್ತದೆ" ಮುಂತಾದವು. ಇವುಗಳನ್ನು ಕಳೆದ ಸಂಚಿಕೆಯ ಬೇರೆ ಬೇರೆ ಲೇಖನಗಳಲ್ಲೇ ನಿರ್ವಹಿಸಿದ್ದೇವೆ. - ಸಂ. ಮಂ.]

ಆ ತಾಯಿ ಕೊಟ್ಟಿದ್ ಮೈನಾ ಅದೆಂಗೈತೊ ಅಂಗ್ ಇಟ್ಟಾಳಾದ್ ಬುಟ್ಟು.......

ಸರಸ್ವತಿ ದು.

ದಡ ದಡ ಬಾಗುಲ್ ಬಡ್ದರು ಯಾರೊ. ನೋಡೋನಾ ಅಂತ ಬಾಗ್ಲು ತಗುದ್ರೆ, ಎದ್ರುಗೆ ಸಣ್ ತಿಮ್ಮಿ ನಿಂತವಳೆ! ಅಗಳೆ, ಇದ್ಯಾಕಮ್ಮಿ ಇಂಗ್ ಏಳ್ದೆ ಕೇಳ್ದೆ ಬಂದೆ, ಅಂದೆ ಅದಕ್ಕವಳು -

ಎ ಇಂಗೆ ಬಂದ್ ಕಣಮ್ಮಿ, ನೀನೆಯಾ, ದಂಡಿಸುರ್‌ಕೆ ಬಂದಾಗೆಲ್ಲವ ಎಳ್ತುರ್‌ಲಿಲ್ವಾ - ಬಾರೆ ಒಂದಪ, ಊರ್ ತೋರ್‌ಸ್ ಕಳ್‌ಸ್ತಿನಿ ಅಂತವ. ಒಸಿ ದುಡ್ಡ್ ವಂದಸ್ಕಂಡಿದ್ದೆ. ಬತ್ತೀನಿ ಅಂತ ಕಾಗ್ದ ಆಕ್ಸಾನ ಅಂತಿದ್ದೆ, ಅಷ್ಟ್‌ರಾಗೆ ನಮ್ ಕಿಟ್ಟಯ್ಯನ ಮಗ ಯಂಕ್ಟ ಜಾತ್ರೆಗ್ ಬಂದಿದ್ದ, ವಂಡವಾಗ ಬರಂಗ್ ಇದ್ರ ಬಾ, ಸರೋಜಕ್ಕನ್ ಮನೆ ನೋಡಿದಿನಿ ಬಿಡ್ತೀನಿ ಅಂದ. ಯಪ್ಪ ಅಷ್ಟ್ ಮಾಡ ಮಾರಾಯ ಅಂತ ಜತೀಲಿ ವಂಟ್ ಬಂದೆ. ಸೆಟ್ಲಿಗ್ ಬಂದ್ವಿ. ಇಲ್ಲೆ ಯಾದೊ ಪ್ಯಾಟ್ರಿನಾಗ ಕೆಲ್ಸ್‌ಕೋಯ್ತನ್ ಕಣೆ, ಪುಣ್ಯಾತ್ಮ ಕರ್‌ಕಂ ಬಂದ ಅಂತುವೆ. ಇನ್ಯಾರವ್ವ ನನ್ನಂತೋಳ್‌ನ ಮೂಸೋರು? ಇನ್ಯಾವ್ ಪರ್‌ದೇಸ್ ಸೂಳೆ ಮಕ್ಳು ಕರ್‌ಕಂಬತ್ತಿದ್‌ದೊರು? ಅಂತ ಅಳಾಕ್ ಸುರು ಅಚ್‌ಕಳವೇಳೆಗೆ ಸರ್‌ಬುಡೆ, ಎಂಗೊ ಬಂದ್ಯಲ್ಲ ಅತ್ತಗೆ, ಒಗ್ ಕೈಕಾಲ ಮುಖ ತೊಳ್ಕಳೆ, ಕಾಪಿ ಕುಡಿವಂತೆ ಅಂದೆ.

ಇವುನ್ನಾ ಅತ್ತಾಗ್ ಮಡಿಕಳೆ, ಬರಿ ಕೈಲೇನ್ ಬರಾದು ಅಂತ ಮೂರ್ನಾಲ್ಕ ಬಟ್ಟೆ ಗಂಟ್ ತಳ್ಳಿ ಮುಖ ತೊಳ್ಕಳಕ್ಕೋದ್ಲು ಸಣ್ ತಿಮ್ಮಿ.

ಏನ್ ತಂದವ್‌ಳೆ ಅಂತ ನೋಡಿರೆ ವತ್ತಾಗೆ ಕಟ್ಟಿರ ಸೂಜ್‌ಮಲ್ಗೆ, ಕಾಯೋಳು, ವನ್ನಮ್ಮನ್ ಪರ್‌ಸಾದ, ಖಾರದ್ ಕಡ್ಡಿ, ಕಡ್ಲೆ ಬೆರ್ಸಿರೊ ಕಳ್ಳೆಪುರಿ, ಒಂದೊರೆ ದಂಟನ್ ಸೊಪ್ಪು, ಅಚ್ಚೇರ್ ಸಾಸ್ವೆ, ಎಲ್ಡು ಕೊಬ್ರಿ ಉಂಡೆ ಒಂದ್ ಚುಪ್ಪ ಬಾಳೆಣ್ಣು ಎಲ್ಲಾನು ತಂದವ್‌ಳೆ. ಅವಳ್ ವಿಶ್ವಾಸ ನೋಡಿ ಕಣ್ಣಾಗ್ ನೀರ್ ಬಂತು.

ಇದ್ಯಾಕೆ ಇಟೊಂತರ ತರಕೋದೆ ಅಂದೆ.

ಬಿಡೇ ಕಳ್ಳೆಪುರಿ ಒಂದ್ ಬಿಟ್ರೆ, ಇನ್ನಾವುದ್ನ ದುಡ್ಡ್‌ಕೊಟ್ ತಂದಿದೆನೇಳು, ಎಲ್ಲ ಮಲ್‌ಲಿದ್ದವೆಯಾ ಅಂದ್ಲು. ತೊಳ್ಕಂಡಿರ ಮುಖಾನಾ ಅಂಗೆ ಸೆರ್ಗಗೆ ವರ್‌ಸ್ ಕಂಡ್ಲು. ದ್ಯಾವ್ರನ್ನೆತ್ತಗೆ ಪೂಜಿದಿಯೆ ಅಂತ ಕೇಳಿಳು.

ದ್ಯಾವ್ರು ಪಾವ್ರು ಇಲ್ಲ ಕಣೆ, ಅಗ ಅದೊಂದ್ ಬುದ್ದನ್ ವಿಗ್ರಲಿ ಮಡ್ಕಂಡಿದೀನಿ ಅದ್ಕೆ ದೀಪವೊಚ್‌ತೀನಿ ಅಂದೆ.

ಯಾವ್ದೊ ಮನಂದ್‌ಮೇಲ್ ವಂದ್ ದೀಪವೊಚ್‌ಬೇಕ್ ತಗಾ ಅಂತ ಅಲ್ಲೆ ದೀಪದಾಗ್ ಇದ ಬತ್ತಿ ಮುಂದ್ ಮಾಡಿ, ದೀಪದ್ ಕೆಳ್ಗಗಿದ್ ತಟ್ಟೆಲಿದ್ದ ಎಣ್ಣೆನೆ ಒಳ್‌ದುಯ್ದು ಬೆಂಕಿ ಪಟ್ನ ಇಸ್ಕಂಡ್ ದೀಪವೊಚ್ಚಿ ಸಾಮಿ, ಪರಮಾತ್‌ಮ, ನಾರಾಯಣ ಕಾಪಾಡಪ್ಪ ಯಂಕಟೇಸ ಅಂತ ಆ ಬುದ್ದನಿಗೇ ಕೈಮುಗಿದ್ಲು. ಆಮೇಲ್ ಬಂದ್ ಸೊರ್‌....ಪ್ಪ, ಸೊರ್....ಪ್ಪ್ ಅಂತ ಕಾಪಿ ಕುಡಿದ್ಲು.

ಬರಾದೇನೋ ಬಂದೆ ಎಸ್ಟ್ ದಿಸ್‌ರ್ತೀಯಾ ಅಂದೆ.

ನಾಕ್ ದಿನ ಇರ್ತೀನಿ ಕಣೆ, ಶನ್‌ವಾರ್ ದಿನ ಊರಾಗಿರ್‌ಬೇಕ್‌ನೋಡು ವಾರ ಮಾಡಕೆ ಅಂದ್ಲು (ಸಣ್ ತಿಮ್ಮಿ ಎಲ್ಲಾರು ಒಗಿರ್ಲಿ ಶನ್‌ವಾರ್‌ದೊತ್‌ಗೆ ಊರಿಗ್ ಬಂದ್ ಬಿಡ್‌ಬೇಕು. ಏಳಿ, ಕೇಳಿ ಯಂಕ್ಟೇ ಸ್ವರನ್ ಒಕ್ಲು, ಮನೇರೆಲ್ಲ ಬರಿ ತಿಮ್ಮ, ತಿಮ್ಮಕ್ಕ, ದೊಡ್ಡ್ ತಿಮ್ಮ ಸಣ್ ತಿಮ್ಮಿ, ಯಂಕ್ಟೇಸ ಇವರೆ ಇದ್ದಿದ್ದು, ಶನ್‌ವಾರ್ ದಿಸ ಮನೇನೆಲ್ಲ ಸಾರ್ಸಿ, ನೀರ್ ಉಯ್ಕಂಡು ಶಂಖ, ಜಾಗ್‌ಟೆ, ಬನ್‌ವಾಸಿ, ದೇವ್ರಪಟ ಎಲ್ಲ ತೋಳ್ದು, ಬಿಳಿನಾಮ, ಕೆಂಪ್‌ನಾಮ ಇಕ್ಕಿ, ಪತ್ರೆ ಆಕಿ ದೀಪವೊಚ್ಚಿ, ಗಂದ್‌ಕಡ್ಡಿ ಅಚ್ಚಿ, ಬೆಲ್ಲ ಏನಾರು ಇದ್ರೆ ಅಕ್ಕಿ ತಿಕ್ ಬೆಲ್ಲ ಆಕೊ ಇಲ್ಲ ಪಲಾರಾನೊ ಮಾಡಿ ವಾರ ಮಾಡ್ಲಿಲ್ಲ ಅಂದ್ರೆ ಅವಳ್ ಜೀವನಿಲ್ತಿರ್‌ಲಿಲ್ಲ.)

ಸರಿ ಬುಡು, ಬೆಂಗ್ಳೂರ್ ನೋಡಾಕ ನಾಕ್‌ದಿನ ಸಾಕು, ಇವತ್ ಮಾತ್ರ ಎಲ್ಲೂ ಒಗಂಗಿಲ್ಲ ಇವತ್ತು ಬಂದು ಜತ್ಗೆ ಬ್ಯಾನ್ ಆರ್ಡ್ರು ಇದೆ ಅಂದೆ.

ಬಂದು ಅಂದಿದ್‌ಕೆ ಗೊತ್ತಾಗ್ದೆ ಮುಖ ಮುಖ ನೋಡಿಳು ಅದ್ಕೆ.

ಬ್ಯಾನ್‌ಆರ್ಡ್ರು ಅಂದ್ರೆ ಐದ್ ಜನ್ದಮ್ಯಾಗೆ ಎಚ್ಗೆ ಜನ ಓಡಾಡಂಗಿಲ್ಲ, ಮೆರಣ್ಗೆ, ಪರಣ್ಗೆ ಮಾಡಾಂಗಿಲ್ಲ, ಎಲ್ಲ ಕಡೆಲೂ ಪೋಲಿಸ್ನೋರ್ ಇರ್ತಾರೆ ಅಂತ ವಿವರಿಸ್ದೆ.

ಬಂದು ಅಂದ್ರೆ - ಈ ಬಿ.ಜೆ.ಪಿ.ಯವ್ರು, ಜನ ಕೆಲ್ಸ ಕಾರ್ಯ ಎಲ್ಲಾ ಬುಟ್ಟು ಸುಮ್ಮನ್ ಕುಂತ್ಕಬೇಕು ಅಂತ, ಜನವಾ ಕೇಳ್ಕಂಡವ್ರೆ.

ಬಿಜೆಪೆರೊ ಅಂದ್ರೆ ಎಲ್ಲಾತ್ಕು ರಥವಂಡಸ್ತರಲ್ಲ ಅಂತ ವಿವರಣೆ ಕೊಟ್ಕೆ. ಅದರ್ ತಿಮ್ಮಿ ಗೊತ್ ತಗ ನಂಗುವೆ -

ನಮ್ಮೂರ್ಗೂ ಬಂದಿದ್ರು ಇಟ್ಗೆ ಕೊಡ್ರಿ, ಎಲ್ಲೋವೆ ರಾಮ್ರ ದೇವ್‌ಸ್ತಾನ ಕಟ್ಟುಸ್ತುವಿ ಅಂತ ಅಂದ್ಲು.

ಏನ್ ಹೇಳಿರ್‌ಬೋದು ಅಂತ ಕುತೂಹಲಕ್ಕೆ ನೀನೇನೆಂದೆ? ಅದ್ಕೆ, ಇಟ್ಗೆ ಕೊಟ್ಟಾ?

ಊ ಕೂಡ್ತರ್ ತಗಾ, ನೀವೆ ಎಲ್ಲಾರು ಉಡಿಕ್ಕಬಂದ್ ಇಟ್ಗೆಕೊಡ್ರಿ, ಮಣ್ಣಿನ್‌ಗ್ಯೋಡೆ ಏಸೊ ವರ್ಸುದ್ದಾ, ಬಿದ್ದೋಗ್‌ತದೆ, ಭದ್ರಾಗಿ ಇಟ್ಗೆ ಗೋಡೆನಾರ ಕಟ್ಕಂತೀವಿ. ಎಚ್ಚಗೇನಾರು ಸಿಕ್ರೆ ಎಲ್ರಿಗೂ ಭದ್ರಾದ್ ಮನೆ ಆಯ್ತದೆ, ಬಡ್‌ವುರ್ ಬದರ್‌ಕಂತರೆ, ಅಲ್ಲೆಲ್ಲೋ ಕಾಣ್ದ ಊರಾಗ ಯಾಕ್ ಗುಡಿ ಕಟ್ತಿರಾ ಅಂದೆ - ಅಂದ್ಲು.

ಅವಳ್ ಮಾತ್‌ಗೆ ಭಲೆ ಅಂದೆ

ಸರಿ ಇಲ್ಲಿದೇಳ್ ನೀನು, ಇಲ್ಲಿ ಯಾಕ್ ಇವೆಲ್ಲ ಆಯ್ತ ಅದೆ?

ಅವಳ್‌ದೆ ಮಾತಲ್ಲಿ, ಏನಿಲ್ಲ ಇಲ್ಲಿ ಒಂದ್‌ಷ್ಟ್ ಯಾಪಾರ ಮಾಡಜನ, ಜಗತ್‌ಗೆಲ್ಲ ಚೆಂದಾಗಿರೋಳ್ ಯಾರು ಅಂತ ಕಂಡ್ ಇಡ್ಯಾಕೆ, ಒಂದ್ ಆಟ ಮಡ್ಗವ್‌ರೆ. ಪೋಡ್ರು, ಕಣ್ಕಪ್ಪು, ತುಟ್‌ಗಟ್ಟಳ ಬಣ್ಣ್‌ದೋರು, ತಲೆತೊಳ್ಕಳ ಸೋಪ್‌ನೋರು, ಮೈ ತೊಳ್ಕಳ ಸೋಪ್ ನೋರು, ಮೆಟ್ಟ್ ಮಾಡೋರು ಎಲ್ರುವೆ ಸೇರ್ಕಂಡು ಯಾವ್ಯಾವ್‌ದೊ ದೇಸ್‌ದಿಂದ ಉಡ್ಗೀರ್‌ನಾ ಕರ್‌ಸ್ತಾರೆ. ಒಂದೊಂದ್ ದೇಸ್‌ದಿಂದ ಒಬ್ಬಬ್ಳು ಬತ್ತಳೆ ಅಂದೆ.

ಅದರ್ ಅವುಳು - ಇಡಿ ಪರ್‌ಪಂಚಾದಾಗ್ ವಲ್ಲಾ ಕಡಿಂದ ಉಡ್ಗಿರ್ ಬತ್ತರೇ?

ಅಂತ ಅನುಮಾನ್‌ಸಿದ್ಲು

ಇಲ್ಲ ಯಾರ್ಯಾರ್ ಬತ್ತರೊ, ಅವ್ರೆ ಎಲ್ಲ ಸೇರ್ಕಂಡು ಪ್ರಪಂಚಾನ ಮಾಡ್ಕಂತರೆ ಅಂದೆ ಸರಿ ಅದ್ಕುವೆ ಬಂದ್ ಮಾಡಾಕುವ ಏನ್ ಸಂಬಂಧ?

ಎಂಗೆ ಅಂದ್ರೆ - ಇದೆಲ್ಲ ಯಾಪಾರ ಮಾಡೋರ್ ಸಂಚು, ಅವರ್ ಸಾಮಾನ್ ಮಾರ್ಕಳಕ್ಕೆ ಎಂಗುಸ್ರ ಮೈ ತೋರ್ಸಿ ಉಪ್‌ಯೋಗಿಸ್ಕಂತರೆ, ಅಂತ ಒಂದಷ್ಟ್ ಜನ ಗಲಾಟೆ ಮಾಡ್ತ ಅವ್ರೆ. ಇವರ್ನ ಇಂಗೆ ಗಲಾಟೆ ಮಾಡಾಕ್ ಬುಟ್ರೆ, ಆಟಾನೇ ನಿಲ್ಸ್‌ಬುಡ್ತಾರೆ ಅನ್ನೊ ಭಯ್‌ಕೆ ಪೋಲಿಸ್ನೋರು ಗಲಾಟೆ ಮಾಡಾರ್ನ ಸುಮ್ನೆ ಬಿಡಲ್ಲ, ಇಡ್ದವಳಿಕಾಕಣ್‌ತೀವಿ ಅಂತ ಎದ್ರುಸವ್ರೆ.

ಆಟ ನಡ್‌ಸೋರು ಗಂಡ, ಎಂಡ್ರಿಬ್ಬರವ್ರೆ ಅವರು ಇದು ಮೈ ತೋರ್ಸಾದಷ್ಟೆ ಅಲ್ಲ, ಬುದ್‌ವಂತ್‌ತನಾನು ಪರೀಕ್ಸೆ ಮಾಡ್ತೀವಿ. ಅಲ್ದೆ ಕೈಕಾಲ್ ಬಿದ್ದೋಗಿರೊ ಮಕ್ಳಿಗೆ ವಸಿ ದುಡ್ನು ಕೊಡ್ತೀವಿ. ಇಧೇನ್ ಅಂತ್ ಕೆಟ್‌ದಲ್ಲ ಅಂತಾ ಅವ್ರೆ.

ಇಲ್ಲಿ ನಮ್ಮೂರಾಗೆ ನಡ್ಸೊ ಉಸ್ತುವಾರಿ ತಗಂಡಿರ ಅಮಿತಾಬ್ ಬಚ್ಚನ್ ಅನ್ನೊ ಸಿನ್‌ಮಾ ನಟ, ಇಡೀ ಜಗತ್‌ಗೆ ನಮ್ಮೂರ ಬಗ್ಗೆ ಗೊತ್ತಾಯ್ತದೆ, ಊರಾಗಿರೊ ಯಾಪಾರಿಗಳ್ಗೆ ಲಾಭ ಆಯ್ತದೆ. ಇದ್ನ ಮಾಡಿರೆ ಪ್ರಪಂಚ್‌ಕೆ ನಾವೇನು ಅಂತ ಗೊತ್ತಾಗುತ್ತೆ ಅಂತೆಲ್ಲ ಎಳಿ, ಸಮ್ಮ ಪಟೇಲನ್ನ ಕೈಗಾಕಂಬುಟ್ಟವ್ನೆ.

ಅಮಿತಾಬಚನು ಅಂದ್ರೆ ಅದೇ ಆ ಗಣೆ ಬೇತಾಳ್ದಂಗೆ ಅವ್ನಲ್ಲ ಆ ಡಕಾಯ್ತುರ್ ಸಿನೀಮಾದಾಗೆ - ಮಾಡೋನಲ್ಲ ಅವಂತಾನೆ, ಗೊತ್‌ನಂಗೆ ಅಂದ್ಲು.

ಅದುಕ್ ಸರ್ಯಾಗಿ ನಮ್ಮ ಪಟೇಲ ಮದ್ನೆ ಕಚ್ಚರ್ಕ, ಜೊಲ್ ಸುರಿಸ್ಕಂಡ್ ಆಯ್ತು ಅಂದ್‌ಬುಟ್ಕ. ಗಲಾಟೆ ಮಾಡೋರ್ ಏನಾರು ಮಾಡ್ತಾರೆ ಅಂತ ಪೋಲಿಸೊರಿಗ್ ತಾಕೀತ್ ಮಾಡಬುಟ್ಟವ್ನೆ - ಸರ್ಯಾಗ್ ಬಂದ್‌ಬಸ್ತ ಮಾಡಿ, ಉಸ್ರೇತ್ತೋರ್ನೆಲ್ಲ ಒಳಿಕಾಕಿ ಬಾರ್ಸಿ. ಏನಂದ್ ಕಂಡೆವ್ರೆ ಇವ್ರು, ಯಾವ್ಳೋಳ್ ಚೆಂದಾಗವ್ಳೋ ಅವಳು ಆಟ ನೋಡಾಕ್ ಬತ್ತಳೆ, ಚೆನಗಿಲ್‌ದೋಳು ಮನೇಲ್ ಕುತ್ಕಂಳ್ಲಿ ಅಂದವ್ನೆ.

ಅವನ್ ಮಕ್ಕೆ ಅವ್‌ನ್ಯಾವ್ ಸೀಮೆ ಚೆಂದಗವ್ನಮ್ಮಿ, ಒಳ್ಳೆ ಏಲೊನಾಯ್ತರ ಮೂತಿ ಇದ್ದಂಗೈತೆ ಅಂದ್ಲು.

.ಅವಳ್ ಮೂತಿ ತಿರ್‌ಗ್ಸಕಂಡ ಅಂದಿದ್ದಕೆ ನಗು ಬಂತು.

ಮಾತ್ ಆಡ್ತ ಆಡ್ತಲೆ ಅವರೆ ಕಾಯ್ ಸುಲ್ದಿದ್‌ದ್ಲು ತಿಮ್ಮಿ. ಅದ್ನೆ ಆಕಿ ಸಾರ್ ಮಾಡಿ, ಅನ್ನ ಮಾಡ್ದೆ. ತಿಮ್ಮಿ ಮುದ್ದೆ ತಿರ್‌ವಿಳು, ಉಂಡು ಆಯ್ತು.

ತಿಮ್ಮಿ ಈಗ ಒಂದ್‌ಗಳ್ಗೆ ಮಲ್ಕಳನ, ಆಮ್ಯಾಲೆದ್ದು ದೊಡ್‌ದೊಂಸು ಆಂಜನೇಯುನ್ ದೇವಸ್ಥಾನದೆ, ಕರ್ಕಂಡೊಗ್ತಿನಿ ಅಲ್ಲೆ ಸುತ್ತಾಡ್‌ಕಂಡ ಬರನಾ, ಬಂದು ಕೆಲ್ಸ ಮುಗ್ಸಿ, ಉಂಡು ಟೀವಿ ನೋಡನಾ ಸುಂದ್ರಿರ್ದು ಆಟ ಎಂಗಿರುತ್ತೆ ಅಂತ ನೀನು ನೋಡಿವಂತೆ ಅಂದ್ನೆ,

ಅಂದ್‌ಕಂಡಂಗೆ ಎಲ್ಲ ಮಾಡ್ ಸುಂದ್ರಿ ಸ್ಪರ್ಧೆ ಒತ್ಗೆ ಟಿ.ವಿ. ಮುಂದ್ ಕುತ್ಕಂಡ್ವಿ.

ಟಿ. ವಿ. ನೋಡ್ತಾ ಜೊತೆ ಜೊತೇಲೆ ತಿಮ್ಮಿ ಉದ್ಗಾರಗಳು, ಮಾತ್‌ಗಳು ಶುರುವಾದವು.

ತಿಮ್ಮಿ - ಇವ್‌ಳ್ಯಾರಮ್ಮಿ ಇತ್ತಾಗೆ ಸ್ಕಾಲೆನು ಅಲ್ಲ, ಲಂಗ್‌ವು ಅಲ್ಲ ಅಂತದಾಕಂಡವಳ್ಳೆ, ಚಪ್ಪಾಲೆ ತಟ್ಟಾಕು ಸಕ್ತ್ ಇಲ್ವೋಲೊ?

ಸರೋಜಕ್ಕ - ಅವಳು, ಇಂತ ಕಾರ್ಯಕ್ರಮಾದ್ ಮೇಲ್ ಇಂತ ಕಾರ್ಯಕ್ರಮ ಇರುತ್ತೆ ಏನು ಎತ್ತ ಅಂತ ಏಳೋಳು.

ತಿ - ಜತೇಲಿ ಸಿಂಗ್‌ಲೀಕ್ ನಂಗಿರೋನು ಅದ್ಯಾಕಂಗಾಡ್ತಾನೆ?

ಸ - ಅಂಗಾಡಾಕೆ ಅವುನ್ ಕರ್‍ಸವ್ರೆ.

ತಿ - ಮುಂದೆ ಕುಂತಿರೋರ್ ಯಾರು? ಅಗಾ ಆ ಸೆರ್‍ಗಗಿಳೆ ಬಿಟ್‌ಕಂಡಿರೋಳ್ ಯಾರು?

ಸ - ಅವ್ರು ಸೋಪ್ ಮಾರೊಳು, ಅವ್ರ ಪಕ್ಕ ಕೆಂಪ್‌ಗೆ ಮುದ್ದಾಗಿರೊ ಉಡ್ಗಾ...

ತಿ - ಗೊತ್ತಾತ್ ಬುಡು, ರಂಗೀಲ್‌ದಾಗ ಮಾಡ್ಯೆತೆ ಆ ಉಡ್ಗ, ಇವ್‌ನ್ಯಾರು ನಮ್ಮೂರ್ ದೊಡ್ ತಿಮ್ಮ ಇದಂಗವ್ನಲ್ಲ?

ಸ - ಕ್ರಿಕೇಟ್ ಆಟ ಆಡೋನು ಅವ್ನು.

ಸ-ಆ ಕೆಂಪ್ ಮೂತಿ ಮುದ್‌ಕವ್ನಲ್ಲ ಅವ್ನೆ ಉಡ್‌ಗಿರ್‌ನ್ನೆಲ್ಲ ಕರ್‍ಸಿ ಇದ್‌ನ್ನೆಲ್ಲ ಮಾಡೋನು. ಆ ಕಡೇಲಿರೋಳೆ ಅವನೆಂಡ್ರು.

ತಿ - ಅರ್ದಂಬರ್ದ ರವ್‌ಕೆ ಆಕ್ಕಂಡಿರೋರು ಯಾರು?

ಸ - ಅವ್ರು ಬ್ಯಾರೆ ದೇಸ್‌ದಿಂದ ಬಂದವ್ರು. ಅವ್ರ ಮಗ್‌ಲಲ್ಲಿ ಕುತ್ಕಂಡಿರೋನು ಯಂಡ್ದ ಯಾಪಾರ ಮಾಡ್ತಾನೆ. ಇವ್ರೆಲ್ಲುವೆ ಸೇರಿ, ಸುಂದ್ರಿಯಾರಂತ ತೀರ್ಮಾನ ಮಾಡ್ತಾರೆ.

ತಿ - ಅಲ್ಕಣಮ್ಮಿ, ಎಂಡ ಮಾರೋರು, ಸೋಪ್ ಮಾರೋರು, ಆಟ ಆಡೋರ್, ನೆಟ್‌ಗೆ ಬಟ್ಟೆ ಆಕಳ್‌ದೋರ್ ಏನ್ ತೀರ್ಮಾನ ಮಾಡ್ತಾರೆ?

ಸ - ನೋಡಿವಂತೆ ಕುಂತ್ಕಳೆ ಅಂದೆ.

ಎಲ್ಲದನ್ನು ಥೂ.... ಥು ಥು ಥು, ಇಸ್ಸಿ, ರಾಮರಾಮ, ಅಯ್ಯೊ ಶಿವ್ನೆ ಅಂತ ಉದ್ಗರಿಸ್ತಾ ನೋಡಿದ್ ತಿಮ್ಮಿ ಇಡಿ ಸ್ಪರ್ಧೆ ವ್ಯಾಖ್ಯಾನ ಮಾಡಿದ್ಲು.

ಥೂ - ಇವರ್ ಮಕ ನಾಯ್ ತಿಂದ್, ನರಿ ಉಚ್ಚೆ ಉಯ್ಯಾ, ಮಾನ ಮರ್ಯಾದೆ ಇಲ್ದ ಮುಂಡೆವು. ಅವ್‌ತೆಲ್ಲ ಸುಂದ್ರಿರಾ. ಕೊಕ್ರೆ ಅಂಗ್ ಕಾಲಾಕ್ಕಂಡು, ಒನಿತಾ ಬತ್ತರೆ. ಒಂದೆ ತರ್‌ಕೆ ನಡಿತವೆ, ಕುಂಡಿ, ಎದೆ ಕುಣಿಸ್ಕಂಡು, ಒಂದೆ ತರ್ಕೆ ನಿತ್ಕಂತವೆ, ಒಂದೆ ತರ್ಕೆ ನಗ್ತವೆ, ಒಳ್ಳೆ ಪಿಲಾಸ್ಟಿಕ್ ಗೊಂಬ್‌ಗಳಂಗೆ. ಈಟ್ ಗಾತ್ರದ್ ಸೊಂಟ ಏನಾರು ಒಂದ್ ಗಡ್ಗೆ ನೀರ್ ಮಡ್‌ಗಿರೆ ಮುರ್‍ದ್ ಎಲ್ಡ್ ತುಂಡಾಯ್ತದೆ ಅಷ್ಟೆ. ಇದೇನಮ್ಮಿ ಚಂದ ನಮ್ಮೂರ್ ಕರಿಯಕ್ಕನ್ ಮಗ್ಳು ನಂಜಿ ಎಂಗ್ ಅವಳೆ ಅಂತಿಯಾ? ಕೈ ತೊಳ್ಡ್ ಮುಟ್‌ಬೇಕ್ ನೋಡು ಅಂಗೆಯಾ. ಕುಡುಕ್ ಸೂಳೆ ಮಗ ಅವರಪ್ಪ ಎತ್ತಗೊ ಒದೆ ಒದಾ ಆಗ್ಗಿಂದುವೆ ಅವರವ್ವ, ಮನೆ, ಮಠ, ಎಲ್ಲನುವೆ ಎಂಗ್ ನಡ್ಸುತ್ತೆ ಅಂತ, ಇಂತ ಕೆಲ್ಸ್ ಆಗಲ್ಲ ಅನ್ನಾಕಿಲ್ಲ. ಬಂಗಾರ, ಬಂಗಾರ್‌ದಂತ ಉಡ್ಗಿ ಕಣೆ. ಗಟ್‌ಮುಟ್ಟಾಗವಳ್ಳೆ ಇವು ಅವೆ ತೋಡಿರೊಂದ್ ಸೌಟ ಮಾಂಸ್ ಬರಾಕಿಲ್ಲ. ಇರಾದನ್ನ ಇರಾಂಗಿಟ್‌ಕಳದ ಬುಟ್ಟು ಮ್ಯಾಕ್ ಎತ್ತರ್‌ಸ್ಕಂಡ, ಕುಂಡಿ ತಿರುವ್‌ಕ್ಕಂಡ ನಡ್ಯಾದು ಒಂದ್ ಚಂದ್‌ವೆ? ಮುಂದ್ಕೆ ಎಲ್ಲಾ ಬಗಾಲು ಇಂದ್‌ಕೆ ಒಂದ್ ವೈಲ್‌ಗಾಗವಷ್ಟ್ ಬಟ್ಟೆ ಎಳ್ಕಂಡ್ ತಿರ್‌ಗ್‌ತವೆ. ಎಷ್ಟ್ ಉಡ್ಗಿರ್‌ಗ್ ಲಂಗ, ಜಾಕೀಟ್ ಆಗಿರಾದು.

ಅಲ್ಲ ನೋಡಿದ್ದೆಲ್ಲವಾ ಬರಿ ಎದೆ, ಸೊಂಟೆ, ಕುಂಡಿನೆಯಾ, ಬುದ್‌ವಂತನ ಎಲ್ ಬಂತು ನಮ್ಮೂರಿನ್ ಕೆಂಪಿ ನೋಡಿದಿಯಾ? ಅದೆ ಸಣ್ಣರ್‌ಸನ್ ಮಗ್ಳು. ಒಂದ್ ಬೆಟ್‌ಗಾತ್ರಕೈತೆ. ಎಂತ ಚುರ್‌ಕು ಅಂತಿಯಾ? ಮನೆ ಮುಂದಿರೊ ಇಷ್ಟಗ್ಲ ಕೊಪ್ಪಾಗೆ ಸೂಜ್‌ಮಲ್ಗೆ ಕಾಕಡಮಲ್ಗೆ, ಕನ್‌ಕಾಂಬ್ರ ಗಿಡ ಅಕ್ಕಂಡವೈ. ಗಿಡಾನ ಎಷ್ಟ್ ಚೆಂದಾಗಿ ನೋಡ್ಕತಳೆ ಅಂತ, ಗಿಡಾದ್ ಗಿಡ್‌ವೆಲ್ಲ ಊವೆಯಾ. ಸಂಚೆ ಒತ್ಗೆ, ಕಿತ್ತು, ಉವ್ವ ಕಟ್ತಳೆ, ಎಂಗ್ ಕಟ್ತಳೆ ಅಂತಿಯಾ, ಬೆಳ್ಳ್ ಅಂಗ್ ಸರಸರ್ ಆಡ್ಸಿ, ಕಣ್ ಮುಚ್ ಕಣ್ ಬಿಡದ್ರೊಳ್ಗೆ ಒಂದ್ ಮಾರ್ ಉವ್ವ ಕಟ್ತಳೆ, ಆ ಊವ್ ಕಟ್ದ ದುಡ್ನೆ ಜಾಪಾನ ಮಾಡಿ ಒಂದ ಕರ್ಮ್ಯಾದನಾನೇ ತಂಗಂಬುಟ್ಳು. ಬುದ್‌ವಂತ್‌ತನಾ ಅಂದ್ರೆ ಇದು, ಇವ್ ಯಾವ್ ಸೀಮೆ ಬುದ್‌ವಂತ್ರೆ?

ಉಫ್ ಅಂದ್ರ ಉದ್ರೋಗೊಂಗ್ ಅವೆ ಏನಾರಾ ಸೊಂಟ ಬಗ್ಸಿ ಕೆಲ್ಸ ಮಾಡಾದುಂಟ ಇವು. ಮದ್ವೆ ಮಾಡ್ಕಂಡ್, ಮಕ್ಕೆತ್ತು ಸಂಸಾರ ಮಾಡಕಾಯ್ತದ ಇವ್‌ಕೆ ಎಂತ ಕಾಲ ಬಂತವ್ವ. ಆ ತಾಯ್ ಕೊಟ್ಟಿದ್ ಮೈಯಾ ಎಂಗೈತೊ ಅಂಗಟ್‌ಕಳದಾ ಬುಟ್ಟು, ಮೈ ಮ್ಯಾಗಿನ್ ಕೂದ್ಲೆಲ್ಲ ತರಿಸ್ಕಂಡ್, ಬಣ್ಣ ಬಳ್ಕಂಡ ಒಡಾಡ್‌ತ್ತವೆ. ಅಯ್ಯೊ ನಂಗ್ಯಾಕ್ ತಗಾ ಅದು, ತಾಯೇ ವನ್ನಾದೇವಿ, ಕಾಪಾಡು ತಾಯಿ ಅಂತ ತಲೆ ನೆಲ್‌ಕಿಟ್ಳು. ಒಟ್ಟೆ ತುಂಬಾ ಉಂಡು, ಮೈ ಮುರ್‍ದು ದುಡಿಯೋ ಜೀವ, ಒಂದೆ ಕ್ಷಣಕ್ಕೆ ಗೊರಕೆ ಹೊಡೆಯೋಕೆ ಶುರು ಮಾಡ್ತು. ●

ನಾಲ್ಕು ಹನಿಗವನಗಳು

1. ಮರೀಚಿಕೆಯ ಭ್ರಮೆ ತೊರೆದು
ಸಮುದ್ರದ ಬಳಿಗೆ ಹೋದೆ.
ನೀರು ಮೊಳಕಾಲ ಮಟ್ಟ ಮುಟ್ಟಲಿಲ್ಲ
ಕೆರೆ, ತೊರೆ, ಹಳ್ಳಗಳ
ಸಮೀಪಕ್ಕೆ ಏಕೆ ಸಾಗಲಿ?

2. ಎಲೆಯ ಮರೆಯಲ್ಲಿದ್ದೆ,
ನೆಮ್ಮದಿಯಾಗಿದ್ದೆ.
ಪ್ರಕಾಶಕ್ಕೆ ಒಡ್ಡಿಕೊಂಡ ಕೂಡಲೇ
ದೃಶ್ಯ ಬದಲಾಯಿಸಿತು.
ಈಗ,
ಸುತ್ತಮುತ್ತ ಹರಡಿಕೊಂಡಿದ್ದ
ಮೊಗ್ಗುಗಳು ಮುಳ್ಳಾಗಿವೆ,
ಹೂಗಳಿಗೆ ನನ್ನಲ್ಲಿ ಔದಾಸೀನ್ಯ,
ಕಾಯಿಗಳು ಕಿಸಿಯುತ್ತಿವೆ,
ಹಣ್ಣುಗಳು ತೆಪ್ಪಗಿವೆ.

3. ಗಾಜಿನಿಂದ ದೂರವಾಗುವುದು ಸುಲಭ
ನಿರಾತಂಕ ಕೂಡ.
ವಜ್ರವನ್ನು ತೊರೆಯುವುದೇ
ಘೋರ.

4. ಪ್ರಶ್ನೆಗಳಲ್ಲಿ ಹಲವು ಬಗೆ
ಸರಳ ಉತ್ತರ ಬಯಸುವಂಥವು,
ಸಂಕೀರ್ಣ ಉತ್ತರಕ್ಕೆ ಕಾದಿರುವಂಥವು,
ಉತ್ತರ ಇಲ್ಲದವು ಕೆಲವು,
ಉತ್ತರವೇ ಪ್ರಶ್ನೆಯಾಗುವಂಥವು ಕೆಲವು.

ಡಾ. ಎಚ್. ಎಸ್. ಸುಜಾತಾ

BOOK-POST
PRINTED MATTER

REGD NO. KRNA 271

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ,
ಕಾಡುಗೋಡಿ
ಬೆಂಗಳೂರು - 560 067